ಜನವರಿ 26 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1969
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಜಾತ್ರೆಯಲ್ಲಿ ನಡೆದ ಜಗಳದ ವೈಷಮ್ಯ ಭುಗಿಲೆದ್ದು ಯುವಕನನ್ನು

# ಬರ್ಬರವಾಗಿ ಕೊಚ್ಚಿ ಕೊಚ್ಚಿ ಕೊಲೆಗೈದ ಹಂತಕರು!





## ಕೈ ತುಂಬ ಸಾಲ ನೀಡಿ ಮಹಿಳೆಯರನ್ನು ಬಲಿ ಪಡೆದ ಮೈಕ್ರೋ ಫೈನಾನ್ಸ್!


## ಹೆಂಡತಿಗೆ ಗುಂಡಿಟ್ಟವನು ವಿಷ ಸೇವಿಸಿ ಆತ್ಮಹತ್ಯೆ!





## ಸಾಲ ಕೊಡದಿದ್ದಕ್ಕೆ ಕುರಿಗಾಯಿಯನ್ನು ಕೊಂದ!


ಬೆಟ್ಟದ ಮೇಲಿಂದ ಮಂಚನಬೆಲೆ ಡ್ಯಾಮ್


ಕರಿಬೆಟ್ಟ


ಬೆಟ್ಟದ ಮೇಲಿರುವ ಕೋಟೆ

# ಸಾವನದುರ್ಗ ಬೆಟ್ಟಕ್ಕೆ ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆಗೆ ಚಾರಣಿಗರ ಆಕ್ರೋಶ!

**ರಾಮನಗರ**

✍ ಶಾಂತರಾಜು ಜಿ. ಕಲ್ಲಹಳ್ಳಿ

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನಲ್ಲಿಯೇ ಅತ್ಯಂತ ಸುಪ್ರಸಿದ್ಧ ಪ್ರವಾಸಿಗರ ತಾಣ ಎಂದೇ ಖ್ಯಾತಿ ಹೊಂದಿರುವ ಸಾವನದುರ್ಗ ಬೆಟ್ಟ. ಈ ಬೆಟ್ಟಕ್ಕೆ ದಿನಿತ್ಯಲೂ ಬೆಂಗಳೂರು, ರಾಮನಗರ, ಕುಣಿಗಲ್, ಕನಕಪುರ ಹಾಗೂ ರಾಜ್ಯದ್ಲೆಡೆಯಿಂದ ಪ್ರವಾಸಿಗರು, ಚಾರಣಿಗರು,


ಬೆಟ್ಟ ಹತ್ತುತ್ತಿರುವುದು

ಪರಿಸರ ಪ್ರೇಮಿಗಳು ಬಂದು ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಿದ್ದಾರೆ. ಇಲ್ಲಿನ ಪರಿಸರ ಎಲ್ಲರನ್ನೂ ಕೈಬೀಸಿ ಸೆಳೆಯುತ್ತಿದೆ.

ಪ್ರಕೃತಿ ಸೌಂದರ್ಯವನ್ನೇ ಹೊದ್ದುಕೊಂಡಿರುವ ಈ ಸಾವನದುರ್ಗ ಬೆಟ್ಟ ಸುಮಾರು ಏಳು ಸಾವಿರ ಎಕರೆ ಸಂರಕ್ಷಿತ ಅರಣ್ಯಪ್ರದೇಶ ಹೊಂದಿದೆ. ಈ ಅಭಯಾರಣ್ಯದಲ್ಲಿ ಏಷ್ಯಾ ಖಂಡದಲ್ಲೇ ಅತಿ ಎತ್ತರದ ಎರಡು ಬೃಹತವ ಏಕಶಿಲಾ ಬೆಟ್ಟಗಳಿವೆ. ಒಂದು ಕರಿ ಬೆಟ್ಟ ಮತ್ತೊಂದು ಬಿಳಿ ಬೆಟ್ಟವೆಂದೇ ಪ್ರಖ್ಯಾತಿಗೊಂಡಿದೆ. ಮುಗಿಲೆತ್ತರಕ್ಕೆ ಇರುವ ಈ ಏಕಶಿಲಾ ಬೆಟ್ಟವನ್ನೇರಿ ಅಲ್ಲಿ ಪ್ರಕೃತಿಯಿಂದ ಬರುವ ತಂಗಾಳಿಯ ವಾತಾವರಣ ನೋಡಲು ಮತ್ತು ಸವಿಯಲು ಚಾರಣ ಪ್ರಿಯರು ಆಗಮಿಸುವರು. ಆದರೆ ನಡುರಾತ್ರಿ ಕಾಡಿನೊಳಗೆ ನುಗ್ಗಿ ಮೋಜುಮಸ್ತಿ ಮಾಡಿಕೊಂಡು ಜೋರಾಗಿ ಚೀರಾಟ, ಕೂಗಾಟ ಮಾಡುತ್ತಾ ಕಾಡುಪ್ರಾಮಿಗಳಿಗೆ ತೊಂದರೆ ಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದರೆ ತಪ್ಪಾಗಲಾರದು.

ಮಾಗಡಿ ಕ್ಷೇತ್ರದ ಶಾಸಕರಾದ ಹೆಚ್.ಸಿ. ಬಾಲಕೃಷ್ಣರವರು ಈ ಸಾವನದುರ್ಗದ ವೀಕ್ಷಣೆಗೆ ರಾಜ್ಯಾದ್ಯಂತ ಎಲ್ಲೆಡೆಯಿಂದ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಬೆಟ್ಟಕ್ಕೆ ರೋಪ್‌ವೇ ಮಾಡುವ ಚಿಂತನೆ ಮಾಡಿದ್ದೇವೆ. ಸದ್ಯದಲ್ಲೇ ಪ್ರವಾಸೋದ್ಯಮ ಇಲಾಖೆಯ ಸಚಿವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ.

ಸಾವನದುರ್ಗ ಬೆಟ್ಟ ಕಾಯ್ದಿಟ್ಟ ಅರಣ್ಯ ಪ್ರದೇಶ


ಬೆಟ್ಟದ ಮೇಲಿರುವ ಕೊಣಾ

ವಾಗಿದೆ. ಗಿಡಮರಗಳ ಸಂರಕ್ಷಣೆ ಮಾಡಲಾಗಿದೆ. ಕಾಡಿನೊಳಗೆ ಅನುಮತಿ ಇಲ್ಲದೆ ಪ್ರವೇಶ ಮಾಡುವಂತಿಲ್ಲ. ಸಾವನದುರ್ಗ ಬೆಟ್ಟ ಏರಲು ವೀಕೆಂಡ್‌ನಲ್ಲಿ 300 ರೂ. ಬೇರೆ ದಿನಗಳಲ್ಲಿ 400 ರೂ. ಆನ್‌ಲೈನ್‌ನಲ್ಲಿ ಮುಂಗಡ ಪಾವತಿಸಬೇಕು. ವೀಕೆಂಡ್‌ಗಳಲ್ಲಿ 300 ಮಂದಿಗೆ ಮಾತ್ರ ಅವಕಾಶವಿರುತ್ತದೆ. ಚಾರಣಿಗರು ಬೆಟ್ಟದ ಮೇಲೆ ಸಲ್ಲದ ಸಾಹಸ ಮಾಡಿದರೆ ಕಾನೂನುಬದ್ಧವಾಗಿ ಶಿಸ್ತಿನ ಕ್ರಮ ಜರುಗಿಸಲಾಗುವುದು ಮತ್ತು ಸ್ಥಳೀಯರಿಗೆ ಉಚಿತ ಪ್ರವೇಶ ನೀಡಬೇಕೆಂಬ ಬೇಡಿಕೆಯಿದೆ. ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಿಕೊಡಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ಇಲ್ಲಿನ ವಲಯ ಅರಣ್ಯ ಅಧಿಕಾರಿಯಾದ ಚೈತ್ರಾರವರು ಪ್ರತಿಕ್ರಯಿಸಿದ್ದಾರೆ.

ಸಾವನದುರ್ಗ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಹತ್ತಾರು ಕಾಡಾನೆಗಳು ಬೀಡುಬಿಟ್ಟಿವೆ. ಹುಲಿ, ಚಿರತೆ, ಕರಡಿ, ನರಿ, ತೋಳ, ಜಿಂಕೆ ಸೇರಿದಂತೆ ವಿವಿಧ ಜಾತಿಯ ಪಕ್ಷಿ ಸಂಕುಲಗಳು ಇಲ್ಲಿ ನೆಲೆಸಿವೆ. ಇಂತಹ ಪ್ರಕೃತಿದತ್ತ ಸಂರಕ್ಷಿತ ಅರಣ್ಯ ಪ್ರದೇಶದ ನಡುವೆ ಚಾರಣದ ಹೆಸರಿನಲ್ಲಿ ಮೋಜುಮಸ್ತಿ ಮಾಡಿಕೊಂಡು ಸುಂದರವಾದ ಪರಿಸರಕ್ಕೆ ಮತ್ತು ಕಾಡುಪ್ರಾಣಿಗಳಿಗೆ, ಪಕ್ಷಿಗಳಿಗೆ ಧಕ್ಕೆ ತರುವುದಕ್ಕೆ ಬ್ರೇಕ್ ಹಾಕುವ ಪ್ರಯತ್ನವೇ ಆನ್‌ಲೈನ್‌ನಲ್ಲಿ 300 ರೂಪಾಯಿ ಪಾವತಿಸಿ ಟಿಕೆಟ್ ಕಾಯ್ದಿರಿಸುವ ನಿಯಮವಾಗಿದೆ. ಅರಣ್ಯ ಇಲಾಖೆ ಪ್ರತಿ 10 ಮಂದಿಗೆ ಒಬ್ಬರಂತೆ ಗೈಡ್‌ಗಳನ್ನು ನೇಮಕ ಮಾಡಿ ಜತೆಯಲ್ಲಿ ಕಳುಹಿಸಿಕೊಟ್ಟು ಬೆಟ್ಟದ ಇತಿಹಾಸ ತಿಳಿಸಿಕೊಡುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಆದರೆ ಅವರಿಗೆ ಸರ್ಕಾರ ಮೂಲ ಸೌಕರ್ಯ ಕಲ್ಪಿಸಬೇಕೆಂಬ ಒತ್ತಾಯ ಇಲ್ಲಿಗೆ ಬರುವ ಚಾರಣಿಗರದ್ದಾಗಿದೆ.

ಅದರಲ್ಲೂ ಬಹುಮುಖ್ಯವಾಗಿ ಕಾಡಂಚಿನ ನಿವಾಸಿಗಳಿಗೆ ಅರಣ್ಯ ಅಧಿಕಾರಿಗಳು ತೊಂದರೆ ಕೊಡಬಾರದು. ನಗರ ಪ್ರದೇಶದಿಂದ ಬರುವ ಯುವಕರು ಕಾಡಿನಲ್ಲಿಯೇ ಕುಳಿತು ಮೋಜು ಮಸ್ತಿ ಮಾಡಲು ನಿರ್ಬಂಧ ವಿಧಿಸುವುದು ಸಂತಸದ ಸಂಗತಿ ಎಂದು ಸ್ಥಳೀಯ ಪ್ರಗತಿ ಪರ ಸಂಘಟನೆಗಳ ಮುಖಂಡರುಗಳು ಅಭಿಪ್ರಾಯ ಪಡುತ್ತಾರೆ.

ಸಾವನದುರ್ಗ ಬೆಟ್ಟದಿಂದ ಸ್ವಲ್ಪ ದೂರದಲ್ಲೇ ಇರುವ ಮಂಚನಬೆಲೆ ಜಲಾಶಯವಿದ್ದು, ಅಕ್ರಮವಾಗಿ ಇಲ್ಲಿನ ಪ್ರದೇಶದ ಸುತ್ತಮುತ್ತಲ ಪ್ರದೇಶಗಳಲ್ಲಿ ರೆಸಾರ್ಟ್‌ಗಳು, ಬೌಟಿಂಗ್ ನಡೆಸಲಾಗುತ್ತಿದೆ. ಈ ಸ್ಥಳಕ್ಕೂ ಅತಿಹೆಚ್ಚು ಪ್ರವಾಸಿಗರು ಮೋಜುಮಸ್ತಿಗೆಂದೇ ಬರುವವರು ಈ ಜಲಾಶಯದಲ್ಲಿ ಈಜಲು ಹೋಗಿ ಪ್ರಾಣ ಕಳೆದುಕೊಂಡಿರುವ ಉದಾ



ನರಸಿಂಹಸ್ವಾಮಿ ದೇವಸ್ಥಾನ

ಹರಣೆಗಳು ಬಹಳಷ್ಟಿವೆ. ಹೀಗಿದ್ದರೂ ಸಹ ಇದಕ್ಕೆಲ್ಲ ಕಡಿವಾಣ ಹಾಕಲು ಅಧಿಕಾರಿಗಳು ಮುಂದಾಗುತ್ತಿಲ್ಲ ಎಂಬುದು ಪರಿಸರ ಪ್ರಿಯರು ಮತ್ತು ಸ್ಥಳೀಯ ಸಾರ್ವಜನಿಕರ ಬೇಸರದ ಮಾತಾಗಿದೆ. ಸಾವನದುರ್ಗದಲ್ಲಿ ಸುಂದರವಾದ ವನ್ಯಧಾಮವಿದೆ. ಈ ಹಿಂದೆ ಅಲ್ಲಿ ಪ್ರಾಣಪಕ್ಷಿಗಳಿದ್ದವು. ಈಗ ಇಲ್ಲಿ ಯಾವುದೇ ಪ್ರಾಣಿಪಕ್ಷಿಗಳನ್ನು ಸಂರಕ್ಷಿಸಿಲ್ಲ. ಕೇವಲ ಸಸಿ ಬೆಳೆಸುವ ಕೆಲಸ ನಡೆಯುತ್ತಿದೆ. ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಜಂಟಿಯಾಗಿ ಪ್ರಾಣಿಪಕ್ಷಿಗಳ ರಕ್ಷಣೆ, ಮಕ್ಕಳ ಆಟಿಕೆಗಳನ್ನು ಅಳವಡಿಸಿ ಅದಕ್ಕೆ ಇಂತಿಷ್ಟು ಶುಲ್ಕ ನಿಗದಿ ಮಾಡಿದರೆ ಪ್ರವಾಸಿಗರನ್ನು ಮತ್ತಷ್ಟು ಆಕರ್ಷಿಸಬಹುದಾಗಿದೆ. ಅಭಯ ಅರಣ್ಯವಾಗಿರುವುದರಿಂದ ಅನುಮತಿ ಇಲ್ಲದೆ ಕಾಡು ಪ್ರವೇಶಿಸುವಂತಿಲ್ಲ. ಈ ಬಗ್ಗೆ ಅರಣ್ಯ ಇಲಾಖೆ ಅಲ್ಲಲ್ಲಿ ಸೂಚನಾ ಫಲಕ ಹಾಕಬೇಕಿದೆ. ಪೊಲೀಸರು ಚೆಕ್‌ಪೋಸ್ಟ್ ತೆರೆದು ರಕ್ಷಣೆ ನೀಡುವ ಜೊತೆ ರಾತ್ರಿ ಪ್ರವೇಶಕ್ಕೆ ನಿರ್ಬಂಧ ವಿಧಿಸಬೇಕಿದೆ. ಆದರೆ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರ ಕಾವಲು ಮಾಡಲಾಗುತ್ತಿಲ್ಲ. ಈ ಬಗ್ಗೆ ಉನ್ನತ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಸದ್ಯದಲ್ಲೇ


ನೋಂದಾಯಿಸಿಕೊಳ್ಳುವ ಅರಣ್ಯ ಸಿಬ್ಬಂದಿ

ಕೊರತೆ ನೀಗಿಸುವ ಮೂಲಕ ಠಾಣೆಯ ಸಮಸ್ಯೆ ಪರಿಹರಿಸುವ ಭರವಸೆ ಕೊಟ್ಟಿದ್ದಾರೆ. ಆದಷ್ಟು ಬೇಗ ಚೆಕ್‌ಪೋಸ್ಟ್ ತೆರೆಯಲಾಗುವುದು ಎಂದು ಮಾಗಡಿ ಪೊಲೀಸ್ ಇನ್ಸ್‌ಪೆಕ್ಟರ್ ಗಿರಿರಾಜ್ ತಿಳಿಸುತ್ತಾರೆ.

ಮತ್ತೊಂದೆಡೆ ಈ ಸಾವನದುರ್ಗ ಬೆಟ್ಟದಲ್ಲಿ ಶ್ರೀ ವೀರಭದ್ರಸ್ವಾಮಿ ಮತ್ತು ಭದ್ರಕಾಳಿಯನ್ನು ನೆಲೆಸಿದ್ದಾರೆ. ಪುರಾತನ ಕಾಲದಲ್ಲಿ ನೆಲೆಗೊಂಡಿರುವ ಈ ಸ್ವಾಮಿಯ ಕೃಪೆಗೆ ಪಾತ್ರರಾಗಿ ರಾಮನಗರ ಜಿಲ್ಲೆಯಾದ್ಯಂತ ಬರುವ ಭಕ್ತಾದಿಗಳಲ್ಲಿ ಕೆಲವರು ಸ್ವಾಮಿಯ ಸೇವೆ ಮಾಡಲು ಕುಟುಂಬ ಸಮೇತರಾಗಿ ಆಗಮಿಸಿ ಸೇವೆ ಸಲ್ಲಿಸಿ ಪುನೀತರಾಗುತ್ತಾರೆ. ಈ ದೇವರ ಇತಿಹಾಸವೆಂದರೆ ಕೆಲವು ಕಾರಣಗಳಿಂದ ಈ ಸ್ವಾಮಿಯ ಅರ್ಚಕರು ಊರು ಬಿಡುವ ಪರಿಸ್ಥಿತಿ ಎದುರಾಗಿ, ಊರು ಬಿಟ್ಟು ಬಂದ ಅರ್ಚಕರ ಜೊತೆಯಲ್ಲಿ ಶ್ರೀ ವೀರಭದ್ರಸ್ವಾಮಿ ಬಂದು ರಾಮನಗರ ಕನಕಪುರ ರಸ್ತೆಯ ಗಾಣಾಳು ಗ್ರಾಮದಲ್ಲಿ ತಂಗಿರುವ ಸ್ಥಳದಲ್ಲಿ ದೇವಾಲಯ ನಿರ್ಮಾಣವಾಗಿದೆ. ಹಾಗೆಯೇ ಮುಂದೆ ಸಾಗಿದ ಅರ್ಚಕರ ಕುಟುಂಬ ವರ್ಗ ಕನಕಪುರದಿಂದ ಮೈಸೂರು ರಸ್ತೆಯ ಶಿವನಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿದ್ದು, ನಂತರದ ದಿನಗಳಲ್ಲಿ ಮೈಸೂರು ಮಹಾರಾಜರು ಈ ಸ್ಥಳಕ್ಕೆ ಬಂದು ಪೂಜೆ ಸಲ್ಲಿಸಿ ಕೆಲವು ವಿಚಾರಗಳು ಮಹಾರಾಜರಿಗೆ ಈಡೇರಿದ ನಂತರ ರಾಜರು ಈ ಸ್ವಾಮಿಯ ಹೆಸರಿಗೆ ಸುಮಾರು 60ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಕೊಡುಗೆಯಾಗಿ ನೀಡಿರುವ ಉದಾಹರಣೆಗಳುಂಟು. ಏನೇ ಆದರೂ ಇಲ್ಲಿಗೆ ಬರುವ ಭಕ್ತಾದಿಗಳಿಗೆ ಕಷ್ಟಕಾರ್ಪಣ್ಯಗಳನ್ನು ಈಡೇರಿಸುವ ಶ್ರೀ ವೀರಭದ್ರಸ್ವಾಮಿಯ ಜಾತ್ರಾ ಮಹೋತ್ಸವವು ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯಲಿದ್ದು ಲಕ್ಷಾಂತರ ಭಕ್ತರು ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ.


ಬೆಟ್ಟದ ಮೇಲಿಂದ ಕಾಣುವ ಸುಂದರ ದೃಶ್ಯ



ಸಾವನದುರ್ಗ ಏಕಾಶೀಲಾ ಬೆಟ್ಟ


ವೀರಭದ್ರೇಶ್ವಸ್ವಾಮಿ ದೇವಾಲಯದ ನೋಟ



ಹತ್ಯೆಯಾದ ವಿನೋದ

# ಹೆಂಡತಿಗೆ ಗುಂಡಿಟ್ಟವನು ವಿಷ ಸೇವಿಸಿ ಆತ್ಮಹತ್ಯೆ!



ಆರೋಪಿ ರಾಮಚಂದ್ರ ಗೌಡ

**ಕುಡಿತ ಎನ್ನುವುದು ವ್ಯಕ್ತಿಯ ಆರೋಗ್ಯವನ್ನಷ್ಟೆ ಹಾಳು ಮಾಡುವುದಿಲ್ಲ. ಅದು ವ್ಯಕ್ತಿತ್ವವನ್ನು, ಸಂಸಾರವನ್ನು ಕೂಡ ಹಾಳು ಮಾಡಿಬಿಡುತ್ತದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವ ವಿಚಾರವೇ. ಆದರೆ ಕುಡಿದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ ವ್ಯಕ್ತಿಯೊಬ್ಬ ಕೊನೆಗೆ ಬಂದೂಕು ತೆಗೆದು ಮಗನಿಗೆ ಗುರಿ ಇಟ್ಟಿದ್ದನು. ಆದರೆ ಅದನ್ನು ತಪ್ಪಿಸಲು ಹೋದ ವೇಳೆ ಅದು ಹೆಂಡತಿ ಎದೆಗೆ ನುಗ್ಗಿದ್ದರಿಂದ ಆಕೆ ಮೃತಪಟ್ಟಿದ್ದು, ಇದು ಗೊತ್ತಾಗುತ್ತಿದ್ದಂತೆಯೇ ಆತನೂ ರಬ್ಬರ್‌ಗೆ ಹಾಕಲು ತಂದಿದ್ದ ರಾಸಾಯನಿಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇಂತಹದೊಂದು ಹೃದಯ ವಿದ್ರಾವಕ ಘಟನೆ ನಡೆದಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆಯ ಕೋಡಿಮಜಲಿನಲ್ಲಿ....**

**ದಕ್ಷಿಣ ಕನ್ನಡ**

✍ಬಿ.ಎಂ. ಲವಕುಮಾರ್

ಕುಡಿತದಿಂದ ಏನೆಲ್ಲ ಆಗಬಹುದು ಎಂಬುದಕ್ಕೆ ಇದೊಂದು ಘಟನೆ ಸಾಕ್ಷಿಯಾಗಿದೆ. ಹಾಗೆಂದು ಕುಡಿಯುವವರೆಲ್ಲರೂ ಇಂತಹ ದುಷ್ಕೃತ್ಯಕ್ಕೆ ಕೈಹಾಕುತ್ತಾರೆ ಎಂದಲ್ಲ. ಇವತ್ತು ಕುಡಿಯುವವರ ಸಂಖ್ಯೆ ಹೆಚ್ಚಾಗಿದೆ. ಖುಷಿ, ಸಂತಸಕ್ಕಾಗಿ ಶುರುವಾಗುವ ಕುಡಿತ ದಿನ ಕಳೆದಂತೆ ಚಟವಾಗಿ ಪರಿಣಮಿಸಲಾರಂಭಿಸುತ್ತದೆ. ಹೇಗಾದರೂ ಮಾಡಿ ಕುಡಿಯಬೇಕೆಂದುಕೊಳ್ಳುವ ವ್ಯಕ್ತಿ ಕುಡಿಯುವುದರಲ್ಲಿಯೇ ಕಳೆದು ಹೋಗುತ್ತಾನೆ. ಕುಡಿತಕ್ಕಾಗಿ ಎಲ್ಲಿಂದಾದರೂ ಹಣವನ್ನು ತಂದು ಕಂಠಮಟ್ಟ ಕುಡಿದು ಖುಷಿ ಪಡುತ್ತಾನೆ. ಅಷ್ಟೇ ಅಲ್ಲದೆ ಕುಡಿತಕ್ಕಾಗಿ ಸಾಲ ಮಾಡಿ ಎಲ್ಲವನ್ನು ಕಳೆದುಕೊಂಡು ಹುಚ್ಚನಾಗುತ್ತಾನೆ. ಆದರೆ ಅವನನ್ನು ನಂಬಿದ ಕುಟುಂಬ ಬೀದಿ ಪಾಲಾಗುತ್ತದೆ.

ಇವತ್ತು ಸರ್ಕಾರಗಳು ಕೂಡ ಕುಡುಕರಿಂದ ಹಣ ಸಂಪಾದಿಸುವ ಮಟ್ಟಕ್ಕೆ ಇಳಿದಿವೆ. ಮದ್ಯಕ್ಕೆ ಎಷ್ಟೇ ಹಣ ಹೆಚ್ಚು ಮಾಡಿದರೂ ಯಾರು ಕೇಳಲ್ಲ ಎಂಬ ಕಾರಣಕ್ಕೆ ಪ್ರತಿವರ್ಷವೂ ಮದ್ಯದ ಬೆಲೆ ಹೆಚ್ಚಿಸಿಕೊಂಡೇ ಹೋಗುತ್ತಿದ್ದಾರೆ. ಮದ್ಯದ ಬೆಲೆ ದುಬಾರಿಯಾಯಿತು ನಾಳೆಯಿಂದ ನಾನು ಕುಡಿಯಲ್ಲ ಎಂದು ಕುಡುಕರು ಪ್ರತಿಜ್ಞೆ ಮಾಡುವುದಿಲ್ಲ ಎಂಬುದು ಸರ್ಕಾರಕ್ಕೂ ಗೊತ್ತಿದೆ. ಹೀಗಾಗಿ ಮದ್ಯದ ಬೆಲೆ ಜಾಸ್ತಿ ಮಾಡಿ ಸರ್ಕಾರ ತಿಜೋರಿ ತುಂಬಿಸುವ ಕೆಲಸ ಮಾಡುತ್ತಿದೆ. ಇವತ್ತು ಶ್ರೀಮಂತರು ಮದ್ಯವನ್ನು ಮೋಜು ಮಸ್ತಿಗಾಗಿ ಸೇವಿಸಿದರೆ, ಬಡವರು ಹಗಲಿಡೀ ಮೈಮುರಿದು ದುಡಿದ ಸುಸ್ತು ಕಡಿಮೆ ಮಾಡಿಕೊಳ್ಳಲು ಕುಡಿಯುತ್ತಾರೆ.

ಒಟ್ಟಾರೆ ಯಾವುದೇ ಬಾರ್, ವೈನ್‌ಶಾಪ್‌ಗಳಿರಲಿ ಅಲ್ಲಿ ಕುಡುಕರಿಲ್ಲದೆ ಖಾಲಿಯಂತು ಹೊಡೆಯುವುದಿಲ್ಲ. ಆದರೆ ಮದ್ಯದಂಗಡಿಯಲ್ಲಿ ಹೆಂಡ ಕುಡಿಯುವವರಲ್ಲಿ ಹತ್ತಾರು ಬಗೆಯ ಜನ ಇರುತ್ತಾರೆ. ಅವರ ಪೈಕಿ ಕೆಲವರಂತು ಕುಡಿದ ಬಳಿಕ ರಸ್ತೆಯಲ್ಲಿ ಬೀಳಬೇಕುಅಥವಾ ಯಾರೊಂದಿಗಾದರೂ ಜಗಳ ತೆಗೆಯಬೇಕು. ಯಾರು ಸಿಕ್ಕಿಲ್ಲಾಂದ್ರೆ, ಮನೆಯವರೊಂದಿಗೆ ಜಗಳ ತೆಗೆದು ಮನೆಯನ್ನು ರಣರಂಗ ಮಾಡುವ ತನಕ ಅವರಿಗೆ ನೆಮ್ಮದಿಯಿರುವುದಿಲ್ಲ. ಇಂತಹ ವ್ಯಕ್ತಿತ್ವದವರು ಬೇಕಾದಷ್ಟಿದ್ದು, ಇವರು ಮಹಾನ್ ಅಪಾಯಕಾರಿಗಳಾಗಿರುತ್ತಾರೆ. ಇಂತಹವರೊಂದಿಗೆ ಬದುಕು ಕಟ್ಟಿಕೊಂಡ ಹೆಣ್ಣು ಮಕ್ಕಳ ಸ್ಥಿತಿ ಅಯೋಮಯವಾಗಿರುತ್ತದೆ.



ಹೆಣವಾದ ಗಂಡ - ಹೆಂಡತಿ

ಕುಡುಕರೊಂದಿಗೆ ಹೆಣಗಾಡುವ ಹೆಚ್ಚಿನ ಹೆಣ್ಣು ಮಕ್ಕಳು ತಮ್ಮ ಮಕ್ಕಳಿಗಾಗಿ ಬದುಕುತ್ತಿರುತ್ತಾರೆ. ಗಂಡ ಹೇಗಿಯೇ ಇರಲಿ, ಮಕ್ಕಳನ್ನು ಸರಿದಾರಿಗೆ ತರೋಣ ಅವರಿಗಾಗಿ ಬದುಕೋಣ ಎಂದು ಗಂಡ ನೀಡುವ ಎಲ್ಲ ಕಷ್ಟ, ನೋವು, ಅವಮಾನಗಳನ್ನೆಲ್ಲ ಸಹಿಸಿಕೊಂಡು ಬದುಕುತ್ತಾರೆ. ಇವತ್ತು ಹೀಗೆಯೇ ಕುಡುಕ ಗಂಡನೊಂದಿಗೆ ಹೆಣಗಾಡಿಕೊಂಡು ಬಂದಿದ್ದ ಹೆಂಗಸು ಮಕ್ಕಳು ಬೆಳೆದು ಬದುಕು ಕಟ್ಟಿಕೊಳ್ಳುವಾಗಲೇ ಕುಡುಕ ಗಂಡನ ಗುಂಡೇಟಿಗೆ ಬಲಿಯಾಗಿದ್ದಾಳೆ.



ಎಸ್ಪಿ ಎನ್. ಯತೀಶ್

ಇಲ್ಲಿ ಗುಂಡು ಹಾರಿಸಿದ ಕುಡುಕ ಗಂಡನಿಗೆ ತಾನು ಮಾಡಿದ್ದು ತಪ್ಪೆಂದು ಗೊತ್ತಾಗುತ್ತಿದ್ದಂತೆಯೇ ವಿಷ ಸೇವಿಸಿ ಸತ್ತಿದ್ದಾನೆ. ಆದರೆ ಆತ ಸತ್ತಿದ್ದರೆ ಬಹುಶಃ ಹೆಚ್ಚಿನವರು ಸಂಸಾರಕ್ಕೂ, ಭೂಮಿಗೂ ಭಾರವಾಗಿದ್ದ ಆತ ಹೋಗಲಿ ಎಂದು ಸುಮ್ಮನೆ ಇದ್ದು ಬಿಡಬಹುದಿತ್ತು. ಆದರೆ ಆತ ಹೆಂಡತಿಯನ್ನು ಬಲಿ ಪಡೆದು ತಾನು ಸತ್ತಿದ್ದಾನೆ. ಹೀಗೆ ಮಾಡುವ ಮೂಲಕ ಸುತ್ತಲ ಜನರ ಹಿಡಿಶಾಪಕ್ಕೆ ಗುರಿಯಾಗಿದ್ದಾನೆ. ಅಷ್ಟೇ ಅಲ್ಲದೆ ವೃದ್ಧ ತಂದೆ ತಾಯಿಗೆ ಮತ್ತು ಮಕ್ಕಳಿಗೆ ಆಸರೆ ಇಲ್ಲದಂತೆ ಮಾಡಿ ಹೋಗಿದ್ದಾನೆ.



ಕೃತ್ಯಕ್ಕೆ ಬಳಸಿದ ಕೋವಿ

ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಕೋಡಿಮಜಲು ಗ್ರಾಮದಲ್ಲಿ ನಡೆದ ಈ ಘಟನೆ ಎಲ್ಲರನ್ನು ಬೆಚ್ಚಿ ಬೀಳುವಂತೆ ಮಾಡಿದೆ. ಹಾಗೆಯೇ ಗ್ರಾಮದಲ್ಲಿ ಶೋಕದ ವಾತಾವರಣವನ್ನು ಸೃಷ್ಟಿ ಮಾಡಿದೆ. ಎಲ್ಲರ ಬಾಯಿಯಲ್ಲಿ ಛೆ! ಹೀಗಾಗ ಬಾರದಿತ್ತು ಎಂಬ ನೋವು ತುಂಬಿದ ಉದ್ಗಾರ ಹೊರ ಬರುತ್ತಿದೆ.

ಇದಕ್ಕೆ ಕಾರಣವಾಗಿರುವುದು ಕೋಡಿಮಜಲು ಗ್ರಾಮದ ನಿವಾಸಿ ಕೃಷಿಕ ರಾಮಚಂದ್ರ ಗೌಡ(54) ಅವರ ಕುಡಿತ ಮತ್ತು ಆ ಕುಡಿತದ ಮತ್ತಿನಲ್ಲಿ ನಡೆದು ಹೋದ ದುರಂತ.

ಒಂದು ವೇಳೆ ಕುಡಿತಕ್ಕೆ ದಾಸನಾಗದೆ, ಒಂದೊಳ್ಳೆಯ ಬುದ್ದಿಯನ್ನು ಬೆಳೆಸಿಕೊಂಡಿದ್ದರೆ ಇವತ್ತು ನೆಮ್ಮದಿಯಿಂದ ಬದುಕ ಬಹುದಿತ್ತು. ಜತೆಗೆ ದುರಂತ ಕಥೆಗೆ ಕಥಾ ನಾಯಕನೂ ಆಗುತ್ತಿರಲಿಲ್ಲ. ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಮೈಮುರಿದು ಕೆಲಸ ಮಾಡುವ ಬಹುತೇಕ ಕೃಷಿಕರು ರಾತ್ರಿಯಾಗುತ್ತಿದ್ದಂತೆಯೇ ಸ್ನಾನ ಮಾಡಿ ಸ್ವಲ್ಪ ಕುಡಿದು ಹೊಟ್ಟೆ ತುಂಬಾ ಊಟ ಮಾಡಿ ನೆಮ್ಮದಿಯಾಗಿ ಮಲಗುತ್ತಾರೆ. ಆದರೆ ರಾಮಚಂದ್ರ ಗೌಡ ಮಾತ್ರ ಹಾಗಿರಲಿಲ್ಲ. ಕುಡಿದ ಮೇಲೆ ಮನೆಯವರೊಂದಿಗೆ ಜಗಳ ತೆಗೆಯದಿದ್ದರೆ ಕುಡಿದ ಹೆಂಡ ಬಿರಿಯುತ್ತಿರಲಿಲ್ಲ ಹಾಗೆಯೇ ತಿಂದ ಅನ್ನವೂ ಕರಗುತ್ತಿರಲಿಲ್ಲ.

ರಾಮಚಂದ್ರ ಗೌಡಗೆ ಸುಮಾರು ಐದು ಎಕರೆ ಆಸ್ತಿಯಿತ್ತು. ಇದರಲ್ಲಿ ಅಡಿಕೆ ತೆಂಗು ಬೆಳೆಯುತ್ತಿದ್ದನು. ಹೆಂಡತಿ ವಿನೋದ(43) ಮತ್ತು ಪ್ರಶಾಂತ, ನಿಶಾಂತ, ರಂಜಿತ್ ಎಂಬ ಮೂರು ಜನ ಗಂಡು ಮಕ್ಕಳಿದ್ದರು. ಅಷ್ಟೇ ಅಲ್ಲದೆ ಆತನಿಗೆ ವೃದ್ಧ ತಂದೆ ತಾಯಿಯೂ ಇದ್ದರು. ಎಲ್ಲರೂ ತೋಟದಲ್ಲಿ ಕೃಷಿಗೆ ಸಹಕರಿಸುತ್ತಿದ್ದರಿಂದ ಆರ್ಥಿಕವಾಗಿ ಯಾವುದೇ ತೊಂದರೆಯಿರಲಿಲ್ಲ. ತೋಟವಿದ್ದ ಕಾರಣ ಕಾಡು ಪ್ರಾಣಿಗಳ ಹಾವಳಿ ಮತ್ತು ಪ್ರತ್ಯೇಕ ಮನೆಯಾದ ಕಾರಣ ಕಳ್ಳಕಾಕರ ಭಯವಿದ್ದುದರಿಂದ ತಮ್ಮ ಸುರಕ್ಷತೆಗಾಗಿ ಇವರು ಗನ್ ಲೈಸನ್ಸ್ ಮಾಡಿಸಿ ಕೋವಿಯನ್ನು ಖರೀದಿಸಿ ಇಟ್ಟುಕೊಂಡಿದ್ದರು. ಆದರೆ ಇತ್ತೀಚೆಗೆ ರಾಮಚಂದ್ರ ಗೌಡ ಕುಡಿದ ಬಳಿಕ ಹುಚ್ಚನಂತೆ ಆಡುತ್ತಿದ್ದನು. ಕೋವಿ ತೆಗೆದುಕೊಂಡು ಹೆಂಡತಿ ಮಕ್ಕಳ ಮೇಲೆ ಗುಂಡಿಕ್ಕಲು ಬರುತ್ತಿದ್ದನು.

ಇದು ಯಾವ ಮಟ್ಟಕ್ಕೆ ಹೋಯಿತೆಂದರೆ, ಕಳೆದ ಕೆಲವು ತಿಂಗಳ ಹಿಂದೆ ಕಂಠ ಮಟ್ಟ ಕುಡಿದ ರಾಮಚಂದ್ರ ಗೌಡ ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟುಕೊಂಡು ಹೆಂಡತಿ ವಿನೋದ ಜತೆಯಲ್ಲಿ ಜಗಳ ತೆಗೆದಿದ್ದನು. ಜಗಳ ಬಾಯಿ ಮಾತಿನಲ್ಲಿ ಮುಗಿಯದೆ ತಾರಕಕ್ಕೇರಿತ್ತು. ಈ ವೇಳೆ ಮಕ್ಕಳು ಮಧ್ಯಪ್ರವೇಶ ಮಾಡಿ ತಾಯಿಯ ಪರ ಮಾತನಾಡಿದಾಗ ಕೋಪೋದ್ರಿಕ್ತಗೊಂಡ ರಾಮಚಂದ್ರಗೌಡ ಮಕ್ಕಳ ಮೇಲೆ ಆಕ್ರೋಶಗೊಂಡು ಮನೆಯಲ್ಲಿದ್ದ ಕೋವಿಯನ್ನು ತಂದು ಗುಂಡಿಕ್ಕಲು ಮುಂದಾಗಿದ್ದನು. ಈ ವೇಳೆ ಮಕ್ಕಳು ತಪ್ಪಿಸಿಕೊಂಡಿದ್ದರಿಂದ ಅವತ್ತು ನಡೆಯುತ್ತಿದ್ದ ದುರಂತವೊಂದು ತಪ್ಪಿತ್ತು.

☞ 12



ಕೃತ್ಯ ನಡೆದ ಮನೆಯ ಮುಂದೆ ಪೊಲೀಸರು ಹಾಗೂ ಸ್ಥಳೀಯರು

# ಕೋಲಾರ : ಸಾಲ ಕೊಡದಿದ್ದಕ್ಕೆ ಕುರಿಗಾಯಿಯನ್ನು ಕೊಂದು ಹಣ ದೋಚಿದ ಯುವಕನ ಬಂಧನ!

**ಯುವಕನೊಬ್ಬ ಕುಡಿತ, ಮೋಜು, ಮಸ್ತಿಗಾಗಿ, ಕೆಲವರ ಬಳಿ ಸಾಲ ಮಾಡಿಕೊಂಡಿದ್ದು ಸಾಲ ಕೊಟ್ಟವರು ಹಣಕ್ಕಾಗಿ ಪೀಡಿಸುತ್ತಿದ್ದರಿಂದ ಸಾಲದ ಹಣಕ್ಕಾಗಿ ರಸ್ತೆ ದರೋಡೆಗೆ ಇಳಿದಿದ್ದಾಗ ಪೊಲೀಸರ ಕೈಗೆ ಸಿಕ್ಕಿಹಾಕಿಕೊಂಡು ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರ ಬಂದಿದ್ದವನಿಗೆ ಹಣದ ಅವಶ್ಯಕತೆ ತುಂಬಾ ಇದ್ದು, ಇದರಲ್ಲಿ ಮಾಡಿದ ಸಾಲ ತೀರಿಸಬೇಕು, ನಿತ್ಯ ಸ್ನೇಹಿತರ ಜೊತೆ ಸೇರಿ ಪಾರ್ಟಿ ಮಾಡಬೇಕು, ಬ್ಯಾಂಕ್‌ನಲ್ಲಿ ಡ್ರಾ ಮಾಡಿದ ತಾಯಿಯ ಹಣವನ್ನು ಅಕೌಂಟ್‌ಗೆ ಹಾಕಬೇಕು, ಫೀಜ್ ಕಟ್ಟಿಲ್ಲದಕ್ಕೆ ಮನೆಗೆ ಬಂದಿರುವ ತಮ್ಮನನ್ನು ಕಾಲೇಜಿಗೆ ಕಳುಹಿಸಲು ಹಣ ಬೇಕಾಗಿರುವುದರಿಂದ ಒಂದು ಲಕ್ಷ ಹಣ ಸಾಲ ಕೊಡುವಂತೆ ಧರ್ಮ ಬಡ್ಡಿಗೆ ಸಾಲ ಕೊಡುವ ನನಗೆ ಪರಿಚಯ ಇರುವ ಕುರಿಗಾಯಿಯನ್ನು ಕೇಳಿದಕ್ಕೆ ಏನು ಸಂಪಾದನೆ ಇಲ್ಲದವನಿಗೆ ಸಾಲ ಕೊಡುವುದಿಲ್ಲ ಎಂದಿದ್ದಕ್ಕೆ ಕೋಪಗೊಂಡು ಕುರಿಗಾಯಿಯ ಕತ್ತು ಕೊಯ್ದು ಚೆಡ್ಡಿ ಜೇಬಿನಲ್ಲಿದ್ದ 60 ಸಾವಿರ ಹಣದ ಕಂತೆಯನ್ನು ಕಿತ್ತುಕೊಂಡು ಹೋಗಿ ಕೊಡಬೇಕಾದವರಿಗೆಲ್ಲ ಕೊಟ್ಟು, ಉಳಿದ ಹಣದಲ್ಲಿ ಮಜಾ ಮಾಡಿಕೊಂಡು ನೆಮ್ಮದಿಯಾಗಿ ಕಾಲ ಕಳೆಯುತ್ತಿದ್ದವನನ್ನು ವೇಮುಗಲ್ ಠಾಣೆಯ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**


ತಳಾರಿ ನಾಗರಾಜ್ ಬದುಕಿದ್ದಾಗ

**ಕೋಲಾರ**
✍ ಕೋಲಾರ ಮಂಜು

**ಕೋ**ಲಾರ ತಾಲ್ಲೂಕಿನ ವೇಮುಗಲ್ ಹೋಬಳಿಗೆ ಸೇರಿರುವ ಚೆನ್ನಸಂದ್ರ ಗ್ರಾಮದ ವಾಸಿ ವೆಂಕಟೇಶಪ್ಪನ ಮಗ ಸೆಂಟ್ರಿಂಗ್ ಕೆಲಸ ಮಾಡುವ ಸಿ.ವಿ. ಸುನಿಲ್ ಎಂಬುವವರು 2024 ನವೆಂಬರ್ 29ರಂದು ಸಂಜೆ ವೇಮುಗಲ್ ಪೊಲೀಸ್ ಠಾಣೆಗೆ ಹಾಜರಾಗಿ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ ಗ್ರಾಮದ ವಾಸಿಯಾದ ತಳಾರಿ ನಾಗರಾಜ್ ಎಂಬುವವರು ಸುಮಾರು 20-25 ವರ್ಷಗಳ ಹಿಂದೆ ಬಂದು ನಮ್ಮೂರಿನಲ್ಲಿ ವಾಸವಾಗಿದ್ದರು. ಜೀವನೋಪಾಯಕ್ಕಾಗಿ ಕುರಿ ಮತ್ತು ಹಸುಗಳನ್ನು ಮೇಯಿಸುತ್ತಿದ್ದರು. ಗ್ರಾಮದ ದ್ಯಾವಮ್ಮ ಎಂಬುವವರನ್ನು ಪ್ರೀತಿಸಿ ಮದುವೆಯಾಗಿದ್ದರು. ತಳಾರಿ ನಾಗರಾಜ್‌ರವರು ತಾವು ಸಂಪಾದನೆ ಮಾಡುತ್ತಿದ್ದ ಹಣವನ್ನೆಲ್ಲ ಕೂಡಿಟ್ಟುಕೊಂಡು, ಆ ಹಣವನ್ನು ಕಷ್ಟದಲ್ಲಿರುವ, ಗುರುತು, ಪರಿಚಯಸ್ಥರಿಗೆ ಸಾಲ ಕೊಟ್ಟು ಧರ್ಮ ಬಡ್ಡಿ ತೆಗೆದುಕೊಳ್ಳುತ್ತಿದ್ದರು. ಈ ದಿನ ಬೆಳಿಗ್ಗೆ 8-15 ಗಂಟೆ ಸಮಯದಲ್ಲಿ ನಾನು ನಮ್ಮ ಮನೆ ಮುಂದೆ ಇದ್ದಾಗ ಕುರಿಗಳನ್ನು ಕರೆದುಕೊಂಡು ಬೆಳೆ ಬೆಳೆಯದೆ ಬೀಡು ಬಿಟ್ಟಿರುವ ಜಮೀನುಗಳು ಅಥವಾ ಸರ್ಕಾರಕ್ಕೆ ಸೇರಿದ ಹುಲ್ಲುಗಾವಲಿನ ಗುಡ್ಡಗಾಡಿನ ಪ್ರದೇಶಗಳಲ್ಲಿ ಮೇಯಿಸಲು ಹೋಗುತ್ತಿದ್ದಾಗ ನನ್ನನ್ನು ಮಾತನಾಡಿಸಿಕೊಂಡು ತಳಾರಿ ನಾಗರಾಜ್ ಹೋದರು. ಆನಂತರ ನಾನು ಬೈರಾಂಡಹಳ್ಳಿಯಲ್ಲಿ ಸೆಂಟ್ರಿಂಗ್ ಕೆಲಸ ಮಾಡಲು ಹೋಗಿದ್ದು ನಂತರ ಕೆಲಸ ಮುಗಿಸಿಕೊಂಡು ಮಧ್ಯಾಹ್ನ 2-30 ಗಂಟೆಗೆ ವಾಪಸ್ಸು ಮನೆಗೆ ಬಂದು, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದ ಮೇಲೆ ನಮ್ಮೂರಿನ ಪಕ್ಕದಲ್ಲಿ ನಾವು ಮಾಡಿಕೊಂಡಿದ್ದ ಕ್ರಿಕೆಟ್ ಫೀಲ್ಡ್‌ಗೆ ಹೋಗಿ ಸ್ನೇಹಿತರ ಜೊತೆ ಕ್ರಿಕೆಟ್ ಆಡಿಕೊಂಡು ಇದ್ದೆನು. ಸಂಜೆ ಸುಮಾರು 5.25 ಗಂಟೆ ಸಮಯದಲ್ಲಿ ನಮ್ಮ ಚಿಕ್ಕಮ್ಮನ ಮಗ ಧನುಷ್ ನನ್ನ ಮೊಬೈಲ್‌ಗೆ ಕರೆ ಮಾಡಿ ಗಾಬರಿಯಿಂದ ನಾರಾಯಣಸ್ವಾಮಿರವರ ಪತ್ನಿ ಪವಿತ್ರರವರು ನಿನ್ನ ಬಳಿ ಮಾತನಾಡಬೇಕಂತೆ ಎಂದು ಹೇಳಿದನು. ಆಕೆಯು ಮಾತನಾಡುತ್ತಾ ಬೆಳ್ಳಹಳ್ಳಿ ಕೆರೆಯ ಖಾನೆಯಲ್ಲಿ ಕುರಿಗಾಯಿ ತಳಾರಿ ನಾಗರಾಜ್‌ನನ್ನು ಯಾರೋ ದುಷ್ಕರ್ಮಿಗಳು ಕುತ್ತಿಗೆ ಕೊಯ್ದು ಕೊಲೆ ಮಾಡಿದ್ದಾರೆಂದು ಹೇಳಿದರು. ಕೂಡಲೇ ನಾನು ಪವಿತ್ರಳ ಗಂಡ ನಾರಾಯಣಸ್ವಾಮಿ, ಗಜೇಂದ್ರ, ಪ್ರವೀಣ್, ನವೀನ್ ಮತ್ತು ಇತರರನ್ನು ಬೆಳ್ಳಹಳ್ಳಿ ಕೆರೆಯ ಖಾನೆಯಲ್ಲಿರುವ ಕಾಲುವೆ ಬಳಿ ಹೋಗಿ ನೋಡಿದಾಗ ವಿಷಯ ನಿಜವಾಗಿತ್ತು. ಯಾರೋ ಯಾವುದೋ ದುರುದ್ದೇಶಕ್ಕೆ ಚಾಕುವಿನಿಂದ ತಳಾರಿ ನಾಗರಾಜ್‌ರವರ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಿದ್ದು, ಹಣೆ ಹಾಗೂ ಎಡಕೈಗೆ ಸಹ ಗಾಯವಾಗಿರುತ್ತದೆ. ತಳಾರಿ ನಾಗರಾಜ್‌ರವರು ಸ್ಥಳದಲ್ಲಿಯೇ ಸತ್ತು ಹೋಗಿದ್ದರು. ಕುರಿಗಾಯಿಗಳಾದ ಧನುಷ್ ಮತ್ತು ರತ್ನಮ್ಮನವರಿಂದ ವಿಷಯವನ್ನು ತಿಳಿಸಲಾಗಿ ಈ ದಿನ ಬೆಳಿಗ್ಗೆ 10.30ರಲ್ಲಿ ತಳಾರಿ ನಾಗರಾಜ್‌ರವರು ಕುರಿಗಳನ್ನು ಹೊಡೆದುಕೊಂಡು ಬೆಳ್ಳಹಳ್ಳಿ ಕೆರೆಯ ಖಾನೆಗೆ ಹೋಗಿ ರತ್ನಮ್ಮಳೊಂದಿಗೆ ಕುರಿಗಳನ್ನು ಮೇಯಿಸುತ್ತಿದ್ದಾಗ ಸ್ವಲ್ಪ ದೂರದಲ್ಲಿ ನಾನು ಮತ್ತು ಪವಿತ್ರ ಕುರಿಗಳನ್ನು ಮೇಯಿಸುತ್ತಿದ್ದೆವು. ನಂತರ ನಾನು ಮಧ್ಯಾಹ್ನ ಮನೆಗೆ ಹೋಗಿ ಊಟ ಮಾಡಿಕೊಂಡು ವಾಪಸ್ಸು ಖಾನೆಗೆ ಬಂದಾಗ ರತ್ನಮ್ಮ ಮಾತ್ರ ಕುಳಿಗಳ ಬಳಿ ಇದ್ದು ತಳಾರಿ ನಾಗರಾಜ್‌ರವರು ಕಾಣಲಿಲ್ಲ. ಆಗ ನಾನು ರತ್ನಮ್ಮನನ್ನು ತಳಾರಿ ನಾಗರಾಜ್ ಎಲ್ಲಿ ಹೇಳಿದರು. ತಕ್ಷಣ ತಳಾರಿ ನಾಗರಾಜ್‌ರವರ ಫೋನ್‌ಗೆ ಕರೆ ಮಾಡಿದೆನು. ಆದರೆ ಫೋನ್ ತೆಗೆಯಲಿಲ್ಲ. ಫೋನ್ ಕರೆಯನ್ನು ಯಾಕೆ ಸ್ವೀಕರಿಸುತ್ತಿಲ್ಲ, ಮರದ ಕೆಳಗೆ ಮಲಗಿ ನಿದ್ದೆ ಮಾಡುತ್ತಿರಬೇಕೆಂದು ಕಾಲುವೆ ಬಳಿ ಹೋಗಿ ನೋಡಿದಾಗ ತಳಾರಿ ನಾಗರಾಜ್‌ರವರ ಕುತ್ತಿಗೆ ಕೊಯ್ದು ಕೊಲೆ ಮಾಡಿ ಹೊರಟು ಹೋಗಿರುತ್ತಾರೆಂದು ಹೇಳಿದರು. ತಳಾರಿ ನಾಗರಾಜ್‌ರವರನ್ನು ಮಧ್ಯಾಹ್ನ 3ರಿಂದ 4 ಗಂಟೆ ಮಧ್ಯೆ ಯಾರೋ, ಯಾವುದೋ ಉದ್ದೇಶಕ್ಕಾಗಿ ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳನ್ನು ಪತ್ತೆ ಮಾಡಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ನೀಡಿದ ದೂರನ್ನು ಪಿಎಸ್‌ಐ ಹೇಮಂತ್‌ರವರು ಪಡೆದುಕೊಂಡು ಠಾಣಾ ಮೊ.ಸಂ. 252/ಯು/ಎಸ್ 103(1) ಬಿಎನ್‌ಎಸ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿ ರವಿಶಂಕರ್, ಡಿವೈಎಸ್ಪಿ ನಾಗ್ತೆ, ಪಿಐ ಬಿ.ಪಿ. ಮಂಜು, ಸಿಬ್ಬಂದಿ ವರ್ಗ, ಶ್ವಾನದಳ ಮತ್ತು ಬೆರಳಚ್ಚು ತಜ್ಞರು ಆಗಮಿಸಿ ಶವದ ತನಿಖೆ ನಡೆಸಿದ ಮೇಲೆ ಗ್ರಾಮದ ಪಂಚರ ಸಮುಕ್ಷಮದಲ್ಲಿ ಮಹಜರವ ನಡೆಸಿದ ನಂತರ ಶವವನ್ನು ಕೋಲಾರ ಜಿಲ್ಲಾ ಆಸ್ಪತ್ರೆ ಎಸ್‌ಎನ್‌ಆರ್‌ನ ಶವಗಾರಕ್ಕೆ ಸಾಗಿಸಿ ಅಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು.


ಎಸ್ಪಿ ಬಿ. ನಿಖಿಲ್


ಕೊಲೆಯಾದ ತಳಾರಿ ನಾಗರಾಜ್

### ಆರೋಪಿ ಮಾಧವನ ಬಂಧನ

ತಳಾರಿ ನಾಗರಾಜ್‌ರವರನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ಎಂ.ಹೆಚ್. ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ಬಿ.ಜಿ. ಮಂಜುರವರ ನೇತೃತ್ವದಲ್ಲಿ ಪಿಎಸ್‌ಐ ಹೇಮಂತ್, ಸಿಬ್ಬಂದಿ ವರ್ಗದವರಾದ ಎಎಸ್‌ಐ ನಾರಾಯಣಸ್ವಾಮಿ, ತನಿಖಾ ಸಹಾಯಕ ಹೂವಳ್ಳಿ ಸುರೇಶ್, ರಾಘವೇಂದ್ರ, ಆಂಜಿನಪ್ಪ, ಮಹೇಶ್, ಮಂಜುನಾಥ್, ಸತೀಶ್, ನವೀನ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಮೃತ ತಳಾರಿ ನಾಗರಾಜ್‌ರವರಿಗೆ ಯಾರಾದರು ವಿರೋಧಿಗಳು ಇದ್ದಾರೆಯೇ ಹಾಗೂ ಯಾರ ಮೇಲಾದರು ಅನುಮಾನ ವ್ಯಕ್ತಪಡಿಸುತ್ತಿರಾ ಎನ್ನುವುದರ ಬಗ್ಗೆ ಮೃತನ ಮನೆಯವರಿಂದ ದೂರನ್ನು ದಾಖಲಿಸಿಕೊಂಡ ಮೇಲೆ ತನಿಖೆ ಕೈಗೊಂಡ ಪೊಲೀಸರು ತಳಾರಿ ನಾಗರಾಜ್ ಯಾರಾದರು ಮಹಿಳೆಯೊಂದಿಗೆ ಸಂಬಂಧ ಇಟ್ಟುಕೊಂಡಿದ್ದರೆ, ಯಾರೊಂದಿಗಾದರೂ ಹಣಕಾಸಿನ ವ್ಯವಹಾರ ನಡೆಸಿದ್ದರೆ, ಕುರಿಗಳ ಮಾರಾಟ ಅಥವಾ ತೆಗೆದುಕೊಳ್ಳುವ ಸಂದರ್ಭದಲ್ಲಿ ಹಣಕಾಸಿನ ವಿಚಾರದಲ್ಲಿ ಗಲಾಟೆ ಏನಾದರು ನಡೆದಿದ್ದೆಯೇ ಎಂಬುವುದರ ಬಗ್ಗೆ ಗ್ರಾಮದಲ್ಲಿನ ಸಂಬಂಧಿಕರು ಮತ್ತು ಗ್ರಾಮಸ್ಥರನ್ನು ವಿಚಾರಣೆ ಮಾಡಲಾಯಿತು. ಆದರೆ ಯಾವುದೇ ಯಾವುದೇ ಸಳಿವು ಸಿಗಲಿಲ್ಲ. ಕೊಲೆ ನಡೆದು ವಾರಗಳೇ ಕಳೆದರೂ ಕೊಲೆಗೆ ಕಾರಣ, ಕೃತ್ಯವೆಸಗಿರುವ ಆರೋಪಿಗಳು ಯಾರೆಂಬುವುದು ಪತ್ತೆಯಾಗಲಿಲ್ಲ. ಕ್ರೈಂ ತಂಡವು ಒಂದು ದಿನ ಕೊಲೆ ನಡೆದ ಸ್ಥಳವಾದ ಚೆನ್ನಸಂದ್ರ, ಬೆಳ್ಳಿಹಳ್ಳಿ ಮಧ್ಯೆ ಇರುವ ಬೀಚಗೊಂಡನಹಳ್ಳಿ ಕೆರೆಯಿಂದ ಕ್ಯಾಲನೂರು ಕೆರೆ ಕಡೆಗೆ ಹರಿಯುವ ನೀರಿನ ಕಾಲುವೆ ಭಾಗದಲ್ಲಿ ಮೃತದೇಹವಿದ್ದ ಸ್ಥಳದ ಸುತ್ತ ಮತ್ತೆ ಪರಿಶೀಲಿಸುತ್ತಿದ್ದಾಗ ಅಲ್ಲಿಯೇ ಪಕ್ಕದಲ್ಲಿ ಕುರಿ ಮೇಯಿಸುತ್ತಿದ್ದ ಒಂದಿಬ್ಬರು ಪೊಲೀಸರ ಬಳಿಗೆ ಬಂದು ತಳಾರಿ ನಾಗರಾಜ್ ಕೊಲೆಯಾದ ದಿನ ಮಧ್ಯಾಹ್ನ 5 ಗಂಟೆ ಸಮಯದಲ್ಲಿ ಬೆಳ್ಳಿಹಳ್ಳಿಯ ಮಾಧವ ಎನ್ನುವ ಹುಡುಗ ಕಾಲುವೆ ಪಕ್ಕದ ಹಳ್ಳದಿಂದ ಬರುತ್ತಿದ್ದನೆಂದು ಹೇಳಿದರು. ಕುರಿಗಾಯಿಗಳು ಕೊಟ್ಟ ಮಾಹಿತಿ ಆಧಾರದ ಮೇಲೆ ಮಾಧವನ ಬಗ್ಗೆ ತನಿಖೆ ಕೈಗೊಂಡ ಪೊಲೀಸರು ಅವರ ಪೂರ್ವಪರಗಳನ್ನು ವಿಚಾರ ಮಾಡಿ 2024 ಡಿಸೆಂಬರ್ 11ರಂದು ಸಂಜೆ 5.30ರಲ್ಲಿ


ಆರೋಪಿ ಮಾಧವ


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ

☞ 5

4 ☜

ಬೆಳ್ಳಹಳ್ಳಿಯ ಸಮೀಪ ಇರುವ ತೋಟದಲ್ಲಿ ಕೆಲಸ ಮಾಡುತ್ತಿದ್ದ ವೆಂಕಟೇಶಪ್ಪನ ಮಗ ಬಿ.ವಿ. ಮಾಧವ (21)ನನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಪ್ರಾರಂಭದಲ್ಲಿ ನಾನೊಬ್ಬ ಮಾಯಕ ನನಗೇನು ತಿಳಿದಿಲ್ಲವೆಂದು ಹೇಳಿದನು. ಆಗ ಪೊಲೀಸ್ ಭಾಷೆಯಲ್ಲಿ ವಿಚಾರಣೆ ಒಳಪಡಿಸಲಾಗಿ ತಂದೆ ವೆಂಕಟೇಶಪ್ಪ, ತಾಯಿ ಲಕ್ಷ್ಮಮ್ಮ ಇವರಿಗೆ ಮಾಧವನಾದ ನಾನು, ವೀಣಾ, ಪ್ರಿಯಾಂಕ ಮತ್ತು ಉದಯ್‌ಕುಮಾರ್ ಎಂಬ ನಾಲ್ಕು ಮಕ್ಕಳಿದ್ದು ನನ್ನ ಅಕ್ಕ ವೀಣಾಳನ್ನು ಬೆಂಗಳೂರಿನ ಬಾಬಾಸಪಾಳ್ಯದ ವಾಸಿ ಕಿಶೋರ್ ಎಂಬುವವರೊಂದಿಗೆ ಹಾಗೂ ಪ್ರಿಯಾಂಕಳನ್ನು ಮಾಲೂರು ತಾಲ್ಲೂಕಿನ ಲಕ್ಕೂರು ಗ್ರಾಮದ ವಾಸಿ ಆನಂದ್ ಎಂಬುವರೊಂದಿಗೆ ಮದುವೆ ಮಾಡಿರುತ್ತೆ. ನಾನು ಕ್ಯಾಲನೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ ಎಸ್‌ಎಲ್‌ಸಿವರೆಗೂ ಓದಿಕೊಂಡಿದ್ದು, ನಂತರ ವ್ಯವಸಾಯ ಮಾಡಿಕೊಂಡು ಮನೆಯಲ್ಲಿಯೇ ಇದ್ದೆನು. ಮುಂದೆ ಓದಲು ಕಷ್ಟವಾಗಿದ್ದು, ಆದರೂ ಬಿಡದೆ ಬೆಂಗಳೂರಿನ ಕೆ.ಆರ್. ಪುರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2021-23ನೇ ಸಾಲಿನಲ್ಲಿ ಬಿ.ಕಾಂ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಣಕಾಸಿನ ತೊಂದರೆಯಾಗಿ ಕಾಲೇಜು ಬಿಟ್ಟು ವಾತ್ತೆ ಖಾಯಂ ಆಗಿ ತೋಟದ ಕೆಲಸಕ್ಕೆ ಹೋಗಬೇಕಾಗಿತ್ತು. ಆ ಸಮಯದಲ್ಲಿ ಊರಿಗೆ ಬಂದಿದ್ದಾಗ ನನಗೆ ಪರಿಚಯ ಇರುವ ಚನ್ನಸಂದ್ರದ ವಾಸಿ ತಳಾರಿ ನಾಗರಾಜ್‌ರವರನ್ನು ಕಳೆದ ವರ್ಷ ಮಾರ್ಚ್ ತಿಂಗಳಿನಲ್ಲಿ ಒಂದು ದಿನ ಕಾಲೇಜಿನ ಖರ್ಚಿಗೆ 10 ಸಾವಿರ ಹಣ ಬೇಕೆಂದು ಕೇಳಿದಾಗ ಈಗ ಮನೆ ಕಟ್ಟುತ್ತಿದ್ದೇನೆ. ಸಧ್ಯಕ್ಕೆ ಹಣವಿಲ್ಲ ಎಂದನು. ಅದಕ್ಕೆ ನಾನು ಸುಮ್ಮನಾಗಿಬಿಟ್ಟೆನು. ಕಳೆದ ವರ್ಷ ಏಪ್ರಿಲ್‌ನಲ್ಲಿ ನಾನು ನಮ್ಮೂರಿನ ವಾಸಿ ಸುದೀಪ್ ಮತ್ತು ಚನ್ನಸಂದ್ರ ವಾಸಿ ಇಂದ್ರ ಎಂಬುವನು ಸೂಲಿಬೆಲೆಗೆ ಹೋಗಿ ಯಾರ ಬಳಿಯಾದರೂ ಹಣ ಕಿತ್ತುಕೊಳ್ಳಬೇಕೆಂದು ಹೊಂಚು ಹಾಕುತ್ತಿದ್ದಾಗ ಸೂಲಿಬೆಲೆ ಪೊಲೀಸರು ನಮ್ಮನ್ನು ಹಿಡಿದುಕೊಂಡು ರಸ್ತೆ ದರೋಡೆ ಮಾಡಲು ಸ್ಕೆಚ್ ಹಾಕುತ್ತಿರೇನೋ ಎಂದು ಹೇಳಿ ಕೇಸು ಹಾಕಿ ಜೈಲಿಗೆ ಕಳುಹಿಸಿದರು. ನಾವು ಮೂರು ಜನ 28 ದಿನಗಳ ಕಾಲ ಜೈಲಿನಲ್ಲಿದ್ದು ನಂತರ ಜಾಮೀನು ಪಡೆದು ಹೊರ ಬಂದ ಮೇಲೆ ಅವರಿಬ್ಬರು ಅವರು ಮಾಡುತ್ತಿದ್ದ ಗಾರೆಕೆಲಸಕ್ಕೆ ಹೋಗುತ್ತಿದ್ದರು. ನಾನು ನಮ್ಮ ತೋಟದಲ್ಲಿ ವ್ಯವಸಾಯ ಮಾಡಿಕೊಂಡಿದ್ದೆನು. ಇನ್ನು ಕೋರ್ಟಿನಲ್ಲಿ ಕೇಸು ನಡೆಯುತ್ತಿರುತ್ತದೆ.


### ಕುಡಿತ, ಮೋಜು-ಮಸ್ತಿಗಾಗಿ ಸಾಲ ಮಾಡಿದೆ

ಕುಡಿತ ಮತ್ತು ಸಿಗರೇಟ್ ಸೇದುವ ಚಟಕ್ಕೆ ಬಿದ್ದಿದ್ದ ನಾನು ಜೈಲಿನಿಂದ ಹೊರ ಬಂದ ಮೇಲೆ ನಮ್ಮೂರಿನ ಸಂದೀಪ್ ಮತ್ತು ಚನ್ನಸಂದ್ರದ ಇಂದ್ರನ ಜೊತೆ ಮೋಜು-


ತಳಾರಿ ನಾಗರಾಜನ ಮೃತದೇಹ

ಮಸ್ತಿ ಮಾಡುತ್ತಿದೆದ್ದು. ಅಲ್ಲದೆ ನಾನು ಮೊಬೈಲ್ ಫೋನಿನಲ್ಲಿ ರಾಕ್ ಎಕ್ಸ್‌ಚೇಂಜ್ ಹಾರ್ಟ್ ಎಂಬ ಬೆಟ್ಟಿಂಗ್ ಆಫ್‌ನಲ್ಲಿ ಆನ್‌ಲೈನ್ ಕ್ರಿಕೆಟ್ ಆಡಿ 70 ಸಾವಿರ ಹಣ ಕಳೆದುಕೊಂಡಿದ್ದು ಈ ಹಣವನ್ನು ತೀರಿಸಲು ನಾನು ಇತ್ತೀಚೆಗೆ ನಮ್ಮೂರಿನ ವಾಸಿ ನನ್ನ ಅತ್ತೆ ನೇತ್ರಾರವರ ಬಳಿ 20 ಸಾವಿರ, ಸಂತೋಷ್ ಎಂಬುವವರ ಬಳಿ 5 ಸಾವಿರ ರೂ.ಗಳನ್ನು ಸಾಲವಾಗಿ ತೆಗೆದುಕೊಂಡು ಖರ್ಚು ಮಾಡಿಕೊಂಡಿದ್ದೆನು. ಇದರ ಜೊತೆಗೆ ತಾಯಿಯ ಅಕೌಂಟ್‌ನಲ್ಲಿದ್ದ ಹಣದ ಪೈಕಿ 20 ಸಾವಿರವನ್ನು ಡ್ರಾ ಮಾಡಿಕೊಂಡು ಬಂದು ಖರ್ಚು ಮಾಡಿಕೊಂಡಿದ್ದೆನು. ಸಾಲ ಕೊಟ್ಟಿದ್ದ ನೇತ್ರಾ ಮತ್ತು ಸಂತೋಷ್ ಹಣ ವಾಪಸ್ಸು ಕೊಡುವಂತೆ ಪದೇ ಪದೇ ಪೀಡಿಸುತ್ತಿದ್ದರು. ನಾನು ಕಷ್ಟಪಟ್ಟು ಹಣ ಸಂಪಾದನೆ ಮಾಡಲು ಸಾಧ್ಯವಾಗದಿದ್ದರೂ ಅನ್ಯಮಾರ್ಗದಲ್ಲಿ ಹಣ ಗಳಿಸುವ ಮೂಲಕ ಸಾಲ ಕೊಟ್ಟವರಿಗೆ ಹಣ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೆನು. ಆ ಸಮಯದಲ್ಲಿ ಕಳೆದ ವರ್ಷ ಸಾಲ ಕೇಳಿದಾಗ ಸದ್ಯಕ್ಕೆ ಇಲ್ಲ ಎಂದು ಹೇಳಿದ್ದ ಚನ್ನಸಂದ್ರ ಗ್ರಾಮದ ತಳಾರಿ ನಾಗರಾಜ್ ನೆನಪಾಗಿದ್ದು ಅವನ ಬಳಿ ಪುನಃ ಸಾಲ ಕೇಳಬೇಕು, ಅವನು ಹಣ ಕೊಡಲು ನಿರಾಕರಿಸಿದರೆ ಅವನ ಮೇಲೆ ಹಲ್ಲೆ ಮಾಡಿಯಾದರೂ ಜೇಬಿನಲ್ಲಿ ಯಾವಾಗಲೂ ಎಟಿಎಂನಲ್ಲಿ ಸ್ಟಾಕ್ ಇಡುವಂತೆ ಚೆಡ್ಡಿಯಲ್ಲಿ ಇಟ್ಟಿರುತ್ತಿದ್ದ ಹಣವನ್ನು ಕಿತ್ತುಕೊಂಡು ಹೋಗಿ ಸಾಲವನ್ನು ತೀರಿಸಬೇಕೆಂದು ಯೋಚಿಸಿ 2024 ಡಿಸೆಂಬರ್ 29ರಂದು ಬೆಳಿಗ್ಗೆ 7.30ರಿಂದ 8 ಗಂಟೆ ವೇಳೆಗೆ ತಂದೆ ಜೊತೆ ತೋಟಕ್ಕೆ ಹೋಗಿ ಕೊತ್ತಂಬರಿ ಸೊಪ್ಪಿಗೆ ಔಷಧಿ ಹೊಡೆದಿದ್ದು ತಿಂಡಿ ತಿನ್ನಲು ಮನೆಗೆ ಹೋಗಿದ್ದು ಅದೇ ಸಮಯಕ್ಕೆ ನನ್ನ ತಮ್ಮ ಉಯ್‌ಕುಮಾರ್ ಮನೆಗೆ ಬಂದಿದ್ದನು. ಆಗ ನಾನು ಯಾಕೆ ಕಾಲೇಜಿಗೆ ಹೋಗಿಲ್ಲ ಎಂದು ಕೇಳಿದಕ್ಕೆ ಕಾಲೇಜಿನ ಫೀಜ್ ಕಟ್ಟಿಲ್ಲ ಅದಕ್ಕೆ ಹಣ ತೆಗೆದುಕೊಂಡು ಹೋಗಲು


ಪಿಐ ಬಿ.ಜಿ. ಮಂಜು


ಪಿಎಸ್‌ಐ ಹೇಮಂತ್

ಮನೆಗೆ ಬಂದಿರುವೆನೆಂದು ಹೇಳಿದನು. ತಮ್ಮನಿಗೆ ಹಣ ಕೊಟ್ಟು ಕಳುಹಿಸಬೇಕು ಎಲ್ಲಿಂದ ತರುವುದು ಎಂದು ಯೋಚಿಸುತ್ತಾ ತಿಂಡಿ ತಿಂದು ಮತ್ತೆ ತೋಟಕ್ಕೆ ಹೋಗಿ ಕೆಲಸ ಮಾಡುತ್ತಿದ್ದಾಗ ಸ್ವಲ್ಪ ದೂರದಲ್ಲಿ ತಳಾರಿ ನಾಗರಾಜ್ ಕುರಿಗಳನ್ನು ಮೇಯಿಸುತ್ತಾ ಇದ್ದರು. ಇದೇ ಸರಿಯಾದ ಸಮಯವೆಂದು ಅಪ್ಪಕೆರೆ ಕಡೆ ಹಸುಗಳು ಕೂಗುತ್ತಿವೆ ಅಲ್ಲಿಗೆ ಹೋಗಿ ಬರ್ತೀನಿ ಎಂದು ಸುಳ್ಳು ಹೇಳಿ ತೋಟದಿಂದ ಮನೆಗೆ ಹೋಗಿ ಕಳೆದ ತಿಂಗಳು ಹೆಚ್. ಕ್ರಾಸ್‌ನ ರಸ್ತೆ ಬದಿ ಮಾರಾಟ ಮಾಡುತ್ತಿದ್ದ ಚಾಕುವನ್ನು 80 ರೂಪಾಯಿ ಕೊಟ್ಟು ಖರೀದಿಸಿದ್ದು, ಅದನ್ನು ಎತ್ತಿ ಸೊಂಟದಲ್ಲಿ ಸಿಕ್ಕಿಸಿಕೊಂಡು ಕೆಎ-07 ಇ-3529 ಹೀರೋಹೊಂಡ ದ್ವಿಚಕ್ರ ವಾಹನದಲ್ಲಿ ಹೊರಟು ತಳಾರಿ ನಾಗರಾಜ್ ಕುರಿಗಳನ್ನು ಮೇಯಿಸುತ್ತಿದ್ದ ಜಾಗಕ್ಕೆ ಹೋಗಲು ಹರೀಶ್ ಲೇಔಟ್ ಬಳಿ ಹೋಗುತ್ತಿದ್ದಾಗ ಅಲ್ಲಿ ಎಲ್ಲಿಯೂ ತಳಾರಿ ನಾಗರಾಜ್ ಕಾಣಿಸಲಿಲ್ಲ. ನಂತರ ದ್ವಿಚಕ್ರ ವಾಹನವನ್ನು ನಿಲ್ಲಿಸಿ ಕಾಲುವೆಯ ದಿನ್ನೆಯ ಮೇಲೆ ನಿಂತು ನೋಡಿದಾಗ ದೂರದಲ್ಲಿ ತಳಾರಿ ನಾಗರಾಜ್ ಚನ್ನಸಂದ್ರ ಗ್ರಾಮದ ಬಂಗಾರಮ್ಮ, ಮುನಿರತ್ನಮ್ಮ ಮತ್ತು ಇತರರು ಸೇರಿಕೊಂಡು ಕುರಿಗಳನ್ನು ಮೇಯಿಸುತ್ತಿದ್ದರು. ಇವರೆಲ್ಲರೂ ಇರುವಾಗ ಕೆಲಸ ಆಗುವುದಿಲ್ಲ. ಇನ್ನು ಸ್ವಲ್ಪ ಹೊತ್ತು ಕಳೆದು ಬರೋಣವೆಂದು ಊರ ಕಡೆಗೆ ಹೋಗಿ ಬರೋಣವೆಂದು ದ್ವಿಚಕ್ರ ವಾಹನದಲ್ಲಿ ಹೊರಟೆನು.

### ಹಣ ಕೊಡದಿದ್ದಕ್ಕೆ ಕತ್ತು ಕೊಯ್ದು ಕೊಲೆ

ಊರಿನಲ್ಲಿ ಸುತ್ತಾಡಿಕೊಂಡು ಮತ್ತೆ ಸುಮಾರು 4.30 ಗಂಟೆ ಬಂದಾಗ ಬೀದಿನಲ್ಲಿ ಬಂಗಾರಮ್ಮ ಮತ್ತು ಮುನಿರತ್ನರವರು ಕುರಿಗಳನ್ನು ಮೇಯಿಸುತ್ತಿದ್ದರು. ಕೆರೆ ಕಾಲುವೆಯಲ್ಲಿ ತಳಾರಿ ನಾಗರಾಜ್ ಕುರಿಗಳನ್ನು ಮೇಯಲು ಬಿಟ್ಟು ಕಾಲುವೆಯಲ್ಲಿ ಕುಳಿತಿದ್ದರು. ಆಗ ನಾನು ಅವನ ಬಳಿಗೆ ಹೋಗಿ ತಳಾರಿ ಅಣ್ಣ ಸೌದೆ ಹೊರೆ ಎತ್ತಲು ಬಾ ಎಂದು ಹೇಳುತ್ತಾ ಹತ್ತಿರಕ್ಕೆ ಹೋಗಿ ಹೇ ತಳಾರಿ ನನಗೆ ಈಗ ಒಂದು ಲಕ್ಷ ಹಣ ತುತ್ತಾಗಿ ಸಾಲ ಬೇಕು ಎಂದು ಕೇಳಿದೆನು. ಅದಕ್ಕೆ ತಳಾರಿ ನಾಗರಾಜ್ ನಿನಗೆ ಏನು ಸಂಪಾದನೆ ಇದೆ ಎಂದು ಸಾಲ ಕೊಡಲಿ ಎಂದನು. ಆಗ ನಾನು ಬೇರೆಯವರು ಕೇಳಿದರೆ ತಕ್ಷಣ ಹಣ ಕೊಡುತ್ತಿಯಾ, ನನಗೆ ಸಾಲ ಕೊಡಲು ಹಿಂದೇಟು ಹಾಕುತ್ತಿಯಾ ಎಂದಿದ್ದಕ್ಕೆ ಸಾಲ ಕೊಡಲ್ಲ ಏನು ಮಾಡುತ್ತೀಯ ಹೋಗಲೇ ಎಂದು ಬೈದನು. ಆಗ ನಾನು ತಳಾರಿ ಪ್ಯಾಂಟಿನ ಒಳಗೆ ಕೈ ಹಾಕಿ ಚೆಡ್ಡಿಯಲ್ಲಿಟ್ಟಿರುವ ಹಣವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾಗ ನನ್ನನ್ನು ಹಿಡಿದು ತಳ್ಳಿದನು. ಆಗ ನನಗೆ ಕೋಪ ಬಂದು ಜೇಬಿನಲ್ಲಿಟ್ಟುಕೊಂಡು ತಂದಿದ್ದ ಚಾಕುವನ್ನು ಹೊರ ತೆಗೆದು ತಳಾರಿ ನಾಗರಾಜ್ ಮೇಲೆ ಅಟ್ಯಾಕ್ ಮಾಡಲು ಹೋದಾಗ ಕೈ ಅಡ್ಡ ಇಟ್ಟಿದ್ದು ಕೈಗೆ ಗಾಯವಾಗಿ ರಕ್ತ ಸುರಿಯಿತು. ನಂತರ ಕುತ್ತಿಗೆಗೆ ಚಾಕು ಹಾಕಲು ಹೋದಾಗ ತಪ್ಪಿಸಿಕೊಂಡಿದ್ದು ಕೆನ್ನೆಗೆ ಬಿದ್ದಿತು. ತಕ್ಷಣ ಅವನನ್ನು ಕೆಳಗೆ ತಳ್ಳಿ ಎದೆಯ ಮೇಲೆ ಮೊಣಕಾಲನ್ನು ಇಟ್ಟು ಚಾಕುವಿನಿಂದ ಕತ್ತನ್ನು ಕೊಯ್ದು, ಎರಡು ಮೂರು ಬಾರಿ ಚುಚ್ಚುತ್ತಿದ್ದಂತೆ ಒದ್ದಾಡಿ ಸತ್ತು ಹೋದನು. ಆ ಸಂದರ್ಭದಲ್ಲಿ ನನ್ನ ಎಡಕೈ ಬೆರಳಿಗೂ ಗಾಯವಾಗಿತ್ತು. ತಕ್ಷಣ ತಳಾರಿ ನಾಗರಾಜ್‌ನ ಪ್ಯಾಂಟನ್ನು ಚಾಕುವಿನಿಂದ ಕೊಯ್ದು ಚಡ್ಡಿ ಜೇಬಿನಲ್ಲಿಟ್ಟಿದ್ದ ನಾಲ್ಕು ಕವರುಗಳನ್ನು ಕಿತ್ತುಕೊಂಡು ಮನೆಗೆ ಹೋಗಿ ರೇಷ್ಮೆಹುಳು ಮನೆಯ ಶೆಡ್‌ನಲ್ಲಿದ್ದ ಡ್ರಿಪ್ ಪೈಪ್‌ಗಳ ಕೆಳಗೆ ಹಣ ಇದ್ದ ಕವರುಗಳನ್ನು ಬಚ್ಚಿಟ್ಟು ರಕ್ತ ಕಲೆಗಳಾಗಿದ್ದ ಬಟ್ಟೆಗಳನ್ನು ತೆಗೆದು ಬೇರೆ ಬಟ್ಟೆಯನ್ನು ಹಾಕಿಕೊಂಡು ಅವುಗಳನ್ನು ಸಹ ಪೈಪ್‌ಗಳ ಕೆಳಗೆ ಇಟ್ಟು ನಂತರ ಮನೆಗೆ ಹೋಗಿ ಊಟ ಮಾಡಿ ಏನೂ ಗೊತ್ತಿಲ್ಲದವನಂತೆ ಇದ್ದುಬಿಟ್ಟೆನು. ರಾತ್ರಿ ತಳಾರಿ ನಾಗರಾಜ್ ಕೊಲೆಯಾಗಿರುವ ಸ್ಥಳಕ್ಕೆ ಪೊಲೀಸರು ಬಂದು ಶವವನ್ನು ಆಸ್ಪತ್ರೆಗೆ ಸಾಗಿಸಿರುವ ವಿಷಯವನ್ನು ತಿಳಿದುಕೊಂಡು ಊರು ಬಿಟ್ಟು ಹೋದರೆ ನನ್ನ ಮೇಲೆ ಕೊಲೆ ಆರೋಪ ಬರಬಹುದೆಂದು ತೋಟದಲ್ಲಿ ಕೆಲಸ ಮಾಡಿಕೊಂಡು ಇದ್ದೆನು. ಎರಡು ದಿನವಾದ ನಂತರ ರೇಷ್ಮೆಹುಳು ಮನೆಗೆ ಹೋಗಿ ಪೈಪ್ ಕೆಳಗೆ ಇಟ್ಟಿದ್ದ ನಾಲ್ಕು ಪ್ಯಾಕೇಟ್‌ಗಳನ್ನು ತೆಗೆದು ನೋಡಿದಾಗ 60 ಸಾವಿರ ರೂಪಾಯಿ ಇದ್ದು ಅದರಲ್ಲಿ ತಾಯಿ ಅಕೌಂಟ್‌ನಿಂದ 20 ಸಾವಿರ ಹಣವನ್ನು ಡ್ರಾ ಮಾಡಿರುವುದಾಗಿ ಹೇಳಿ ತಂದೆಗೆ ಕೊಟ್ಟೆನು. ತಮ್ಮನಿಗೆ ಕಾಲೇಜು ಫೀಜ್ ಕಟ್ಟಲು ಕೊಟ್ಟೆನು. ಸಾಲ ತೆಗೆದುಕೊಂಡಿದ್ದ ನೇತ್ರಾಗೆ 20 ಸಾವಿರ ಕೊಟ್ಟೆನು. ನಂತರ ಉಳಿದ ಹಣದಲ್ಲಿ


ಪತ್ನಿ ಹಾಗೂ ಸಾಕಿದ ಟಗರಿನೊಂದಿಗೆ ತಳಾರಿ ನಾಗರಾಜ್

ಧನಿ ಫೈನಾನ್ಸ್‌ಗೆ ಸ್ವಲ್ಪ ಕೊಟ್ಟು ಬಾಕಿ ಇರುವ ಹಣವನ್ನು ಮುಂದಿನ ತಿಂಗಳು ಕೊಡುವುದಾಗಿ ಹೇಳಿ, ಇದ್ದ ಇನ್ನು ಸ್ವಲ್ಪ ಹಣದಲ್ಲಿ ಸಂದೀಪ್, ಸಂತೋಷ್ ನಾನು ಮೂರು ಜನ ಸೇರಿ ಪಾರ್ಟಿ ಮಾಡಿದೆವು. ತಳಾರಿ ನಾಗರಾಜ್ ಸತ್ತು ವಾರಗಳೇ ಕಳೆದರೂ ಆರೋಪಿಗಳು ಯಾರೆಂದು ಪತ್ತೆಯಾಗಿಲ್ಲವೆಂದು ತಿಳಿಯಿತು. ಆದರೆ ಕಾಲುವೆಗೆ ಇಳಿಯುವಾಗ ನಮ್ಮೂರಿನ ಪುನೀತ್‌ಕುಮಾರ್ ಮತ್ತು ಶಾಂತಮ್ಮ ಎಂಬುವವರು ನನ್ನನ್ನು ನೋಡಿದ್ದರು. ಅವರೇನಾದರೂ ಪೊಲೀಸರಿಗೆ ತಿಳಿಸಿದರೆ ಮಾತ್ರ ನಾನು ಸಿಕ್ಕಿಹಾಕಿಕೊಳ್ಳುತ್ತೇನೆಂಬ ಅನುಮಾನ ಇದ್ದು ಯಾರಿಗೂ ನನ್ನ ಮೇಲೆ ಅನುಮಾನ ಬಾರದ ರೀತಿಯಲ್ಲಿ ನಡೆದುಕೊಂಡಿದ್ದೆನು. ಆದರೆ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದ ನನ್ನನ್ನು ತಳಾರಿ ಕೊಲೆಗೆ ಸಂಬಂಧಿಸಿದಂತೆ ವಿಚಾರಣೆಗೆ ಬರುವಂತೆ ಕರೆದು ಲಾಕ್ ಮಾಡಿಕೊಂಡರು ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿದನು.

ನಂತರ ಆರೋಪಿ ಮಾಧವನನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಹರೀಶ್ ಲೇಔಟ್ ಪಕ್ಕದಲ್ಲಿದ್ದ ಟಾಯ್ಲೆಟ್ ರೂಂ ಶೀಟ್ ಕೆಳಗಡೆ ಬಚ್ಚಿಟ್ಟಿದ್ದ ಚಾಕುವನ್ನು ಹಾಗೂ ರೇಷ್ಮೆಹುಳು ಸಾಕಾಣಿಕೆ ಮನೆಯಲ್ಲಿ ರಕ್ತದ ಕಲೆಯಾಗಿದ್ದ ಬಟ್ಟೆಗಳು, ಕೃತ್ಯಕ್ಕೆ ಉಪಯೋಗಿಸಿದ್ದ ದ್ವಿಚಕ್ರ ವಾಹನವನ್ನು ತೋರಿಸಿದ್ದು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಪೊಲೀಸರು ಆರೋಪಿ ಮಾಧವನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೊಲೆ ಪ್ರಕರಣದಲ್ಲಿ ಯಾವುದೇ ಸಾಕ್ಷಿ ಆಧಾರಗಳು ಇಲ್ಲದಿದ್ದರೂ ಕುರಿಗಾಯಿಗಳು ಕೊಟ್ಟ ಸಣ್ಣ ಸುಳಿವಿನ ಮೇರೆಗೆ ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಲು ಯಶಸ್ವಿ ಕಾರ್ಯಾಚರಣೆ ನಡೆಸಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಎಸ್ಪಿ ಬಿ. ನಿಖಿಲ್‌ರವರು ಶ್ಲಾಘಿಸಿದ್ದಾರೆ. ☯


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079.

ಮೊ : 9513892666

ಕ್ರೈಂ ಪ್ರಪಂಚ

# ಆ ಕಲ್‌ಪ್ರಿಟ್ ಯಾರು?

ಈ ಶೀರ್ಷಿಕೆಯ ಜೊತೆ ಆ ಕಲ್‌ಪ್ರಿಟ್ ರೇಪಿಸ್ಟ್ ಯಾರು ಎಂಬುದನ್ನು ಸೇರಿಸಬೇಕು. ಅದು ಅವಳಿಗೇ ತಿಳಿದಿರಲಿಲ್ಲ. ಅವಳ ಮೇಲೆ ಎರಡು ರಾತ್ರಿ ಒಂದು ಹಗಲು ಸತತವಾಗಿ ಅತ್ಯಾಚಾರ ನಡೆದಿದ್ದರೂ ಸಹ ಆ ರೇಪಿಸ್ಟ್ ಯಾರು ಅಂತ ಗೊತ್ತಿಲ್ಲ. ಇದು ಹೇಗೆ ಸಾಧ್ಯ ?

ಅವಳನ್ನು ಕಿಡ್ನಾಪ್ ಮಾಡಿದ್ದವರು ಗುರುತು ಸಿಗದಂತೆ ಗೆಟಪ್ ಬದಲಿಸಿ ಕೊಂಡಿದ್ದರು. ನಂತರ ಅವಳು ಸದಾ ಅಮಲಿನಲ್ಲಿರುವಂತೆ ಆಗಾಗ ಕುಡಿಸುತ್ತಿದ್ದರು. ಆ ಕ್ಷಣಗಳಲ್ಲಿ ಅವಳಿಗೆ ಅಮಲಿನ ಜೊತೆಗೆ ಶೃಂಗಾರದಾಟಗಳ ಕಾಮ ಪ್ರಚೋದನೆಯಿಂದ ಸ್ಪಂದಿಸಿದ್ದಳು. ಅತ್ಯಾಚಾರ ಅಲ್ಲ! ಸಹಕಾರದಸಂಭೋಗ. ಅವಳನ್ನುಮಾದಕತೆ ಎಂಬ ಅಮಲಿನಲ್ಲಿ ತೇಲಿಸಿ, ಅವಳು ಸಹಜ ಸ್ಥಿತಿಯಲ್ಲಿ ಇಲ್ಲದಿರುವಾಗ, ಅವಳ ಮನಃಪೂರ್ವಕ ಅನುಮತಿ ಇಲ್ಲದಿರುವಾಗ ಕಾಮದಾಟ ಆಡಿದ್ದರಿಂದ ಅದು ಅತ್ಯಾಚಾರ ಆಗಿದೆ.

ಮೂರು ದಿನಗಳ ನಂತರ ಅವಳನ್ನು ಬಿಡುಗಡೆ ಮಾಡಿದ್ದರು. ಅವಳು ಕಾಲೇಜಿನ ಕ್ಯಾಂಪಸ್ ಪ್ರೋಗ್ರಾಂಗೆ ಹೋಗ್ತೀನಿ. ನಾಲ್ಕು ದಿನಗಳ ನಂತರ ಮನೆಗೆ ಬರ್ತೀನಿ ಅಂತ ಹೇಳಿದ್ದರಿಂದ ಯಾರಿಗೂ ಅನುಮಾನ ಬರಲಿಲ್ಲ ಮತ್ತು ಅತ್ಯಾಚಾರದ ವಿಷಯ ಬಹಿರಂಗ ಆಗಿರಲಿಲ್ಲ.

ಅನಾಮಿಕ ಅತ್ಯಾಚಾರಿಯ ಕುಡಿತದ ಅಮಲಿನ ಬಂಧನದಿಂದ ಬಂದ ಮೇಲೆ ನೇರವಾಗಿ ಗೆಳತಿಯ ಮನೆಗೆ ಬಂದು ಅಲ್ಲಿ ವಿಶ್ರಾಂತಿ ಪಡೆದಿದ್ದಳು. ಅತ್ಯಾಚಾರ ಆಗಿದ್ದರೆ ಅವಳ ದೇಹದ ಹಲವಾರು ಕಡೆ ಗಾಯಗಳಾಗಿರುತ್ತಿದ್ದವು. ಆದರೆ ಅಮಲಿನಲ್ಲೇ ಆಗಿದ್ದರೂ ಸಹ ಅನುಭವ ಮಾಡಿಕೊಳ್ಳುತ್ತಾ ಸಹಕರಿಸಿದ್ದರಿಂದ ದೈಹಿಕ ತೊಂದರೆ ಆಗಿರಲಿಲ್ಲ.

ತಂದೆ-ತಾಯಿಗೆ ಮನೆಯಲ್ಲಿ ನಾಲ್ಕು ದಿನಗಳ ಕ್ಯಾಂಪಸ್ ಎಂದು ಹೇಳಿದ್ದಳು. ಗೆಳತಿಯ ಮನೇಲಿ ಒಂದು ದಿನ ಉಳಿದು ವಿಶ್ರಾಂತಿ ಪಡೆದು, ಅಭ್ಯಂಜನ ಸ್ನಾನ ಮಾಡಿ ಫ್ರೆಶ್ ಆಗಿ ಮನೆಗೆ ಬಂದಿದ್ದಳು. ಮನೆಗೆ ಬಂದ ಕೂಡಲೇ ತಂದೆ ತಾಯಿ ಆತಂಕದಿಂದ ಕೇಳಿದ್ದರು. ತಮ್ಮ ಪ್ರಶ್ನೆ ಮಾಡಿದ್ದರು. ಮೂರು ನಾಲ್ಕು ಸಲ ಫೋನ್ ಮಾಡಿದ್ದರೂ ನೀನ್ಯಾಕೆ ಅಟೆಂಡ್ ಮಾಡಿರಲಿಲ್ಲ.

ಉತ್ತರಿಸಲಾಗದೆ ಚಡಪಡಿಸಿದ್ದಳು.

ಆಗ ಅವಳ ತಮ್ಮ ''ಪ್ರತಿ ಸಲ ಫೋನ್ ಮಾಡಿದಾಗಲೂ ಪ್ರೊಫೆಸರ್ ಉತ್ತರಿಸುತ್ತಿದ್ದರು. ಪದ್ಮಿನಿ ರೀಸರ್ಚ್ ರಿಪೋರ್ಟ್ ಬರೆಯುತ್ತಿದ್ದಾರೆ ಅಂತ ಹೇಳಿದ್ದರು. ಮತ್ತೊಂದು ಸಲ, ಕೋಟೆ ಆವರಣದಲ್ಲಿ ಐತಿಹಾಸಿಕ ವೀಕ್ಷಣೆ ಮಾಡುತ್ತಿದ್ದಾರೆ ಅಂತ ಹೇಳಿದ್ದರು. ನೀನು... ನೀನು ರಾತ್ರಿ ಕ್ಯಾಂಪಸ್‌ಗೆ ಬಂದ ಮೇಲಾದರೂ ಫೋನ್ ಮಾಡಬಹುದಿತ್ತು'' ಎಂದು ಅಬ್ಜೆಕ್ಷನ್ ಮಾಡಿದನು.

ಅವಳು ''ಬೆಳಗಿನಿಂದ ತಿರುಗಾಡಿ ಆಯಾಸ ಆಗಿರುತ್ತಿತ್ತು. ಜೊತೆಗೆ ನಾವು ನೋಡಿದ್ದ ಇತಿಹಾಸದ ಸ್ಥಳಗಳ ಬಗ್ಗೆ ಪ್ರೊಫೆಸರ್‌ಗಳ ಜೊತೆ ರಾತ್ರಿ ತುಂಬಾ ಹೊತ್ತು ಚರ್ಚೆ ಮಾಡಬೇಕಾಗುತ್ತಿತ್ತು. ಹಾಗಾಗಿ ಮರೆತುಬಿಟ್ಟಿದ್ದೆ.''

ಅವಳ ಬಗ್ಗೆ ವಿಶ್ವಾಸ ಇದ್ದ ಕಾರಣದಿಂದ ಅನುಮಾನ ಬರಲಿಲ್ಲ. ಅವಳು ಮರುದಿವಸ ಸಹ ಕಾಲೇಜಿಗೆ ಹೋಗಲಿಲ್ಲ. ಮನೇಲಿ ಯಾರೂ ಇಲ್ಲದಿರುವಾಗ ಫೋನ್ ಮಾಡಿದಳು.

ಅವನು ಆದಿತ್ಯ...!

●●●

ಈಗವಳು ''ಆದಿತ್ಯ ನಿನ್ನ ಜೊತೆ ಪರ್ಸನಲ್ ಆಗಿ ಮಾತಾಡ್ಬೇಕು'' ಎಂದಳು.

ಆದಿತ್ಯ ಯಾರು? ಇವಳ ತಮ್ಮನ ಪರಮಾಪ್ತ ಗೆಳೆಯ ಮತ್ತು ಈ ಕುಟುಂಬದವರಲ್ಲಿ ಒಬ್ಬನಾಗಿ, ಮನೆಯ ಮತ್ತೊಬ್ಬ ಮಗ ಎಂಬಂತೆ ಇದ್ದನು. ಆದಿತ್ಯ-ಪದ್ಮಿನಿ. ಸಮವಯಸ್ಕರು. ಅವರಿಬ್ಬರು ಒಂದೇ ಕಾಲೇಜಿನಲ್ಲಿ ಓದುತ್ತಿದ್ದರು. ಅವನು ಸೈನ್ಸ್ ಸ್ಟುಡೆಂಟ್. ಇವಳು ಹಿಸ್ಟರಿ! ಪ್ರತಿದಿವಸ ಆದಿತ್ಯನ ಬೈಕಲ್ಲಿ ಹೋಗಿ ಬರುತ್ತಿದ್ದಳು. ಎಲ್ಲಿಗೆ ಹೋಗಬೇಕಾದರೂ ಅಂದರೆ, ಶಾಪಿಂಗ್, ಸಿನಿಮಾ ಅಥವಾ ಫ್ರೆಂಡ್ಸ್ ಮನೆಗೆ ಹೋಗಬೇಕಾದರೂ ಇವನಿಗೆ ಫೋನ್ ಮಾಡುತ್ತಿದ್ದಳು. ಅವನು ಟೂ ವೀಲರ್ ತರುತ್ತಿದ್ದನು.

ತಂದೆ-ತಾಯಿ ಮತ್ತು ಸ್ವಂತ ತಮ್ಮನಿಗಿಂತ ಆದಿತ್ಯನ ಜೊತೆ ಆತ್ಮೀಯತೆ, ಸಲಿಗೆ ಮತ್ತು ಒಡನಾಟ ಇತ್ತು.

ಅವಳು ತನ್ನ ಮನೋಭಾವನೆಯನ್ನು ಮತ್ತು ಅಂತರಂಗದ ಆಲೋಚನೆಗಳನ್ನು ಇವನ ಹತ್ತಿರ ತೆರೆದುಕೊಳ್ಳುತ್ತಿದ್ದಳು. ಅವಳ ಬದುಕಲ್ಲಿ ಆಕಸ್ಮಿಕವಾಗಿ ನಡೆದು ಹೋಗಿರುವ ಘಟನೆಗಳ ಬಗ್ಗೆ ಅವನ ಹತ್ತಿರ ಹೇಳಬೇಕು. ಅವಳ ಉದ್ದೇಶ ಬೇರೆ ಇದೆ! ಅದನ್ನು ಅವಳು ಹೇಳಲು ಭೇಟಿಗಾಗಿ ಕಾಯುತ್ತಿದ್ದಾಳೆ. ಪುನಹ ಆದಿತ್ಯ ಫೋನ್ ಮಾಡಿದನು.

''ಪದ್ಮಿನಿ... ನಾನೀಗ ಫ್ರೀಯಾಗಿದ್ದೀನಿ. ನಿಮ್ಮನೇಗೆ ಬರ್ಲಾ?''

''ಬೇಡ... ಬೇಡ...''

''ಅರೆ... ಯಾಕೆ?''

''ನಾನೀಗ ನಿನ್ನ ಹತ್ತಿರ ಹೇಳಲಿರುವ ವಿಚಾರ ಮನೆಯವರಿಗೆ ಗೊತ್ತಾಗಬಾರದು. ನಾವು ಮಾತಾಡುತ್ತಿರುವಾಗ ಸಡನ್ ಆಗಿ ಯಾರಾದರೂ ಬಂದರೆ ತೊಂದರೆ ಆಗುತ್ತದೆ.''

''ನಮ್ಮ ಮಾತಿಗೆ ಬಾ.''

''ಮನೆಗಳಲ್ಲಿ ಬೇಡ. ನೀನು ಬೈಕ್ ತಗೊಂಡು ಸರ್ಕಲ್‌ಗೆ ಬಂದು ಮಿಸ್ ಕಾಲ್ ಕೊಡು. ನಾನು ಅಲ್ಲಿಗೆ ಬರ್ತೀನಿ. ಯಾವುದಾದರೂ ಲೋನ್ಲಿ ಪ್ಲೇಸಲ್ಲಿ ಮಾತಾಡಿದರಾಯಿತು.''

''ರೋಸ್ ಗಾರ್ಡನ್‌ಗೆ ಹೋಗಣ್ವ?''

''ಅಲ್ಲಿ ಜನಗಳು ತುಂಬಾ ಇರುತ್ತಾರ?''

''ಸಂಜೆ ವೇಳೆ ಇರುತ್ತಾರೆ. ಈ ಟೈಂಲ್ಲಿ ಅಲ್ಲಿಗೆ ಯಾರೂ ಬರೋಲ್ಲ.''

''ಓಕೆ ಬೇಗ ಬಾ.''

●●●

ಎತ್ತ ಕಡೆ ನೋಡಿದರೂ ಗುಲಾಬಿ ಹೂವಿನ ಗಿಡಗಳು ಕಂಡು ಬರುತ್ತಿದೆ. ಎಲ್ಲೋ ದೂರದಲ್ಲಿ ಮೂರು ಮಂದಿ ಹರಟೆ ಹೊಡೆಯುತ್ತಾ ಕಲ್ಲಿನ ಬೆಂಚಿನ ಮೇಲೆ ಕುಳಿತಿದ್ದಾರೆ. ಪದ್ಮಿನಿ ಗಿಡಗಳ ನಡುವೆ ನಿಂತಿದ್ದಾಳೆ. ಅವಳ ಮುಖದ ಭಾವನೆಗಳು ಬದಲಾಗಿ ಕೋಪ, ಆವೇಶ, ವ್ಯಗ್ರತೆಯ ಛಾಯೆ ಕಂಡು ಬರುತ್ತಿದೆ.

ಆದಿತ್ಯ ಗಾಬರಿಯಿಂದ ''ಪದ್ಮಿನಿ... ಯಾಕೆ... ಏನಾಯಿತು?''

ಅವಳು ಕೋಪವನ್ನು ಕಂಟ್ರೋಲ್ ಮಾಡಿಕೊಂಡು ಮಾತಾಡುತ್ತಿದ್ದಾಳೆ. ಆ ಘಟನೆಯ ಬಗ್ಗೆ ಹೇಳುತ್ತಿದ್ದಾಳೆ. ಆದಿತ್ಯನಿಗೆ ಗಾಬರಿಯಾಗಿದೆ. ಕ್ಷಣಗಳಲ್ಲಿ ಕೋಪ, ಆವೇಶ ಉಂಟಾಗಿ ಮುಷ್ಠಿ ಬಿಗಿಯುತ್ತಿದ್ದಾನೆ. ಹಲ್ಲು ಕಡಿಯುತ್ತಿದ್ದಾನೆ.

''ಏ ಪದ್ಮಿನಿ... ಆ ಲೋಫರ್ ರೇಪಿಸ್ಟ್ ಯಾರು ಅಂತ ಹೇಳು. ನಾನು ಜೈಲಿಗೆ ಹೋದರೂ ಪರವಾಗಿಲ್ಲ. ಅವನನ್ನು ಕೊಲೆ ಮಾಡ್ತೀನಿ.''

ಅವಳು ಹತ್ತಿರ ಬಂದು ಅವನ ಭುಜದ ಮೇಲೆ ಕೈ ಹಾಕುತ್ತಾ ''ಏ... ಏ... ನನ್ನ ಬಗ್ಗೆ ನಿನಗಿರುವ ಅಭಿಮಾನ, ಸ್ನೇಹ, ಆತ್ಮೀಯತೆ ಬಗ್ಗೆ ನನಗೆ ಗೊತ್ತಿದೆ. ಆದರೆ ಆವೇಶದಿಂದ ದುಡುಕಿದರೆ ಇಬ್ಬರಿಗೂ ತೊಂದರೆ ಆಗುತ್ತೆ.''

''ಏನು... ಏನಂದೆ?''

''ನಿನಗೆ ಜೈಲು ಶಿಕ್ಷೆ ಆಗುತ್ತೆ. ನಾನು ಶೀಲ ಕಳೆದುಕೊಂಡಿರೋದು ಬಹಿರಂಗ ಆಗುತ್ತೆ.''

ಅವನ ಆವೇಶ ಕಡಿಮೆ ಆಯಿತು.

ಅವಳು ತುಂಬಾ ಮೆಲ್ಲಗೆ ''ಆ ಕಾಮುಕ ಯಾರು ಅಂತ ಪತ್ತೆ ಮಾಡ್ಬೇಕು. ಇನ್ನು ಮುಂದೆ ಯಾವತ್ತೂ ಸಹ ಹೆಣ್ಣಿನ ತಂಟೆಗೆ ಹೋಗಬಾರದು ಆ ರೀತಿ ಮಾಡಬೇಕು. ಮೊದಲು ಅವನ್ಯಾರು ಅಂತ ಪತ್ತೆ ಮಾಡ್ಬೇಕು.''

''ಪೊಲೀಸರಿಗೆ ತಿಳಿಸೋಣ.''

ಅವಳು ಕೋಪದಿಂದ 'ಬುದ್ಧಿ ಇದ್ಯ ನಿಂಗೆ. ಇದರಿಂದ ನಾಲ್ಕು ಗೋಡೆ ಮಧ್ಯೆ ನಡೆದಿರೋದು ಇಡೀ ರಾಜ್ಯಕ್ಕೆ ಗೊತ್ತಾಗುತ್ತೆ'' ಎಂದಳು.

''ಹಾಗಾದರೆ ಏನು ಮಾಡೋಣ?''

''ನೀನೊಂದು ಸಲ ನಮ್ಮ ಮನೆಗೆ ಒಬ್ಬ ಪೊಲೀಸ್ ಆಫೀಸರ್‌ನ ಕರೆದುಕೊಂಡು ಬಂದಿದ್ದೆ. ಆಮೇಲೆ ಅವರು ನನ್ನ ಬರ್ತ್‌ಡೇಗೆ ಸಹ ಬಂದ್ರು.''

ಆದಿತ್ಯನ ಮುಖ ಅರಳಿತು.

''ಹೇ... ಅವರು ಇನ್ಸ್‌ಪೆಕ್ಟರ್ ದೇವಗನ್. ನನಗಿಂತ ಎರಡು ವರ್ಷಕ್ಕೆ ದೊಡ್ಡವನು. ನನ್ನ ಅಮ್ಮನ ಕಡೆಯ ದೂರದ ಸಂಬಂಧಿ. ಅವನು ಪೊಲೀಸ್ ಕೆಲಸಕ್ಕೆ ಸೇರಿ ಆರು ತಿಂಗಳಾಗಿದೆ. ಇಲಾಖೆಯಲ್ಲಿ ಎಮಿನೆಂಟ್ ಅಂಡ್ ಇಂಟೆಲಿಜೆಂಟ್ ಪೊಲೀಸ್ ಆಫೀಸರ್ ಅನ್ನೋ ಹೆಸರಿದೆ. ನಾವಿಬ್ಬರು ಕ್ಲೋಸ್ ಫ್ರೆಂಡ್ಸ್ ರೀತಿ ಇದ್ದೀವಿ. ಅವನಿಂದ ಏನಾಗಬೇಕು ಹೇಳು.''

ಅವಳು ಹೇಳುತ್ತಿದ್ದಾಳೆ. ಆದಿತ್ಯ ''ಆಗಲಿ ನಾನು ಈ ವಿಚಾರ ಮಾತಾಡ್ತೀನಿ. ಅವನು ಈ ಪ್ರಕರಣದ ರಹಸ್ಯ ತನಿಖೆ ಮಾಡಿ ಆ ರೇಪಿಸ್ಟ್ ಯಾರು ಅಂತ ಪತ್ತೆ ಮಾಡ್ತಾನೆ.''

''ಬಟ್... ಇದು ಆಫ್ ದಿ ರೆಕಾರ್ಡ್ ಆಗ್ಬೇಕು. ಅನ್ ಅಫಿಷಿಯಲ್ ಆಗಿ ತನಿಖೆ ಮಾಡ್ಬೇಕು. ಇದಕ್ಕೆ ಒಪ್ಪುತ್ತಾನ?''

''ನಾನು ಹೇಳಿದರೆ ಒಪ್ಪುತ್ತಾನೆ.''

''ಹಾಗಾದರೆ ಫೋನ್ ಮಾಡು.''

''ಬೇಡ... ನಾನೇ ಡೈರೆಕ್ಟ್ ಆಗಿ ಮೀಟ್ ಮಾಡಿ ಈ ವಿಚಾರ ಹೇಳ್ತೀನಿ.''

''ಓಕೆ ಕ್ಯಾರಿ ಆನ್.''

ಅವನು ಬೈಕ್ ಕಡೆ ಹೋಗುತ್ತಿದ್ದಾನೆ. ಪದ್ಮಿನಿ ಹಿಂಭಾಲಿಸುತ್ತಿದ್ದಾಳೆ.

''ಏ ಆದಿತ್ಯ ನಿಲ್ಲು... ನಿಲ್ಲು...''

ಅವನು ಹಿಂತಿರುಗಿದನು.

ಅವನ ಎಡಗೈ ಕಡೆ ನೋಡುತ್ತಾ ''ಏ... ನಿನ್ನ ಕೈಬೆರಳಿಗೆ ಏನಾಗಿದೆ?''

ಎಡಗೈ ಬೆರಳಿಗೆ ಬ್ಯಾಂಡೇಜ್ ಹಾಕಲಾಗಿದೆ. ಅವನು ''ಓ... ಇದಾ... ಫೋನ್‌ನಲ್ಲಿ ಮಾತಾಡುತ್ತಾ ಬಾಗಿಲ ಸಂಧಿಯಲ್ಲಿ ಕೈ ಇಟ್ಟಿದ್ದೆ. ನಮ್ಮ ಮನೆ ಕೆಲಸದ ಹೆಂಗಸು ಬಂದು ಬಾಗಿಲು ಹಾಕಿದ್ಲು. ನನ್ನ ಬೆರಳಿಗೆ ಗಾಯವಾಗಿ ತುಂಬಾ ರಕ್ತ ಹೋಯಿತು.''

''ತುಂಬಾ ನೋವಾಗಿದ್ಯ ?''

''ಪೆಯಿನ್ ಕಿಲ್ಲರ್ ಇಂಜೆಕ್ಷನ್ ತಗೊಂಡು ಮೇಲೆ ನೋವು ಕಡಿಮೆ ಆಗಿದೆ.''

ಬೈಕ್ ಸ್ಟಾರ್ಟ್ ಆಗಿದೆ. ಅವರಿಬ್ಬರ ಪ್ರಯಾಣ ಸಾಗುತ್ತಿದೆ.

●●●

ಮಧ್ಯಾಹ್ನ ಎರಡು ಗಂಟೆ! ಆದಿತ್ಯನ ಮನೆಯ ಹಿಂಭಾಗದಲ್ಲಿರುವ ಔಟ್‌ಹೌಸ್‌ನಲ್ಲಿ ಪೊಲೀಸ್ ಆಫೀಸರ್ ದೇವಗನ್ ನಿಂತಿದ್ದಾನೆ. ಎದುರಿಗೆ ಅವರಿಬ್ಬರಿದ್ದಾರೆ.

ಪದ್ಮಿನಿ-ಆದಿತ್ಯ ! ಆದಿತ್ಯ ಈ ಪೊಲೀಸ್ ಅಧಿಕಾರಿಗೆ ನಿಗೂಢ ಅತ್ಯಾಚಾರದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದನು. ''ಪದ್ಮಿನಿ... ಆದಿತ್ಯನಿಗೋಸ್ಕರ ಆಫ್ ದಿ ರೆಕಾರ್ಡ್ ಆಗಿ ಡೀಲಿಂಗ್ ಮಾಡ್ತೀನಿ.''

''ಥ್ಯಾಂಕ್ ಯೂ ಸಾರ್.''

''ಲೆಟ್ ಅಸ್ ದಿ ಕಮ್ ಟು ದಿ ಪಾಯಿಂಟ್.''

''ಕೇಳಿ ಸಾರ್.'

''ನೀವು ಮನೆಯಿಂದ ಫಂಕ್ಷನ್‌ಗೆ ಅಂತ ಯಾರ ಮನೆಗೆ ಹೋಗಿದ್ರಿ ?''

''ನನ್ನ ಫ್ರೆಂಡ್ ರೇವತಿ ಮನೇಲಿ ನ್ಯೂವ್ ಈಯರ್ ಡೇ ಸಲಬರೇಷನ್ ಇತ್ತು. ಅವಳ ತಂದೆ ವೆಸ್ಟ್ರನ್ ಕಲ್ಚರ್‌ನ ಪ್ರಭಾವಕ್ಕೆ ಒಳಗಾಗಿದ್ದರು. ಗುಂಡು-ತುಂಡಿನ ಪಾರ್ಟಿ ಸಹ ಇತ್ತು. ಬೇರೊಂದು ಕಡೆ ಸಸ್ಯಾಹಾರದ ವ್ಯವಸ್ಥೆ ಮಾಡಿದ್ರು.''

''ಫಂಕ್ಷನ್ ಯಾವಾಗ ಮುಗೀತು?''

''ಹನ್ನೆರಡು ಗಂಟೆಗೆ ಸರಿಯಾಗಿ ಕೇಕ್ ಕಟ್ ಮಾಡಿ ಹೊಸ ವರ್ಷದ ವೆಲ್‌ಕಮ್ ಮಾಡ್ಬೇಕು ಅಂತ ಅಂದುಕೊಂಡಿದ್ರು. ಆದರೆ ರೇವತಿಯ ತಾಯಿಗೆ ಮೈಲ್ಡ್ ಆಗಿ ಹಾರ್ಟ್ ಅಟ್ಯಾಕ್ ಆಗಿದ್ದರಿಂದ ಒಂಭತ್ತೂವರೆ ಹೊತ್ತಿಗೆ ಫಂಕ್ಷನ್ ಮುಗೀತು.''

''ಓಕೆ ಆಮೇಲೆ ನೀವು ಮನೆಗೆ ಬಂದ್ರಾ ? ನಿಮ್ಮ ಜೊತೆ ಯಾರಿದ್ರು ?''

ಆದಿತ್ಯ ಕೂಡಲೇ ''ದೇವಗನ್... ಇವಳು ನನಗೆ ಫೋನ್ ಮಾಡಿದ್ದರೆ ನಾನು ಹೋಗಿ ಕರ್ಕೊಂಡು ಬರ್ತಿದ್ದೆ'' ಎಂದನು.

ದೇವಗನ್ ರೇಗಿದನು.

''ಪದ್ಮಿನಿನಾ ವಿಚಾರಣೆ ಮಾಡುವಾಗ ನೀನು ಮಧ್ಯೆ ಮಾತಾಡ್ಬೇಡ.''

''ಐಯಾಮ್ ಸಾರಿ.''

''ಈಗ ಹೇಳು ಪದ್ಮಿನಿ. ನಿನ್ನ ಜೊತೆ ಮನೆಗೆ ಡ್ರಾಪ್ ಮಾಡಲು ಬಂದಿದ್ದು ಯಾರು?''

''ಗೊತ್ತಿಲ್ಲ... ಗೊತ್ತಿಲ್ಲ ದೇವಗನ್.''

''ವಾಟ್ ನಾನ್‌ಸನ್ಸ್ ಯೂ ಆರ್ ಟಾಕಿಂಗ್. ನಿನ್ನನ್ನು ಡ್ರಾಪ್ ಮಾಡಲು ಬಂದಿದ್ದು ಯಾರು ಅಂತ ಗೊತ್ತಿಲ್ವ? ಯಾರೋ ಅಪರಿಚಿತನ ಜೊತೆ ನೀನು ರಾತ್ರಿ ವೇಳೆ ಹೊರಟು ಬಂದ್ಯಾ ?''

ಅವಳು ತುಂಬಾ ಮೆಲ್ಲಗೆ ''ಸಾರಿ ದೇವಗನ್... ನ್ಯೂವ್ ಈಯರ್ ಪಾರ್ಟಿಯಲ್ಲಿ ಗೆಳತಿಯರು ಕೂಲ್ ಡ್ರಿಂಕ್ಸ್ ಜೊತೆ ವಿಸ್ಕಿ ಬೆರೆಸಿದ್ದರು. ಆಮೇಲೆ ಬಲವಂತ ಮಾಡಿ ಬಿಯರ್ ಕುಡಿಸಿದ್ದರು. ಅಮಲು ತಲೆಗೇರಿತ್ತು. ಹಾಗಾಗಿ ನನಗೇನೂ ಗೊತ್ತಾಗಲಿಲ್ಲ.''

ದೇವಗನ್ ''ಛೇ... ಛೇ... ಕುಡಿತದ ಅಭ್ಯಾಸ ಇಲ್ಲದವರಿಗೆ ಯಾಕೆ ಕುಡಿಸಿ ಆಟ ಆಡ್ತಾರೆ'' ಎಂದು ಗೊಣಗಿದನು. ನಂತರ ''ಕಮಾನ್... ಈಗಲೇ ರೇವತಿಯ ಮನೆಗೆ ಹೋಗಿಬರೋಣ'' ಎಂದನು.

ಅವಳು ಗಾಬರಿಯಿಂದ ''ಯಾಕೆ?''

''ಆ ರಾತ್ರಿ ನಿನ್ನನ್ನು ಅವಳು ಯಾರ ಜೊತೆ ಕಳಿಸಿದಳು ಅಂತ ತಿಳಿಯಬೇಕು.''

''ನಾನು ಬರಲೇಬೇಕಾ?''

''ನಾನು ಯೂನಿಫಾರಂ ಇಲ್ಲದೆ ಬರ್ತೀನಿ. ಇದು ಅನ್ ಅಫಿಷಿಯಲ್. ನೀನು ಇದ್ದರೆ ಅವಳು ಬಾಯಿ ಬಿಡುತ್ತಾಳೆ.''

ಅವಳು ತಲೆಯಾಡಿಸಿದಳು.

ಈಗ ಮೂವರು ಪೊಲೀಸ್ ಜೀಪಲ್ಲಿ ರೇವತಿಯ ಮನೆ ಇರುವ ಬಡಾವಣೆಯ ಕಡೆ ಹೊರಟರು.

●●●

ಸರ್ಕಲ್‌ನಲ್ಲಿರುವ ರಸ್ತೆಯ ತಿರುವಿನಲ್ಲಿ ಪೊಲೀಸ್ ಜೀಪು ನಿಂತಿದೆ. ಮೂವರೂ ಇಳಿದು ಸ್ವಲ್ಪ ದೂರ ನಡೆದುಕೊಂಡು ಅವಳ ಮನೆಗೆ ಬಂದರು. ರೇವತಿ ಮನೆ ಮುಂಭಾಗದಲ್ಲಿರುವ ಗಾರ್ಡನ್‌ನಲ್ಲಿ ನಿಂತು ಯಾರೊಂದಿಗೋ ಫೋನ್‌ನಲ್ಲಿ ಮಾತಾಡುತ್ತಿದ್ದಳು. ಇವರನ್ನು ಕಂಡು ನಗುತ್ತಾ ಸ್ವಾಗತಿಸಿ ಫೋನ್ ಲಿಂಕ್ ಕಟ್ ಮಾಡಿದಳು.

ಪದ್ಮಿನಿ ಈಗ ಆದಿತ್ಯ ಮತ್ತು ದೇವಗನ್‌ರನ್ನು ಪರಿಚಯ ಮಾಡಿಸಿದಳು. ''ಇವರು ಪೊಲೀಸ್ ಇನ್ಸ್‌ಪೆಕ್ಟರ್. ನನ್ನ ತಾಯಿಯ ಕಡೆಯ ದೂರದ ಸಂಬಂಧಿ. ನನ್ನ ಜೊತೆ ಶಾಪಿಂಗ್ ಅಂತ ಬಂದಿದ್ದಾರೆ. ನಿನ್ನ ನೆನಪು ಬಂತು. ಅದಕ್ಕೆ ವೆಲ್‌ಕಮ್'' ಎಂದು ಎಲ್ಲರನ್ನೂ ಮನೆಯ ಒಳಗೆ ಕರೆತಂದಳು.

ಮನೇಲಿ ಯಾರೂ ಇರಲಿಲ್ಲ. ರೇವತಿ ತಾನೇ ಟೀ ಮಾಡಿದಳು. ಬೇಕರಿ ಐಟಂ ತಂದಿಟ್ಟಳು.

ದೇವಗನ್ ಈಗ ರೇವತಿಯ ಕಡೆ ನೋಡುತ್ತಾ ''ಮೇಡಂ... ಡಿಸೆಂಬರ್ 31ರ ರಾತ್ರಿ ನಿಮ್ಮ ಮನೇಲಿ ನ್ಯೂವ್ ಈಯರ್ ಡೇ ಫಂಕ್ಷನ್ ಸಲಬರೇಟ್ ಮಾಡಿದ್ರಿ ಅಲ್ವ?''

''ಹೌದು ಸಾರ್.''

''ಫಂಕ್ಷನ್ ಮುಗಿದ ಮೇಲೆ ಬಂದಿದ್ದವರೆಲ್ಲಾ ಎಷ್ಟು ಹೊತ್ತಿಗೆ ಹೋದ್ರು ?''

''ಒಂಭತ್ತೂವರೆಗೆ.''

''ನಿಮ್ಮ ಗರ್ಲ್ ಫ್ರೆಂಡ್ಸ್‌ಗಳು ಗುಂಡಿನ ಪಾರ್ಟಿ ಮಾಡಿದ್ರು ಅಲ್ವ?''

ರೇವತಿ ನಗುತ್ತಾ ''ಅವರಿಗೆಲ್ಲಾ ಬಿಯರ್ ಚಪಲ-ಚಟ ಇದೆ. ಕೆಲವರು ಹಾಟ್ ಡ್ರಿಂಕ್ಸ್ ತಗೋತಾರೆ'' ಎಂದು ಪದ್ಮಿನಿಯ ಕಡೆ ತಿರುಗಿ ''ಪಾಪ... ಇವಳಿಗೆ ಈ ಕುಡಿತದ ಅಭ್ಯಾಸ ಇರಲಿಲ್ಲ. ಆದರೆ ಕೆಲವು ತರ್ಲೆ ಯುವತಿಯರು ಇವಳಿಗೆ ಗೊತ್ತಾಗದಂತೆ ಕೂಲ್ ಡ್ರಿಂಕ್ಸ್‌ನಲ್ಲಿ ಮಿಕ್ಸ್ ಮಾಡಿದ್ರು ಮತ್ತು ಆಮೇಲೆ ಸಹ ಬಲವಂತ ಮಾಡಿ ಬಿಯರ್ ಕುಡಿಸಿದ್ರು. ಇವಳಿಗೆ ಅದು ಮೊದಲ ಸಲ ಆಗಿದ್ದರಿಂದ ವಿಪರೀತ ಅಮಲೇರಿ ನಿಂತಲ್ಲೇ ತೂರಾಡುತ್ತಿದ್ದಳು.

''ಅವಳು ಆ ರಾತ್ರಿ ಇಲ್ಲೇ ಮಲಗಿದ್ಲಾ?''

''ನಮ್ಮ ಮನೇಲಿ ಉಳಿಸಿಕೊಳ್ಳಬೇಕು ಅಂತ ಅನ್ಕೊಂಡಿದ್ದೆ.

☞ 10

# ಆಧಾರ್-ಪಾನ್‌ಗೆ ಕೈ ತುಂಬ ಸಾಲ ನೀಡಿ ಊರು ಬಿಡಿಸಿ ಮಹಿಳೆಯರನ್ನು ಬಲಿ ಪಡೆದ ಮೈಕ್ರೋ ಫೈನಾನ್ಸ್!

**ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುಮತಿ ಇಲ್ಲದೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಬಡ್ಡಿ ದಂಧೆ ನಡೆಸಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ನಗದು ರೂಪದಲ್ಲಿ ನೂರಾರು ಕೋಟಿ ಸಾಲವನ್ನು ವಾರ, ತಿಂಗಳು ಲೆಕ್ಕದಲ್ಲಿ ಬಡ್ಡಿಗೆ ಕೊಡಲಾಗಿದೆ. ಕೆಲವೆಡೆ ರಾಷ್ಟ್ರೀಕೃತ ಬ್ಯಾಂಕ್ ಮುಖಾಂತರ ಗ್ರಾಮದ ಅಭಿವೃದ್ಧಿಗೆ ಕಡಿಮೆ ಬಡ್ಡಿ ದರದಲ್ಲಿ ಹಣ ನೀಡಲಾಗುತ್ತಿದೆ ಎಂದು ಹೇಳಿಕೊಂಡು ಸಂಘಗಳನ್ನು ರಚಿಸಿಕೊಂಡು ದಂಧೆ ನಡೆಸಲಾಗುತ್ತಿದೆ ಎಂದು ಸಾರ್ವಜನಿಕರು ಗುಸುಗುಡುತ್ತಿದ್ದಾರೆ.**

**ರಾಮನಗರ**

✍ ಶಾಂತರಾಜು ಜಿ. ಕಲ್ಲಹಳ್ಳಿ

ಸರ್ಕಾರದ ಅನುಮತಿ ಹಾಗೂ ಬ್ಯಾಂಕ್ ದಾಖಲೆಗಳ ಕುರಿತು ಪ್ರಶ್ನಿಸಿದವರ ಮೇಲೆ ಫೈನಾನ್ಸ್ ಸಂಸ್ಥೆಗಳ ಸಿಬ್ಬಂದಿ ಅವ್ಯಾಚ್ಯ ಶಬ್ದಗಳಲ್ಲಿ ನಿಂದಿಸುತ್ತಾರೆ. ಕೆಲವೆಡೆ ಮನೆಗಳಿಗೆ ನುಗ್ಗಿ ದಾಂಧಲೆ ನಡೆಸಿರುವ


ಬಾಗಿಲ ಮೇಲೆ ನೋಟೀಸ್ ಅಂಟಿಸಿರುವುದು

ಸಂಬಂಧ ಹಲವು ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗಿವೆ. ಆದರೆ ಪೊಲೀಸರು ದಾಖಲೆ ಪರಿಶೀಲಿಸಿ ಕ್ರಮ ಕೈಗೊಳ್ಳುವ ಬದಲು ಫೈನಾನ್ಸ್ ಸಂಸ್ಥೆಗಳೊಂದಿಗೆ ಕೈ ಜೋಡಿಸಿರುವ ಆರೋಪಗಳು ಸಾರ್ವಜನಿಕರದ್ದಾಗಿದೆ. ಸಾಲ ಮರುಪಾವತಿಸಲಾಗದೆ ಕಿರುಕುಳ ಕೊಡುತ್ತಿರುವ ಬಗ್ಗೆ ಠಾಣೆಗೆ ದೂರು ಕೊಟ್ಟರೆ ಪಡೆದಿರುವ ಸಾಲವನ್ನು ಪಾವತಿಸಲೇಬೇಕೆಂದು ಪೊಲೀಸರೇ ಧಮ್ಕಿ ಹಾಕುವ ಮೂಲಕ ಕ್ರಮ ದಂಧೆಗೆ ಸಹಕಾರ ನೀಡುತ್ತಿದ್ದಾರೆಂದು ಆರೋಪಗಳು ಎಲ್ಲೆಡೆ ಕೇಳಿ ಬರುತ್ತಿವೆ.


ಮೃತೆಯ ಮಗ

ರಾಜ್ಯದಲ್ಲಿ ಬಡ್ಡಿ ದಂಧೆಗೆ ಸಂಬಂಧಿಸಿದಂತೆ ಉಡುಪಿಯ ಹೆಬ್ಬ ಪೊಲೀಸ್ ಠಾಣೆಯಲ್ಲಿ ಒಂದು, ಪಡುಬಿದ್ರಿ ಠಾಣೆಯಲ್ಲಿ ಒಂದು, ದಕ್ಷಿಣ ಕನ್ನಡದ ಉಪ್ಪಿನಂಗಡಿ ಠಾಣೆಯಲ್ಲಿ 2, ಕಡಬ ಪೊಲೀಸ್ ಠಾಣೆಯಲ್ಲಿ 2, ವಿಠಲ ಪೊಲೀಸ್ ಠಾಣೆಯಲ್ಲಿ 2, ಬಂಟ್ವಾಳ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ಸೇರಿ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗಿವೆ. ಎಲ್ಲ ಪ್ರಕರಣಗಳಲ್ಲಿ ಎನ್‌ಸಿಆರ್ (ನಾನ್ ಕಾಗ್ನಿಜೆಬಲ್ ಅಫೆನ್ಸ್) ದಾಖಲಿಸಿಕೊಂಡು ದೂರುದಾರರನ್ನು ಕಳುಹಿಸಲಾಗಿದೆ.


ಸಾಲದ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ಯಶೋದಮ್ಮ

ಡಿಜಿಪಿಯವರ ಸೂಚನೆ ಏನೆಂದರೆ ಸಿವಿಲ್ ವ್ಯಾಜ್ಯಗಳನ್ನು ಕೋರ್ಟ್‌ನಲ್ಲೇ ಇತ್ಯರ್ಥಪಡಿಸಿಕೊಳ್ಳಬೇಕೆಂದು ಕೋರ್ಟ್‌ನ ಸ್ಪಷ್ಟ ಆದೇಶವಿದೆ. ಈ ಆದೇಶ ಪ್ರತಿಯನ್ನು ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಿಗೆ ಕಳುಹಿಸಿ, ಸಿವಿಲ್ ಪ್ರಕರಣಗಳಲ್ಲಿ ಮೂಗು ತೂರಿಸದಂತೆ ಡಿಜಿಪಿ ಸೂಚನೆ ಕೊಟ್ಟಿದ್ದಾರೆ. ಇದಲ್ಲದೆ ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳ ಅಕ್ರಮ ಬಡ್ಡಿ ದಂಧೆಯ ದಾಖಲೆಗಳನ್ನು ನ್ಯಾಯುತವಾಗಿ ಪರಿಶೀಲಿಸಿ ಕಾನೂನುಬಾಹಿರ ಚಟುವಟಿಕೆ ನಡೆಸುತ್ತಿದ್ದಲ್ಲಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳುವಂತೆ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

### ರಾಜ್ಯದಲ್ಲಿ ಮೂವರು ಮಹಿಳೆಯರು ಆತ್ಮಹತ್ಯೆ ?

ಮೈಕ್ರೋ ಫೈನಾನ್ಸ್ ಕಂಪನಿಯ ಕಿರುಕುಳಕ್ಕೆ ಬೇಸತ್ತು ಮೈಸೂರಿನ ನಂಜನಗೂಡು ತಾಲ್ಲೂಕಿನ ಅಂಬಳೆ ಗ್ರಾಮದ ಇಬ್ಬರು ಮಹಿಳೆಯರು ನಾಲ್ಕು ತಿಂಗಳ ಹಿಂದೆ ಈ ಕಂಪನಿ ಸೇರಿ ಕೆಲವು ಬ್ಯಾಂಕ್‌ಗಳಲ್ಲಿ ಸಾಲ ಮಾಡಿದ್ದ ಪರಿಣಾಮ, ಸಾಲ ಮರುಪಾವತಿ ಕಿರುಕುಳಕ್ಕೆ ಬೇಸತ್ತು ಮರ್ಯಾದೆಗೆ ಹೆದರಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಇತ್ತೀಚೆಗೆ ರಾಮನಗರ ಜಿಲ್ಲೆ/ ತಾಲ್ಲೂಕಿನ ತಿಮ್ಮಯ್ಯನದೊಡ್ಡಿ ಗ್ರಾಮದ ಯಶೋದಮ್ಮ (60) ರವರು ಏಳು ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸುಮಾರು 4.60 ಲಕ್ಷ ರೂ. ಸಾಲ ಪಡೆದಿದ್ದ ಈಕೆ ವಾರಕ್ಕೆ, 15 ದಿನಕ್ಕೊಮ್ಮೆ ಹಾಗೂ ತಿಂಗಳ ಕಂತುಗಳಲ್ಲಿ ಹಣ ಕಟುತ್ತಿದ್ದರು. ಕೂಲಿ ಕೆಲಸ ಮಾಡಿಕೊಂಡಿದ್ದ ಯಶೋದಮ್ಮಗೆ ಅನಾರೋಗ್ಯ ಹಾಗೂ ಇನ್ನಿತರ ಕಾರಣಗಳಿಂದಾಗಿ ಇತ್ತೀಚೆಗೆ ಸಾಲ ಮರುಪಾವತಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಈ ಮೈಕ್ರೋ ಫೈನಾನ್ಸ್ ಕಂಪನಿಯ ಪ್ರತಿನಿಧಿಗಳು ಮನೆಗೆ ಬಂದು ನಿಂದಿಸಿ ಕಿರುಕುಳ ಕೊಟ್ಟಿದ್ದರು. ಜನವರಿ 20ರಂದು ಸಂಜೆ ಮನೆಗೆ ಬಂದಿದ್ದ ಎರಡು ಕಂನಿಗಳ ಪ್ರತಿನಿಧಿಗಳು ಬೆದರಿಕೆ ಹಾಕಿದ್ದರು. ಸಾಲ ತೀರಿಸಲು ಸಾಧ್ಯವಾಗದಿದ್ದರೆ ಎಲ್ಲಾದರೂ ಹೋಗಿ ಸಾಯಿ ಎಂದು ನಿಂದಿಸಿದ್ದರು. ಇಂತಹ ಮಾತುಗಳಿಂದ ಮನನೊಂದ ಯಶೋದಮ್ಮ ಸೋಮವಾರ ಜನವರಿ 20ರಂದು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈಕೆಯ ಪತಿ ನೀಡಿದ ದೂರು ಪರಿಗಣಿಸಿ ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು 7 ಕಂಪನಿಗಳ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇದರಲ್ಲಿ ಹಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.


ಮೈಕ್ರೋ ಫೈನಾನ್ಸ್‌ನ ವ್ಯವಸ್ಥಾಪಕರನ್ನು ಕರೆದು ಸಭೆ ನಡೆಸುತ್ತಿರುವ ಜಿಲ್ಲಾ ಎಸ್ಪಿ


ಜಿಲ್ಲಾ ಎಸ್ಪಿ ಎಸ್. ಶ್ರೀನಿವಾಸಗೌಡ

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಗೃಹ ಸಾಲದ ಹೆಸರಲ್ಲೂ ಲೋನ್ ಕೊಡಿಸಿ ಕಿರುಕುಳ ಕೊಡುತ್ತಿದ್ದು, 10 ಲಕ್ಷ ರೂ. ಸಾಲ ಕೊಡಿಸಿದರೆ ಆರಂಭದಲ್ಲೇ 2.50 ಲಕ್ಷ ರೂ. ಕಟ್ಟು ಮಾಡಿಕೊಂಡು 7.50 ಲಕ್ಷ ರೂ. ಕೊಡಲಾಗುತ್ತದೆ. ಆದರೆ ಸಾಲ ಪಡೆದ ವ್ಯಕ್ತಿ ನಿರ್ಧಿಷ್ಟ ಸಮಯಕ್ಕೆ ಕಂತುಗಳ ರೂಪದಲ್ಲಿ 10 ಲಕ್ಷ ರೂ. ಮರುಪಾವತಿಸಬೇಕು. ಇಲ್ಲದಿದ್ದರೆ ಕಿರುಕುಳ ನೀಡಲಾಗುತ್ತಿದೆ. ಏಜೆನ್ಸಿಗಳ ಹೆಸರಲ್ಲಿ ಬ್ಯಾಂಕ್‌ಗಳಿಂದ ಸಾಲ ಕೊಡಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ನೊಂದವರು ಅಳಲು ತೋಡಿಕೊಂಡಿದ್ದಾರೆ.


ಠಾಣೆಯಲ್ಲಿ ಮೃತೆಯ ಮಗ

### ಮೈಕ್ರೋ ಫೈನಾನ್ಸ್‌ನ ಬಡ್ಡಿ ದಂಧೆ?

★ 50 ಸಾವಿರ ರೂ.ನಿಂದ 5 ಲಕ್ಷ ರೂ.ವರೆಗೆ ಕಿರುಸಾಲ ನೀಡಿಕೆ.

★ ಶೇ. 20-25 ಬಡ್ಡಿಯಂತೆ ವಾರ, ತಿಂಗಳ ರೂಪದಲ್ಲಿ ವಿತರಣೆ.

★ ಆಧಾರ್ ಕಾರ್ಡ್, ಪಾನ್ ಕಾರ್ಡ್ ನಕಲು ಪ್ರತಿ ಪಡೆದು ಯಾವುದೇ ಭದ್ರತೆ ಇಲ್ಲದೆ ಸಾಲ ಕೊಡುವುದು.

★ ಸುಲಭವಾಗಿ ಸಾಲ ಸಿಗುತ್ತದೆಯೆಂದು ಹಣ ಪಡೆಯುತ್ತಿರುವ ಜನರು.


★ ಬಡ್ಡಿ ಪಾವತಿಸುವುದು ಒಂದು ದಿನ ತಡವಾದರೂ ಕಿರುಕುಳ ಆರಂಭ.


★ ಕೆಲವೆಡೆ ಹಣ ಪಾವತಿಸದವರ ಮನೆ ಮುಂದೆ ಬೋರ್ಡ್ ಪ್ರತ್ಯಕ್ಷ. (ಬಾಗಿಲ ಮೇಲೆ ನೋಟಿಸ್ ಅಂಟಿಸುವುದು).

★ ಮಾನಕ್ಕೆ, ಮರ್ಯಾದೆಗೆ ಅಂಜಿ ಮನೆ, ಗ್ರಾಮಗಳನ್ನು ತೊರೆಯುತ್ತಿರುವ ಗ್ರಾಮೀಣರು.

ಇತ್ತೀಚೆಗೆ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ಕೂಟಗಲ್ ಹೋಬಳಿಯ ಕೋನಮುದ್ದನಹಳ್ಳಿ ಗ್ರಾಮದಲ್ಲಿ ಕೂಲಿ ಮಾಡಿ ಜೀವನ ಕಟ್ಟಿಕೊಂಡಿದ್ದ ಇರುಳಿಗೆ ಕುಟುಂಬಗಳು ಮೈಕ್ರೋ ಫೈನಾನ್ಸ್‌ನಲ್ಲಿ ಪಡೆದ ಸಾಲ ಕಟ್ಟಲಾಗದೆ ಸುಮಾರು 6ರಿಂದ 8 ಕುಟುಂಬಗಳು ಮನೆಗೆ ಬೀಗ ಹಾಕಿ ಕುಟುಂಬ ಸಮೇತ ಊರು ಬಿಟ್ಟು ಹೋಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಬಡ ಕುಟುಂಬಗಳನ್ನೇ ಗುರಿಯಾಗಿಸಿಕೊಂಡಿರುವ ಫೈನಾನ್ಸ್‌ಗಳು ಮೂರು, ನಾಲ್ಕು ಜನರ ಒಂದು ಗುಂಪು ಮಾಡಿ ಸಾಲ ನೀಡಿ ನಂತರ ವಸೂಲಾತಿ ಮಾಡುತ್ತಿವೆ. ಕೋನುಮುದ್ದನಹಳ್ಳಿಯ ಸಾಲ ಪಡೆದ ಇರುಳಿಗ ಕುಟುಂಬಗಳಿಗೆ ಯಾವುದೇ ಜಮೀನು ಇಲ್ಲ. ಇವರಿಗೆ ಚಿಕ್ಕ ಚಿಕ್ಕ ಮನೆಗಳೇ ಆಧಾರ.

☞ 15


ರಾಮನಗರದ ಕೋನಮುದ್ದನಹಳ್ಳಿ ಗ್ರಾಮ


ಬಾಗಿಲು ಹಾಕಿಕೊಂಡು ಊರು ಬಿಟ್ಟಿರುವುದು


ಎಚ್ಚರಿಕೆ ಸಭೆ ನಡೆಸುತ್ತಿರುವ ಜಿಲ್ಲಾ ಎಸ್ಪಿ

## ಗೋಕಾಕ ಸಿಪಿಐ ಸುರೇಶಬಾಬು ಮತ್ತು ಸಿಬ್ಬಂದಿಗಳ ಮಿಂಚಿನ ಕಾರ್ಯಾಚರಣೆ...

# ಜಾತ್ರೆಯಲ್ಲಿ ನಡೆದ ಜಗಳದ ವೈಷಮ್ಯ ಭುಗಿಲೆದ್ದು ಯುವಕನೊಬ್ಬನನ್ನು ಬರ್ಬರವಾಗಿ ಕೊಚ್ಚಿ... ಕೊಚ್ಚಿ ಕೊಲೆಗೈದ ಹಂತಕರು!



ಜಾತ್ರೆ ಜಗಳದಲ್ಲಿ ಬಲಿಯಾದ ಪ್ರಕಾಶ ಮಾರುತಿ ಹಿರಟ್ಟಿ

**ಆತ 26 ವರ್ಷದ ಟಿಪ್ಪರ್ ಚಾಲಕ. ತಮ್ಮೂರಿನ ಜಾತ್ರೆಯಲ್ಲಿ ಐನಾತಿ ಯುವಕನೊಬ್ಬ ವಿನಾಕಾರಣ ಕಾಲು ಕೆದರಿ ಜಗಳ ಮಾಡಿದ್ದನು. ಇದೇ ಕಾರಣಕ್ಕೆ ಟಿಪ್ಪರ್ ಚಾಲಕ ಮತ್ತು ಐನಾತಿ ಯುವಕನ ನಡುವೆ ನಡೆದ ಜಗಳ ವಿಕೋಪಕ್ಕೆ ತಿರುಗಿತ್ತು. ಊರಿನ ಕೆಲವು ಹಿರಿಯರು ಐನಾತಿ ಯುವಕನಿಗೆ ಬುದ್ಧಿಮಾತು ಹೇಳಿ ಎಚ್ಚರಿಕೆ ನೀಡಿದ್ದರು. ಇದೇ ಕಾರಣಕ್ಕೆ ಟಿಪ್ಪರ್ ಚಾಲಕನ ಮೇಲೆ ಹಗೆ ಸಾಧಿಸತೊಡಗಿದ ಯುವಕ 'ನಿನ್ನನ್ನು ನೋಡಿಕೊಳ್ಳುವುದಾಗಿ' ಗುರಾಯಿಸತೊಡಗಿದನು. 'ತನಗೆ ಊರಿನಲ್ಲಿ ಮುಖಭಂಗ ಮಾಡಿದ ಟಿಪ್ಪರ್ ಚಾಲಕ ಬದುಕಿರಬಾರದು' ಎಂದು ನಿರ್ಧರಿಸಿ ಇಬ್ಬರು ಅಪ್ರಾಪ್ತ ಯುವಕರು ಸೇರಿದಂತೆ ಐದು ಜನ ಸ್ನೇಹಿತರೊಂದಿಗೆ ಸೇರಿ ಐನಾತಿ ಯುವಕ ಸದ್ದಿಲ್ಲದೇ ಸಂಚು ರೂಪಿಸಿದನು. ಇತ್ತೀಚಿಗೆ ಪಕ್ಕದೂರಿನ ಜಾತ್ರೆಗೆಂದು ಏರ್ಪಡಿಸಿದ್ದ ರಸಮಂಜರಿ ಕಾರ್ಯಕ್ರಮ ನೋಡಿ ತಿರುಗಿ ಮಧ್ಯರಾತ್ರಿ ತನ್ನ ಸ್ನೇಹಿತನೊಂದಿಗೆ ಬೈಕ್ ಮೇಲೆ ಹೊರಟಿದ್ದ ಟಿಪ್ಪರ್ ಚಾಲಕ. ಮೊದಲೇ ಕೊಲೆಗೆ ಸಂಚು ರೂಪಿಸಿದ್ದ ಐನಾತಿ ಯುವಕ ಸೇರಿದಂತೆ ಎಂಟು ಜನರ ಗುಂಪೊಂದು ರಸ್ತೆ ಮಧ್ಯ ಕಾಯ್ದು ಕುಳಿತು ತಲವಾರ್, ಜಂಭೆ, ಚಾಕುವಿನಿಂದ ಟಿಪ್ಪರ್ ಚಾಲಕನ ಮೇಲೆ ದಾಳಿ ಮಾಡಿ ಬರ್ಬರವಾಗಿ ಕೊಚ್ಚಿ... ಕೊಚ್ಚಿ ಕೊಲೆಗೈದು ಪರಾರಿಯಾಗಿದ್ದರು. ಕೊಲೆ ಪ್ರಕರಣವನ್ನು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನಿರ್ದೇಶನದಲ್ಲಿ ಸವಾಲಾಗಿ ಸ್ವೀಕರಿಸಿದ ಸಿಪಿಐ ಸುರೇಶಬಾಬು, ಪಿಎಸ್ಐ ಕಿರಣ ಮೋಹಿತೆ ಮತ್ತು ಸಿಬ್ಬಂದಿಗಳು 24 ಗಂಟೆಯಲ್ಲಿ ಹಂತಕರನ್ನು ಬಂಧಿಸಿದ ವರದಿ ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಗೋಕಾಕ ಗ್ರಾಮೀಣ ಠಾಣೆ ವ್ಯಾಪ್ತಿಯ ಕೊಳವಿ ಗ್ರಾಮದಿಂದ ಮೂಡಿ ಬಂದಿದೆ.**

ಒಂದು ಸಲ ಸೇಡು ಮನುಷ್ಯನ ತಲೆ ಸೇರಿಕೊಂಡರೆ ಸಾಕು. ಆತ ಏನು ಮಾಡುತ್ತಾನೆ ಎಂದು ಊಹಿಸುವುದು ಕಷ್ಟ. ಅದರಲ್ಲೂ ಅವಮಾನದ ಸೇಡಿನ ಅಂತ್ಯ ಬಹಳಷ್ಟು ಭೀಕರವಾಗಿರುತ್ತದೆ. ಇದಕ್ಕೆ ಜೀವಂತ ಉದಾಹರಣೆಗಳು ನಮ್ಮ ನಡುವೆ ಸಾಕಷ್ಟು ನಡೆದು ಹೋಗುವುದು ಸರ್ವೇ ಸಾಮಾನ್ಯ. ಇದಕ್ಕೆ ನಿದರ್ಶನವೆಂಬಂತೆ ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೊಳವಿ ಗ್ರಾಮದ 26 ವರ್ಷದ ಯುವಕ ಪ್ರಕಾಶ ಮಾರುತಿ ಹಿರಟ್ಟಿ ಎಂಬಾತನು ಇನ್ನಿಲ್ಲದಂತೆ ಬರ್ಬರವಾಗಿ ಕೊಲೆಯಾಗಿ ಹೋಗಿದ್ದಾನೆ. ಅದೇ ಗ್ರಾಮದ ಉಂಡಾಡಿಗುಂಡ ಮಹಾಹರಾಮಿ ವಿಜಯಕುಮಾರ ಅಲಿಯಾಸ್ ಕುಮಾರ ಮಲ್ಲಪ್ಪ ನಾಯಿಕ ಎಂಬ ದುಷ್ಟನು ನಿಷ್ಪಾಪಿ ತರುಣ ಪ್ರಕಾಶನನ್ನು ತನ್ನ ಇಬ್ಬರು ಅಪ್ರಾಪ್ತ ಯುವಕರು, ಐದು ಜನ ಸ್ನೇಹಿತರೊಂದಿಗೆ ಸೇರಿಕೊಂಡು ಮಕರ ಸಂಕ್ರಮಣದ 'ಕರಿದಿನ' ಕಗ್ಗೊಲೆ ಮಾಡಿದ್ದಾನೆ. ಕೊಲೆಯ ಕಾರಣವನ್ನು ಕೆದಕುತ್ತ ಹೋದಾಗ ವಿನಾಕಾರಣವಾಗಿ ನಡೆದ ಜಗಳದ ವೈಷಮ್ಯವೇ ಕಾರಣ ಎನ್ನಲಾಗಿದೆ.



ಎಂಟು ಜನ ಹಂತಕರಿಂದ ಬರ್ಬರವಾಗಿ ಕೊಲೆಯಾದ ಪ್ರಕಾಶ ಹಿರಟ್ಟಿಯ ಶವ

ಹರೆಯದ ಮಗ ಪ್ರಕಾಶನನ್ನು ಕಳೆದುಕೊಂಡು ತಂದೆ-ತಾಯಿ ದಿಕ್ಕು ತೋಚದಂತೆ ಎದೆ-ಎದೆ ಬಡಿದುಕೊಂಡು ರೋಧಿಸುತ್ತಿದ್ದಾರೆ. 23ರ ಹರೆಯದ ಹೆಂಡತಿ ಆರತಿ ವಿಧವೆಯಾಗಿ ತನ್ನ ಒಂದೂವರೆ ವರ್ಷದ ಪುಟ್ಟ ಮಗಳನ್ನು ಕಂಕುಳಲ್ಲಿಟ್ಟುಕೊಂಡು ಕಂಗಾಲಾಗಿದ್ದಾಳೆ. ಒಟ್ಟಿನ ಮೇಲೆ ತೀರಾ ಸಣ್ಣ ವಿಷಯಕ್ಕೆ ಆರಂಭಗೊಂಡ ಜಗಳ ಪ್ರಕಾಶನನ್ನು ಅನಾಮತ್ತಾಗಿ ಬಲಿ ತೆಗೆದುಕೊಂಡಿದೆ. ಇದರ ಕುರಿತಾಗಿ 'ಪೊಲೀಸ್ ನ್ಯೂಸ್' ವಿಸ್ತೃತವಾದ ವರದಿ ನೀಡಿದೆ.

**ದುರ್ದೈವಿ ತರುಣ ಪ್ರಕಾಶ ಹಿರಟ್ಟಿ...**

ಎಲ್ಲರಂತೆ ಹೆಂಡತಿ... ಮಕ್ಕಳು, ತಂದೆ-ತಾಯಿ, ಸಂಸಾರ ಎಂದೆಲ್ಲ ಬಾಳಿ ಬದುಕಬೇಕು. ಬದುಕಿನಲ್ಲಿ ಏನಾದರೂ ಸಾಧಿಸಬೇಕು ಎಂಬ ಅದಮ್ಯ ಆಸೆ ಕೊಳವಿಯ ಪ್ರಕಾಶ ಮಾರುತಿ ಹಿರಟ್ಟಿಯಲ್ಲಿ ಇತ್ತು. ಕಳೆದ ಮೂರು ವರ್ಷಗಳ ಹಿಂದಷ್ಟೇ ಆರತಿ ಎಂಬಾಕೆಯೊಡನೆ ಮದುವೆಯಾಗಿದ್ದನು. ಆಗಲೇ ಆತನಿಗೆ ಒಂದೂವರೆ ವರ್ಷದ ಹೆಣ್ಣು ಮಗುವಿತ್ತು. ಮನೆಯಲ್ಲಿ ತಂದೆ ಮಾರುತಿ, ತಾಯಿ ನಾಗವ್ವ ಮತ್ತು ದೊಡ್ಡಪ್ಪ ಸುಭಾಸ ಯಲ್ಲಪ್ಪ ಹಿರಟ್ಟಿ ಕುಟುಂಬದೊಂದಿಗೆ ಕೂಡಿಕೊಂಡು ಒಂದೇ ಮನೆಯಲ್ಲಿ ವಾಸವಾಗಿದ್ದನು. ಇದ್ದ ಸ್ವಲ್ಪ ಜಮೀನಿನಲ್ಲಿ ಒಕ್ಕಲುತನವನ್ನೇ ನಂಬಿ ಹಿರಟ್ಟಿ ಕುಟುಂಬ ಬದುಕಿನ ಬಂಡಿ ಸಾಗಿಸುತ್ತಿತ್ತು.

**ಟಿಪ್ಪರ್ ಚಾಲಕನಾಗಿದ್ದ ಪ್ರಕಾಶ...**

ತಕ್ಕಮಟ್ಟಿಗೆ ಓದಿದ್ದ ಪ್ರಕಾಶನು ತುಂಬಾ ಮಹತ್ವಾಕಾಂಕ್ಷಿ ಆಗಿದ್ದವನು. ಕೊಳವಿ-ಗೋಕಾಕ ನಡುವೆ ಸತತ ಸಂಪರ್ಕವಿದ್ದ ಈತ ಉತ್ತಮವಾದ ಡ್ರೈವಿಂಗ್ ಕಲಿತುಕೊಂಡಿದ್ದನು. ಕಳೆದ ಸುಮಾರು ದಿನಗಳಿಂದಲೂ ಯಾದಗಿರಿಯಲ್ಲಿ ಟಿಪ್ಪರ್ ಚಾಲಕನಾಗಿ ದುಡಿಯಲು ಹೋಗಿದ್ದನು. ತಿಂಗಳಿಗೊಮ್ಮೆ... ಎರಡು ತಿಂಗಳಿಗೊಮ್ಮೆ ಊರಿಗೆ ಬಂದು ನಾಲ್ಕಾರು ದಿನವಿದ್ದು ಹೋಗುತ್ತಿದ್ದನು. ಬಂದಾಗ ಖಾಲಿ ಕುಳಿತುಕೊಳ್ಳದೇ ಒಕ್ಕಲುತನದಲ್ಲಿ ತೊಡಗುತ್ತಿದ್ದನು. ಕಷ್ಟಾಳುವಾಗಿದ್ದ ಈತ ಶರೀರದಿಂದಲೂ ದಷ್ಟ-ಪುಷ್ಟನಾಗಿದ್ದನು. ತಂದೆ-ತಾಯಿಗೆ ಪ್ರೀತಿಯ ಮಗನಾಗಿದ್ದನು. ಹೆಂಡತಿಗೆ ಒಳ್ಳೆಯ ಗಂಡನಾಗಿದ್ದನು. ಊರಿನ ಯುವಕರಿಗೆ ಅತ್ಯುತ್ತಮ ಸ್ನೇಹಿತನಾಗಿದ್ದನು. ಇಂತಹ ಪ್ರಕಾಶ ಹಿರಟ್ಟಿ ಇದ್ದಕ್ಕಿದ್ದಂತೆ ಹಳೆಯ ದ್ವೇಷದ ಕಿಚ್ಚಿಗೆ ಸಂಕ್ರಮಣದ ಪರ್ವ ಕಾಲದಲ್ಲಿ ಕ್ರೂರವಾಗಿ ತನ್ನೂರಿನ ವಿಜಯಕುಮಾರ ಅಲಿಯಾಸ್ ಕುಮಾರ ಮಲ್ಲಪ್ಪ ನಾಯಿಕ ಮತ್ತು ಆತನ ಸ್ನೇಹಿತರಿಗೆ ಅನಾಮತ್ತಾಗಿ ಬರ್ಬರವಾಗಿ ಕೊಲೆಯಾಗಿ ಹೋಗಿದ್ದಾನೆ.

**ಬೆಳಗಾವಿ**
✍ ಮನ್ನಾಪೂರ

ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟು ಸೇಡು ತೀರಿಸಿಕೊಳ್ಳಲು ಹೋಗಿ ಹಂತಕನಾದ ವಿಜಯಕುಮಾರ ನಾಯಿಕ ತನ್ನೊಂದಿಗೆ ಇಬ್ಬರು ಅಪ್ರಾಪ್ತ ಯುವಕರು ಮತ್ತು ಐದು ಜನ ಸ್ನೇಹಿತರನ್ನು ಹಂತಕರನ್ನಾಗಿಸಿ ಜೈಲಿನಲ್ಲಿ ಎಲ್ಲರೂ ಸೇರಿ ಮುದ್ದೆ ಮುರಿಯುತ್ತಿದ್ದಾರೆ. ಇಂದು ಎಲ್ಲರ ಕುಟುಂಬಗಳು ಬೀದಿಗೆ ಬಿದ್ದಿವೆ.

**ಜಾತ್ರೆಯಲ್ಲಿ ನಡೆದ ಜಗಳ...**

ಕೊಳವಿ ಗ್ರಾಮದ ಪ್ರಸಿದ್ಧ ದೇವರೆಂದು ಭಾವಿಸಲಾದ ಗುಳಿ ಬಸವೇಶ್ವರ ಜಾತ್ರೆ ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ಜರುಗಿತ್ತು. ಜಾತ್ರೆಗಾಗಿ ಪ್ರಕಾಶ ಹಿರಟ್ಟಿ ಕೂಡಾ ಯಾದಗಿರಿಯಿಂದ ಬಂದಿದ್ದನು. ಜಾತ್ರೆಯ ಸಂದರ್ಭದಲ್ಲಿ ತಮ್ಮ ದೊಡ್ಡಪ್ಪನ ಮಗನಾದ ಶಂಕರ ಸುಭಾಸ ಹಿರಟ್ಟಿ ಎಂಬಾತನ ಜತೆಗೆ ಕೊಳವಿ ಗ್ರಾಮದ ವಿಜಯಕುಮಾರ ನಾಯಿಕ ಎಂಬುವವನು ವಿನಾಕಾರಣ ಕಾಲು ಕೆದರಿ ಜಗಳ ಮಾಡಿ ಹೊಡಿ-ಬಡಿ ಮಾಡಿದ್ದನು. ಇದೇ ಸಂದರ್ಭದಲ್ಲಿ ಟಿಪ್ಪರ್ ಚಾಲಕ ಪ್ರಕಾಶ ಹಿರಟ್ಟಿ ಜಗಳ ಬಿಡಿಸಿ ವಿಜಯಕುಮಾರ ನಾಯಿಕನನ್ನು ದಬಾಯಿಸಿದ್ದನು. ಆವಾಗ ವಿಜಯಕುಮಾರನಿಗೂ ಮತ್ತು ಪ್ರಕಾಶನಿಗೂ 'ನೀನು... ನಾನು' ಎಂದು ಬಾಯಿ... ಬಾಯಿ ತಂಟೆ ತಕರಾರುಗಳು ಜೋರಾಗಿ ನಡೆದಿದ್ದವು.



ಜಗಳದ ವೈಷಮ್ಯದಲ್ಲಿ ಹಂತಕನಾದ ವಿಜಯಕುಮಾರ ನಾಯಿಕ

**ವಿಜಯಕುಮಾರನಿಗೆ ಪಂಚರ ತರಾಟೆ...**

ವಿನಾಕಾರಣ ಜಿದ್ದಿಗೆ ಬಿದ್ದು ಜಗಳ ಮಾಡಿದ್ದ ವಿಜಯಕುಮಾರ ಹುಂಬನಿದ್ದನು. ಯಾರು ಹೇಳಿದರೂ ಕೇಳುವ ಜಾಯಮಾನದವನಲ್ಲ. ಹೀಗಾಗಿ ಊರ ಪಂಚರ ಮುಂದೆ ವಿಜಯಕುಮಾರ ಮಾಡಿದ್ದ ದಾದಾಗಿರಿಯನ್ನು ಪ್ರಕಾಶ ಹಿರಟ್ಟಿ ಮತ್ತು ದೊಡ್ಡಪ್ಪ ಸುಭಾಸ ಹಿರಟ್ಟಿ ಹೇಳಿದಾಗ ಹಿರಿಯರು ವಿಜಯಕುಮಾರನಿಗೆ ಛೀ... ಥೂ... ಎಂದು ಬೈಯ್ದು 'ಇನ್ನೊಮ್ಮೆ ಪ್ರಕಾಶ ಮತ್ತು ಶಂಕರನ ತಂಟೆಗೆ ಹೋಗಬೇಡ' ಎಂದು ವಾರ್ನಿಂಗ್ ಮಾಡಿದ್ದರು. ಇದರಿಂದ ಐನಾತಿ ವಿಜಯಕುಮಾರನಿಗೆ ತೀವ್ರ ಮುಖಭಂಗವಾದಂತಾಗಿ ಒಳಗೊಳಗೆ ಆತ ಪ್ರಕಾಶನ ಮೇಲೆ ವಿಷಕಾರತೊಡಗಿದನು. ಏನೇ ಆಗಲಿ ಹುಂಬ ವಿಜಯಕುಮಾರನಿಂದ ಅಂತರ ಕಾಯ್ದುಕೊಂಡಿರು ಎಂದು ತಂದೆ-ತಾಯಿ, ದೊಡ್ಡಪ್ಪ ಮತ್ತು ಹೆಂಡತಿ ಆರತಿ ಪ್ರಕಾಶನಿಗೆ ಹೇಳಿದ್ದರು.


**ಪಕ್ಯಾS ಮಗನ ನಿನ ಬಿಡುದುಲ್ಲ...**

ಯಾವಾಗ ಜಾತ್ರೆಯಲ್ಲಿ ನಡೆದಿದ್ದ ಘಟನೆಯಿಂದ ವಿಜಯಕುಮಾರ ನಾಯಿಕ ತುಂಬಾ ಅವಮಾನಿತನಾಗಿ ದ್ವೇಷ ಬೆಳೆಸಿಕೊಳ್ಳತೊಡಗಿದನು. ಪ್ರಕಾಶ ಹಿರಟ್ಟಿಯ ಮನೆಯ ಮುಂದೆ ಬಂದು 'ಏS ಮಗನ ಪಕ್ಯಾ ಊರವರ ಮುಂದೆ ನನಗೆ ಅಬರು ತಗದದಿ ನಿನ್ನನ್ನು ಸುಮ್ಮನೆ ಬಿಡುದುಲ್ಲ. ಒಂದು ಕೈ ನೋಡಿಕೊಳ್ಳುತ್ತೇನೆ' ಎಂದು ಜೋರಾಗಿ ಮಾತನಾಡುತ್ತಿದ್ದನು. ಇದರಿಂದ ಪ್ರಕಾಶ ಹಿರಟ್ಟಿ ಮನೆಯ ಜನರಿಗೆ ಏನೋ ದುಗುಡ... ಆತಂಕ ಶುರುವಾಗಿತ್ತು. ಪ್ರಕಾಶ ಹಿರಟ್ಟಿ ಕೂಡಾ ಕಟ್ಟುಮಸ್ತಾಗಿದ್ದವನು. ವಿಜಯಕುಮಾರನಿಗೆ ಪ್ರತ್ಯುತ್ತರವಾಗಿ 'ನಿ, ಏನ ಮಾಡತಿ ಮಾಡಕ್ಕೆ ತುಗೋ... ನಾನು ಎಲ್ಲದಕ್ಕೂ ತಯಾರ ಆಗೇನಿ' ಎನ್ನುತ್ತ ವಾದಿಸತೊಡಗಿದನು. ಇದರಿಂದ ವಿಜಯಕುಮಾರ ಮನಸ್ಸಿನಲ್ಲಿ ವೈಷಮ್ಯದ ಭಾವನೆ ಭುಗಿಲೆದ್ದಿತ್ತು. ಹೇಗಾದರೂ ಸರಿ ಪ್ರಕಾಶ ಹಿರಟ್ಟಿ ಬದುಕಿರಬಾರದು ಎಂದು ಜನೇವರಿ ಮೊದಲ ವಾರದಲ್ಲಿ ನಿರ್ಧರಿಸಿದನು.

**ಪ್ರಕಾಶ ಹಿರಟ್ಟಿ ಕೊಲೆಗೆ ಸಂಚು...**

ಐನಾತಿ ವಿಜಯಕುಮಾರ ನಾಯಿಕ ಜಾತ್ರೆಯಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ನಡೆದ ಜಗಳವನ್ನು ಮರೆತುಬಿಟ್ಟಿದ್ದರೆ ಯಾವ ಅನಾಹುತವು ನಡೆಯುತ್ತಿರಲಿಲ್ಲ. ಅವಮಾನದಿಂದ ಕೊತ... ಕೊತನೇ ಕುದಿಯುತ್ತಿದ್ದ ವಿಜಯಕುಮಾರ ಇತ್ತೀಚಿಗೆ ತನ್ನ ಗುರುತಿನ ಇಬ್ಬರು ಅಪ್ರಾಪ್ತರು ಸೇರಿದಂತೆ ಸ್ನೇಹಿತರಾದ ಉಮೇಶ ಬಾಳಪ್ಪ ಕಂಬಾರ, ಮಾರುತಿ ಯಲ್ಲಪ್ಪ ವಡ್ಡರ, ಅಭಿಲಾಷ ಬಸವರಾಜ ಪಾತ್ರೋಟ, ಮನೋಜ ಅಪ್ಪಣ್ಣ ಪಾತ್ರೋಟ, ರವೀಂದ್ರ ಸುಭಾಸ ಪಾತ್ರೋಟ ಎಂಬುವವರ ಜತೆಗೆ ಕೂಡಿಕೊಂಡು ತನಗಾದ ಅವಮಾನವನ್ನು ವಿವರಿಸಿದನು. ಆದ ಅವಮಾನದ ಸೇಡು ತೀರಿಸಿಕೊಳ್ಳಬೇಕು. ಅದಕ್ಕಾಗಿ ಪ್ರಕಾಶ ಮಾರುತಿ ಹಿರಟ್ಟಿ ಬದುಕಿರಬಾರದು. 'ಎಂತಹುದೇ ಪರಿಸ್ಥಿತಿಯಲ್ಲಿ ಆತನನ್ನು ಕೊಂದು ಹಾಕಿದಾಗಲೇ ತನ್ನ ಸೇಡು ತೀರುತ್ತದೆ. ಇದಕ್ಕಾಗಿ ನೀವು ನನ್ನೊಂದಿಗೆ ಇದ್ದುಕೊಂಡು ಸಹಾಯ ಮಾಡಬೇಕೆಂದು ಹೇಳಿದನು.' ವಿಜಯಕುಮಾರನ ಅಪ್ರಾಪ್ತ ತರುಣರು ಸೇರಿದಂತೆ ಐದು ಜನ ಸ್ನೇಹಿತರು ಒಟ್ಟಾಗಿ 'ಆಯ್ತು ನಿನ್ನ ಜತೆಗೆ ನಾವಿದ್ದೇವೆ, ಎಲ್ಲರೂ ಸೇರಿ ಪ್ರಕಾಶನನ್ನು ಮುಗಿಸಿಬಿಡೋಣ' ಎಂದು ಮುಹೂರ್ತಕ್ಕಾಗಿ ಕಾಯ್ದು ಕುಳಿತರು. ಇದಕ್ಕಾಗಿ ತಲವಾರ್, ಜಂಭೆ, ಚಾಕು ಮುಂತಾದ ಮಾರಕಾಸ್ತ್ರಗಳನ್ನು ಜೋಡಿಸುವ ಕೆಲಸಕ್ಕೆ ಐನಾತಿ ವಿಜಯಕುಮಾರ ಪ್ರಾರಂಭಿಸಿದನು.

## ಕೊಲೆ ನಡೆದ 24 ಗಂಟೆಗಳಲ್ಲಿ 8 ಜನ ಆರೋಪಿಗಳು ಅಂದರ್



ಸ್ನೇಹಿತನಿಗಾಗಿ ಜೈಲು ಸೇರಿದ ಹಂತಕರಾದ ಉಮೇಶ ಬಾಳಪ್ಪ ಕಂಬಾರ, ಮಾರುತಿ ಯಲ್ಲಪ್ಪ ವಡ್ಡರ, ಅಭಿಲಾಷ ಬಸವರಾಜ ಪಾತ್ರೋಟ, ಮನೋಜ ಅಪ್ಪಣ್ಣ ಪಾತ್ರೋಟ, ರವೀಂದ್ರ ಸುಭಾಸ ಪಾತ್ರೋಟ

**ಸಂಕ್ರಮಣದಂದು ಊರಿಗೆ ಬಂದಿದ್ದನು...**

ಗುಳಿ ಬಸವೇಶ್ವರನ ಜಾತ್ರೆ ಮುಗಿಸಿದ ಪ್ರಕಾಶ ಮಾರುತಿ ಹಿರಟ್ಟಿ ಒಂದು ವಾರ ಊರಲ್ಲಿದ್ದನು. ಈ ನಡುವೆ ವಿಜಯಕುಮಾರನ ಜತೆಗೆ ನಡೆದಿದ್ದ ಜಗಳವನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಟಿಪ್ಪರ್ ಚಾಲಕನಾಗಿ ಯಾದಗಿರಿಗೆ ಹೋಗಿದ್ದನು. ಇತ್ತೀಚಿಗೆ ಜನೇವರಿ 14ರಂದು ಸಂಕ್ರಮಣ ಹಬ್ಬವಿತ್ತು. ಹಬ್ಬದ ನಿಮಿತ್ಯ ಕೊಳವಿ ಸಮೀಪದ ಹೂಲಿಕಟ್ಟಿಯಲ್ಲಿ ಶಿವಲಿಂಗೇಶ್ವರ ಜಾತ್ರೆಯಿತ್ತು. ಅದರ ನಿಮಿತ್ಯ ರಸಮಂಜರಿ ಕಾರ್ಯಕ್ರಮ ಕೂಡಾ ಆಯೋಜಿಸಲಾಗಿತ್ತು. ಅಂದು ಯಾದಗಿರಿಯಿಂದ ಊರಿಗೆ ಬರಲು ರಾತ್ರಿ 10 ಗಂಟೆ ಹೊತ್ತಿಗೆ ಮಮದಾಪೂರ ಕ್ರಾಸ್ ಹತ್ತಿರ ಬಂದು ಇಳಿದುಕೊಂಡನು. ತನ್ನ ಸಂಬಂಧಿಕನಾದ ಹಣಮಂತ ಕಡಕೋಳನ ಮೋಟಾರ್ ಬೈಕ್ ತರಿಸಿಕೊಂಡಿದ್ದನು. ಹೇಗೋ ಹೂಲಿಕಟ್ಟಿಯಲ್ಲಿ ರಸಮಂಜರಿ ನೋಡಿಕೊಂಡು ಮನೆಗೆ ಹೋಗೋಣ ಎಂದು ಪ್ರಕಾಶ ನಿರ್ಧರಿಸಿದ್ದನು. ಇಲ್ಲಿ ಪ್ರಕಾಶನ ನಿರ್ಧಾರ ತಪ್ಪಾಗಿತ್ತು. ಅಂದು ರಸಮಂಜರಿ ನೋಡದೆ ನೆಟ್ಟಗೆ ಊರಿಗೆ ಹೋಗಿದ್ದರೆ ಇಂದು ಪ್ರಕಾಶ ಬದುಕಿರುತ್ತಿದ್ದನು. ಐನಾತಿ ವಿಜಯಕುಮಾರ ಮತ್ತು ಸ್ನೇಹಿತರು ಸೇಫಾಗಿ ಇರುತ್ತಿದ್ದರು. ಯಾರೇನು ಮಾಡುವುದು? ವಿಧಿಲಿಖಿತ. ಪ್ರಕಾಶ ತನ್ನ ಹೆಂಡತಿಗೆ ಮೊಬೈಲ್ ಕರೆ ಮಾಡಿ ತಾನು ರಸಮಂಜರಿ ನೋಡಿ ಬರ್ತೀನಿ ಲೇಟಾಗುತ್ತದೆ ಎಂದಿದ್ದನು.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

**ಪ್ರಕಾಶನ ಚಲನವಲನದ ಮೇಲೆ ಕಣ್ಣು...**

ಹೂಲಿಕಟ್ಟಿಯಲ್ಲಿ ರಸಮಂಜರಿ ಕಾರ್ಯಕ್ರಮ ಮತ್ತು ಜಾತ್ರೆಗೆಂದು ಕೊಳವಿಯಿಂದ ಐನಾತಿ ವಿಜಯಕುಮಾರ ನಾಯಿಕ ಮತ್ತು ಆತನ ಐದು ಜನ ಸ್ನೇಹಿತರು ಹಾಗೂ ಇಬ್ಬರು ಅಪ್ರಾಪ್ತರು ಬಂದು ಜಾತ್ರೆಯಲ್ಲಿ ಸುತ್ತು ಹೊಡೆಯುತ್ತಿದ್ದರು. ಇತ್ತ ಪ್ರಕಾಶ ಕೂಡಾ ತನ್ನಿಬ್ಬರು ಪರಿಚಯದವರೊಂದಿಗೆ ದೇವಸ್ಥಾನದ ಹತ್ತಿರ ಕಂಡನು. ಇದನ್ನು ಕಂಡ ವಿಜಯಕುಮಾರನ ಹಂತಕ ಮನಸ್ಸು ಜಾಗ್ರತಗೊಂಡಿತು. ತಕ್ಷಣ ತನ್ನ ಏಳು ಜನ ಸ್ನೇಹಿತರನ್ನು ಕರೆದುಕೊಂಡು ಹೂಲಿಕಟ್ಟಿ ಕೆರೆಯ ಪರಿಸರದಲ್ಲಿ ಬಂದು ಕುಳಿತನು. 'ಇಂದು ಪಕ್ಯಾ ಹೇಗೋ ಬಂದಿದ್ದಾನೆ ಅವನು ತಿರುಗಿ ಹೋಗಬಾರದು' ಎಂದು ಚರ್ಚಿಸಿ ವಾಪಸ್ ಜಾತ್ರೆಗೆ ಬಂದು ತನ್ನ ಅಪ್ರಾಪ್ತ ಸ್ನೇಹಿತನಿಗೆ ಪ್ರಕಾಶನ ಚಲನವಲನದ ಮೇಲೆ ಕಣ್ಣಿಡಬೇಕು. ಅವನು ಜಾತ್ರೆಯಿಂದ ತಿರುಗಿ ಕೊಳವಿ ಕಡೆಗೆ ಹೋಗುವಾಗ ತಕ್ಷಣ ನನಗೆ ಮಾಹಿತಿ ನೀಡಬೇಕು ಎಂದು ತಿಳಿಸಿ ಇನ್ನುಳಿದ ಸ್ನೇಹಿತರೊಡನೆ ಹೋಗಿ ತಲವಾರ್, ಜಂಭೆ, ಚಾಕು ತೆಗೆದುಕೊಂಡು ಹೂಲಿಕಟ್ಟಿ-ಕೊಳವಿ ರಸ್ತೆ ಪಕ್ಕಕ್ಕೆ ಪ್ರಕಾಶ ಬರುವುದನ್ನು ಕಾಯುತ್ತ ಅವಿತುಕೊಂಡು ಕುಳಿತನು. ಇತ್ತ ರಾತ್ರಿ 12 ಗಂಟೆಯವರೆಗೆ ರಸಮಂಜರಿ ನೋಡಿ ಸ್ನೇಹಿತನ ಬೈಕ್ ಮೇಲೆ ಕುಳಿತು ಕೊಳವಿಯತ್ತ ಪ್ರಕಾಶ ಹೊರಟನು. ಪ್ರಕಾಶನ ಚಲನವಲನ ಗಮನಿಸುತ್ತಿದ್ದ ಅಪ್ರಾಪ್ತ ತರುಣ ತಕ್ಷಣ ಐನಾತಿ ವಿಜಯಕುಮಾರನಿಗೆ ಕರೆ ಮಾಡಿ ವಿಷಯ ತಿಳಿಸಿದನು.



ಡಿವೈಎಸ್ಪಿ ಹೆಚ್.ಡಿ. ಮುಲ್ಲಾ



ಸಿಪಿಐ ಸುರೇಶಬಾಬು ಆರ್.ಬಿ.



ಪಿಎಸ್ಐ ಕಿರಣ ಮೋಹಿತೆ

**ಪ್ರಕಾಶನನ್ನು ಬರ್ಬರವಾಗಿ ಕೊಚ್ಚಿ ಕೊಲೆ...**

ಕೆಲವೊಬ್ಬರ ಗ್ರಹಗತಿಯಲ್ಲಿ ಸಂಕ್ರಮಣ 'ಕರಿದಿನ' ಅಶುಭ ಫಲಗಳನ್ನು ನೀಡುತ್ತದೆ. ನಿಜವಾಗಿ 'ಕರಿದಿನ'ದಂದು ಜಾಗ್ರತರಾಗಿರಬೇಕೆಂದು ಹಿರಿಯರು ಹೇಳುತ್ತಾರೆ. ದಿನಾಂಕ 15-01-2025 ಆರಂಭವಾಗಿ ಕೆಲವೇ ಕ್ಷಣಗಳಾಗಿತ್ತು. ಪ್ರಕಾಶ ಬರುವ ಸುದ್ದಿ ತಿಳಿದು ತಕ್ಷಣ ಅಲರ್ಟ್ ಆದ ಹುಂಬ ವಿಜಯಕುಮಾರ ಆತನ ಸ್ನೇಹಿತರು ರಸ್ತೆಬದಿಗೆ ಬಂದು ನಿಂತುಕೊಂಡರು. ಕೆಲವೇ ಕ್ಷಣಗಳಲ್ಲಿ ಬೈಕ್ ಹಿಂದೆ ಕುಳಿತುಕೊಂಡು ಪ್ರಕಾಶ ಹಿರಟ್ಟಿ ಬರುವುದು ಕಾಣಿಸಿತು. ತಕ್ಷಣ ಗ್ಯಾಂಗ್‌ನಲ್ಲಿ ಒಬ್ಬ ಅಡ್ಡಗಟ್ಟಿ ಬೈಕ್ ನಿಲ್ಲಿಸಿದನು. ವಿಜಯಕುಮಾರ ಹಿಂದೆ ಬಂದು ಬೈಕ್ ಮೇಲಿದ್ದ ಪ್ರಕಾಶನಿಗೆ ಜಗ್ಗಿ ತಲವಾರ್‌ನಿಂದ ಹೊಡೆಯಲು ಮುಂದಾದಾಗ ಆತ ಬೈಕ್‌ನಿಂದ ಇಳಿದು ಓಡತೊಡಗಿದನು. 'ಏ... ಬಿಡಬ್ಯಾಡರಿ... ಪಕ್ಯಾಗ' ಎಂದು ವಿಜಯಕುಮಾರ ಚೀರಿದಾಗ ವಿಜಯಕುಮಾರ ಸೇರಿ ಎಲ್ಲರೂ ಬೇಟೆನಾಯಿಗಳಂತೆ ಬೆನ್ನತ್ತಿದರು. ಓಡುವಾಗ ಆಯತಪ್ಪಿ ರಸ್ತೆಯ ಬದಿಯ ತಗ್ಗಿನಲ್ಲಿ ಪ್ರಕಾಶ ಬಿದ್ದಾಗ ಮುನ್ನುಗ್ಗಿದ ವಿಜಯಕುಮಾರ ತಲವಾರ್‌ನಿಂದ ಮುಖ... ತಲೆ... ಹೊಟ್ಟೆಗೆ ಭಯಂಕರವಾಗಿ ಇರಿದನು. ಉಳಿದವರು ಕೂಡಾ ಸಿಕ್ಕ ಸಿಕ್ಕಂತೆ ಪ್ರಕಾಶನ ದೇಹದ ಮೇಲೆ ದಾಳಿ ಮಾಡಿದರು. ಏಳು ಜನರ ಗುಂಪಿನಲ್ಲಿ ಪಾಪ ನತದೃಷ್ಟ ಪ್ರಕಾಶ ತೀವ್ರ ರಕ್ತಸ್ರಾವದಿಂದ ವಿಲ...ವಿಲನೇ ಒದ್ದಾಡಿ ಪ್ರಾಣ ಬಿಟ್ಟನು. ಇತ್ತ ಯಾರಾದರೂ ಬಂದಾರೆಂಬ ಭಯದಿಂದ ಕೊಲೆಗೆ ಬಳಸಿದ ತಲವಾರ್ ಪ್ರಕಾಶನ ಶವದ ಹತ್ತಿರ ಬಿಟ್ಟು ಹಂತಕರು ಪರಾರಿಯಾದರು.

**ಪೊಲೀಸರಿಗೆ ದೂರು...**

ಇತ್ತ ತನ್ನ ಗಂಡ ಪ್ರಕಾಶ ರಸಮಂಜರಿ ನೋಡಿ ಹೇಗೋ ತಡಮಾಡಿ ಬರುತ್ತಾನೆಂದು ಮಲಗಿದ್ದ ಆರತಿಗೆ ಯಾಕೋ ಏನೋ ಹೆದರಿಕೆಯಾಗಿತ್ತು. ರಾತ್ರಿ 12.30 ಗಂಟೆ ಸುಮಾರಿಗೆ ಮನೆ ಬಾಗಿಲು ಬಡಿದಾಗ ತನ್ನ ಗಂಡ ಬಂದಿರಬೇಕೆಂದು ಬಾಗಿಲು ತೆಗೆದವಳಿಗೆ ನಿರಾಶೆ ಆಗಿತ್ತು. ಕದ ಬಡಿದ ವ್ಯಕ್ತಿ ಪ್ರಕಾಶನ ಕಗ್ಗೊಲೆ ನಡೆದ ಬಗ್ಗೆ ಸುದ್ದಿ ತಂದಿದ್ದನು. ಐನಾತಿ ವಿಜಯಕುಮಾರ ನಾಯಿಕ ಗ್ಯಾಂಗ್ ಬರ್ಬರವಾಗಿ ಕೊಚ್ಚಿ... ಕೊಚ್ಚಿ ಕೊಲೆ ಮಾಡಿದ ಬಗ್ಗೆ ವಿವರವಾಗಿ ಹೇಳಿದ್ದನು. ವಿಷಯ ತಿಳಿದ ಆರತಿ ಎದೆ... ಎದೆ ಬಡಿದುಕೊಂಡು ರೋಧಿಸಿದಳು. ಸುದ್ದಿ ತಿಳಿದ ತಂದೆ-ತಾಯಿ, ದೊಡ್ಡಪ್ಪನ ಕುಟುಂಬ ರೋಧಿಸುತ್ತಲೇ ಘಟನಾ ಸ್ಥಳಕ್ಕೆ ಧಾವಿಸಿದರು. ಪ್ರಕಾಶನ ಕೊಲೆ ಸುದ್ದಿ ಹೂಲಿಕಟ್ಟಿ-ಕೊಳವಿಯಲ್ಲಿ ಮಾರ್ದನಿಸಿತ್ತು. ಜನ ತಂಡೋಪ ತಂಡವಾಗಿ ಚರ್ಚಿಸುತ್ತಿದ್ದರು.

ಇತ್ತ ದಿನಾಂಕ 15-01-2025 ಬೆಳಗಿನ ಜಾವ 2.15ಕ್ಕೆ ಕೊಲೆಯಾದ ಪ್ರಕಾಶ ಹಿರಟ್ಟಿ ಹೆಂಡತಿ ಆರತಿ ನೇರವಾಗಿ ಗೋಕಾಕದ ಗ್ರಾಮೀಣ ಪೊಲೀಸ್ ಠಾಣೆಗೆ ಧಾವಿಸಿ ಬಂದು ಹೂಲಿಕಟ್ಟಿ-ಕೊಳವಿ ರಸ್ತೆಯಲ್ಲಿ ನನ್ನ ಗಂಡನನ್ನು ಹಳೆಯ ದ್ವೇಷದಿಂದ ವಿಜಯಕುಮಾರ ನಾಯಿಕ ಮತ್ತು ಆತನ ಏಳು ಜನ ಸ್ನೇಹಿತರು ಸೇರಿ ಕೊಲೆ ಮಾಡಿದ್ದಾರೆಂದು ದೂರು ನೀಡಿದಳು. ಕರ್ತವ್ಯದಲ್ಲಿದ್ದ ಠಾಣಾಧಿಕಾರಿ ತಕ್ಷಣ ವಿಷಯದ ಗಂಭೀರತೆಯನ್ನು ಅರಿತು ಪಿಎಸ್ಐ ಕಿರಣ ಮೋಹಿತೆ, ಸಿಪಿಐ ಸುರೇಶಬಾಬು, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರಿಗೆ ವಿಷಯ ತಿಳಿಸಿ ಅವರ

☞12



ಎಎಸ್ಐಗಳಾದ ಎಫ್.ಕೆ. ಗುರನಗೌಡರ, ಎಸ್.ಕೆ. ಪಾಟೀಲ, ಟಿ.ಎಸ್. ದಳವಾಯಿ



ಮುಖ್ಯಪೇದೆಗಳಾದ ಬಿ.ವ್ಹಿ. ನೇರ್ಲಿ, ಜಗದೀಶ ಗುಡ್ಲಿ, ಹೆಚ್.ಡಿ. ಗೌಡಿ, ಡಿ.ಜಿ. ಕೊಣ್ಣೂರ, ವ್ಹಿ.ಎಲ್. ನಾಯಕವಾಡಿ, ಸಂಜು ಮಾನೆಪ್ಪಗೋಳ, ಎಸ್.ಜಿ. ದುರದುಂಡಿ, ಡಿ.ಬಿ. ಅಂತರಗಟ್ಟಿ, ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕನ್ನವರ

6

ಆದರೆ... ಆದರೆ ನಮ್ಮ ಕಾಲೇಜಿನ ಲೆಕ್ಚರರ್ ಒಪ್ಪಿಕೊಂಡಿದ್ರು.''

''ಯಾವುದಕ್ಕೆ ಒಪ್ಪಿಕೊಂಡಿದ್ರು ?''

''ನಾನು ಮನೆಗೆ ಹೋಗುವ ದಾರಿಯಲ್ಲಿ ಪದ್ಮಿನಿ ಮನೆ ಇದೆ. ನಾನವಳನ್ನು ಮನೆಗೆ ತಲುಪಿಸುತ್ತೀನಿ ಅಂತ ಹೇಳಿದ್ರು.''

''ಅವರ ಜೊತೆ ಕಳಿಸಿದ್ರಾ ?''

''ಹೌದು ಸಾರ್.''

''ಯಾವ ವೆಹಿಕಲ್‌ನಲ್ಲಿ ಹೋದ್ರು ?''

''ಅವರ ಕಾರಲ್ಲಿ ಸಾರ್.''

''ಲೆಕ್ಚರರ್ ಫೋನ್ ನಂಬರ್ ಮತ್ತು ಮನೆ ಅಡ್ರೆಸ್ ಕೊಡಿ.''

ರೇವತಿ ಗಾಬರಿಯಿಂದ ''ಯಾಕೆ ಸಾರ್'' ಎಂದು ಕೇಳಿದಳು.

''ನನ್ನ ತಂಗಿನ ಅವರ ಹತ್ತಿರ ಟ್ಯೂಶನ್‌ಗೆ ಕಳಿಸಬೇಕು.''

''ಅವರು ಮನೇಲಿ ಟ್ಯೂಶನ್ ಮಾಡೋಲ್ಲ.''

''ಒಬ್ಬ ಪೊಲೀಸ್ ಆಫೀಸರ್ ರಿಕ್ವೆಸ್ಟ್ ಮಾಡಿದ್ರೆ ಅವರು ಖಂಡಿತಾ ಒಪ್ಪಿಕೊಳ್ತಾರೆ.''

ಇದೇ ಸಹಜವಾದ ಸುಳ್ಳು.

ರೇವತಿ ವಿವರವಾಗಿ ತಿಳಿಸಿದಳು.

●●●

ಪೊಲೀಸ್ ಜೀಪು ಚಲಿಸುತ್ತಿದೆ. ಪದ್ಮಿನಿಯ ಮುಖದಲ್ಲಿ ಕೋಪ ಮತ್ತು ವ್ಯಗ್ರತೆ ಕಂಡು ಬರುತ್ತಿದೆ.

ಇದನ್ನು ಗಮನಿಸಿದ ದೇವಗನ್ ''ಏ... ಯಾಕೆ... ಏನಾಯಿತು? ಎನಿಥಿಂಗ್ ರಾಂಗ್'' ಎಂದು ಕೇಳಿದನು.

ಅವಳು ಕೋಪ, ಉದ್ವಿಗ್ನತೆಯಿಂದ ''ಆ ರೇಪಿಸ್ಟ್ ಯಾರು ಅಂತ ಗೊತ್ತಾಯಿತು'' ಎಂದು ಎಲ್ಲವನ್ನೂ ಹೇಳಲಾರಂಭಿಸಿದಳು.

●●●

ಲೆಕ್ಚರರ್ ಬೈರಪ್ಪಗೌಡ...! ಆರ್ಟ್ಸ್ ಲೆಕ್ಚರರ್! ಕಾಲೇಜಿನಿಂದ ಬರುತ್ತಿದ್ದ ಅವನನ್ನು ಆ ದಾರಿಯಲ್ಲಿ ಮೀಟ್ ಮಾಡಿದ್ರು.

ಪದ್ಮಿನಿಯನ್ನು ಕಂಡ ಕೂಡಲೇ ಲೆಕ್ಚರರ್ ಗಾಬರಿಯಾದನು. ಮುಖ ಬೆವರಾಡಲಾರಂಭಿಸಿತು.

ದೇವಗನ್ ತನ್ನ ಐಡೆಂಟಿಟಿ ಕಾರ್ಡ್ ತೋರಿಸಿದ ನಂತರ ''ನಿಮ್ಮ ಜೊತೆ ಮಾತಾಡ್ಬೇಕು. ಕಾರನ್ನು ಪಾರ್ಕ್ ಮಾಡಿ ನಮ್ಮ ಜೊತೆ ಬನ್ನಿ'' ಎಂದು ಅಧಿಕಾರಯುತವಾಗಿ ಹೇಳಿದನು.,

''ಯಾಕೆ... ಯಾಕೆ ಸಾರ್?''

ಪದ್ಮಿನಿಯನ್ನು ತೋರಿಸುತ್ತಾ ''ಯಾಕೆ ಅಂತ ಇವಳನ್ನ ನೋಡಿದ ಮೇಲೂ ಅರ್ಥ ಆಗಲಿಲ್ವ'' ಎಂದು ಕೇಳಿದಾಗ ಹೆದರಿದನು.

''ನನ್ನ ಜೊತೆ ಬರ್ತೀರೋ ಅಥವಾ ಪೊಲೀಸ್ ಸ್ಟೇಷನ್‌ಗೆ ಕರೆಸಬೇಕೊ?''

ಅವನು ಗಾಬರಿಯಿಂದ ''ನಿಮ್ಮ ಜೊತೆ ಬರ್ತೀನಿ ಸಾರ್.''

●●●

ನಿರ್ಜನ ಪ್ರದೇಶದಲ್ಲಿರುವ ಮರದ ಕೆಳಗೆ ಪೊಲೀಸ್ ಜೀಪು ನಿಂತಿದೆ. ಪದ್ಮಿನಿ ಜೀಪಲ್ಲಿ ಕುಳಿತಿದ್ದಾಳೆ. ಲೆಕ್ಚರರ್ ಬೈರಪ್ಪಗೌಡನ ಎದುರಿಗೆ ಆದಿತ್ಯ ಮತ್ತು ಪೊಲೀಸ್ ಅಧಿಕಾರಿ ನಿಂತಿದ್ದಾರೆ. ಆದಿತ್ಯನಿಗೆ ಕೋಪ ಬರುತ್ತಿದೆ. ಹಲ್ಲು ಕಡಿಯುತ್ತಿದ್ದಾನೆ. ಈ ಪೊಲೀಸ್ ಅಧಿಕಾರಿ ಇಲ್ಲದಿದ್ದರೆ, ಈಗ ಬಿಗಿದುಕೊಂಡಿರುವ ಮುಷ್ಠಿ ಅವನ ಮುಖದ ಮೇಲೆ ಅಪ್ಪಳಿಸಿರುತ್ತಿತ್ತು.

ದೇವಗನ್ ''ನಿಮಗೆ ಪದ್ಮಿನಿಯ ಮೇಲೆ ತುಂಬಾ... ತುಂಬಾ ಆಸೆ ಇತ್ತ ಅಲ್ವ. ಅವಳನ್ನ ಲವ್ ಮತ್ತು ಮದುವೆ ವಿಚಾರವಾಗಿ ಆಗಾಗ ಪ್ರೀತಿಸುತ್ತಿದ್ರಿ. ಅವಳು ನಿರಾಕರಿಸಿದಾಗ ನೀವು ಆಫರ್ ಮಾಡಿದ್ರಿ.''

ಅವನು ಚಡಪಡಿಸುತ್ತಿದ್ದಾನೆ. ''ಒಂದೇ ಒಂದು ದಿವಸ ನನ್ನವಳಾಗಿರು. ದೂರದ ಊರಿನ ಹೋಟೆಲ್‌ನಲ್ಲಿ ಇದ್ದು ಬರೋಣ. ನಿನಗೆ ಎರಡು ಲಕ್ಷ ರೂಪಾಯಿ ಕೊಡ್ತೀನಿ ಅಂತ ಹೇಳಿದ್ದು ನಿಜ ತಾನೆ?''

ಬೈರಪ್ಪಗೌಡ ಗಾಬರಿ, ಭಯದಿಂದಲೇ ತಲೆಯಾಡಿಸಿದನು. ಆ ಕ್ಷಣ ಆದಿತ್ಯ ಕೆರಳಿಸಿದನು. ಗೂಳಿಯ ರೀತಿ ನುಗ್ಗಿದನು. ಆ ಲೆಕ್ಚರರ್ ಮೇಲೆ ಪ್ರಹಾರ ಮಾಡಲು ಅವನ ಕೈ ಗಾಳಿಯಲ್ಲಿ ಆಡಿತು. ದೇವಗನ್ ಅಡ್ಡ ಬಂದನು. ಅವನ ಕೈ ಹಿಡಿದು ತಿರುಚಿದನು.

''ಆದಿತ್ಯ ಕಂಟ್ರೋಲ್ ಈವರ್ ಸೆಲ್ಫ್. ಪೊಲೀಸ್ ಆಫೀಸರ್ ವಿಚಾರಣೆ ಮಾಡುತ್ತಿರುವಾಗ ನೀನು ತೆಪ್ಪಗಿರಬೇಕು. ನಿನ್ನಿಂದ ಆಗದಿದ್ದರೆ ತನಿಖೆ ಮುಗಿಯುವತನಕ ನೀನು ಪದ್ಮಿನಿ ಜೊತೆ ಬೈಕಲ್ಲಿ ಕುಳಿತಿರು.''

ಆದಿತ್ಯನ ಆವೇಶ ಇಳಿಯಿತು.

''ಪದ್ಮಿನಿ ಒಪ್ಪಿಕೊಂಡಿದ್ಲಾ?''

ಅವನು ಮೆಲ್ಲಗೆ ''ಇಲ್ಲ'' ಎಂದನು.

''ಆದರೂ ಸಹ ಅವಳ ಮೇಲಿನ ಆಸೆ, ಹಂಬಲ ಕಡಿಮೆ ಆಗಿರಲಿಲ್ಲ. ಅವಳನ್ನು ಪಟಾಯಿಸಲು ನೀವು ಟ್ರೈ ಮಾಡುತ್ತಿದ್ದ ಸಂಗತಿ ಬಗ್ಗೆ ಪದ್ಮಿನಿ ಹೇಳಿದ್ದಾಳೆ, ನಿಜ ತಾನೆ?''

ಅವನು ಗಾಬರಿಯಿಂದ ''ಸಾರ್... ಅದೂ... ಅದೂ...'' ಎಂದು ತಡವರಿಸಿದನು.

''ಸೇ... ಎಸ್ ಆರ್ ನೋ.''

ಬೈರಪ್ಪಗೌಡ ತಲೆಯಾಡಿಸಿದನು.

''ನಿಮ್ಮ ಪ್ರಯತ್ನ ಯಶಸ್ವಿ ಆಗಲಿಲ್ವ. ಡಿಸೆಂಬರ್ 31ರ ರಾತ್ರಿ ನೀವು ನಿಮ್ಮ ಸ್ಟುಡೆಂಟ್ ರೇವತಿಗೆ ಮನೆ ಫಂಕ್ಷನ್ಗೆ ಹೋಗಿದ್ರಿ. ಪದ್ಮಿನಿ ಕುಡಿತದ ಅಮಲಿನಲ್ಲಿದ್ದಳು. ಅವಳನ್ನು ರೇವತಿ ನಿಮ್ಮ ಜೊತೆ ಕಳಿಸಿದಳು. ನೀವು ಅವಳನ್ನ ಅವಳ ಮನೆಗೆ ಕರೆದುಕೊಂಡು ಹೋಗಲಿಲ್ಲ. ನಿಮ್ಮ ಮನೆ ಅಥವಾ ಏಕಾಂತ ಜಾಗಕ್ಕೆ ಕರೆದುಕೊಂಡು ಹೋಗಿದ್ದು ನಿಜ ತಾನೆ?''

ಬೈರಪ್ಪಗೌಡ ಗಾಬರಿಯಿಂದ ''ನನ್ನ ಮನೆಗೆ ಕರೆದುಕೊಂಡು ಹೋದೆ. ಮನೇಲಿ ಯಾರೂ ಇರಲಿಲ್ಲ, ಎಲ್ಲಾ ಊರಿಗೆ ಹೋಗಿದ್ರು. ಹಾಗಾಗಿ ನನ್ನಗೆ ತೊಂದರೆ ಆಗಲಿಲ್ಲ'' ಎಂದನು.

''ಅಂದರೆ ನಿನ್ನ ಮನೆಯಲ್ಲಿ ಎರಡು ರಾತ್ರಿ ಒಂದು ಹಗಲು ಅತ್ಯಾಚಾರ ಮಾಡಿದೆ. ನಿನ್ನ ಬಗ್ಗೆ ಗೊತ್ತಾಗಲಾರದು ಅಂತ ಆಗಾಗ ವಿಸ್ಕಿ ಕುಡಿಸುತ್ತಿದ್ದೆ. ಅವಳು ಸದಾ ಅಮಲಿನಲ್ಲಿರುವಂತೆ ಮಾಡಿದ್ದೆ. ನನ್ನ ಪ್ರಣಯ, ಶೃಂಗಾರದಾಟಗಳು ಮತ್ತು ಅಮಲಿನ ಕಾರಣದಿಂದ ಅವಳು ಪ್ರಚೋದನೆಗೆ ಒಳಗಾಗಿ ಸಹಕರಿಸಿದ್ದಳು. ನಿಜ ತಾನೆ?''

ಬೈರಪ್ಪಗೌಡ ನಿಟ್ಟುಸಿರು ಬಿಡುತ್ತಾ ''ಆ ಉದ್ದೇಶದಿಂದ ಅವಳನ್ನು ಕರೆದುಕೊಂಡು ಬಂದಿದ್ದು ನಿಜ. ಆದರೆ ಅಂತಹ ಅದೃಷ್ಟದ ಅವಕಾಶ ನನಗೆ ಸಿಗಲಿಲ್ಲ'' ಎಂದನು.

ಆದಿತ್ಯ ಕೆರಳಿದನು. ಮುಷ್ಠಿ ಬಿಗಿದು ಕೈ ಎತ್ತಿದನು. ದೇವಗನ್ ಅವನನ್ನು ದೂರ ತಳ್ಳಿ ಎಚ್ಚರಿಕೆ ನೀಡಿದನು. ನಂತರ ಲೆಕ್ಚರರ್ ಕಡೆ ತಿರುಗಿ ''ಮಾಡಿರುವ ಕಚಡ ಕೆಲಸದಿಂದ ವಿಮುಕ್ತನಾಗಲು ನಾಟಕ ಆಡುತ್ತಿದ್ದೀಯ. ಪೊಲೀಸ್ ಲಾಕಪ್‌ನಲ್ಲಿ ಹಾಕಿ ಬೂಟು ಸೇವೆ ಮಾಡಿದರೆ ಸತ್ಯ ಒಪ್ಪಿಕೊಳ್ತೀಯ'' ಎಂದು ಹೇಳುತ್ತಿರುವಾಗಲೇ ಬೈರಪ್ಪಗೌಡ'' ಸಾರ್... ನಾನು ಅತ್ಯಾಚಾರ ಮಾಡಿಲ್ಲ'' ಎಂದು ತನ್ನ ತಲೆಯ ಹಿಂಭಾಗ ತೋರಿಸಿದನು. ತಲೆ ಭಾಗ ಊದಿಕೊಂಡಿದೆ. ಬ್ಯಾಂಡೇಜ್ ಹಾಕಲಾಗಿದೆ.

ಬೈರಪ್ಪಗೌಡ ''ಸಾರ್... ಆ ರಾತ್ರಿ... ಆ ರಾತ್ರಿ ಅಂದರೆ ಅವಳನ್ನು ಹಾಸಿಗೆ ಮೇಲೆ ಮಲಗಿಸುತ್ತಿರುವಾಗ ಯಾರೋ ಬಾಗಿಲು ಬಡಿದರು. ''ಪೊಲೀಸ್ ಆಫೀಸರ್ ಬಂದಿರೋದು. ಒಳಗೆ ಏನ್ ನಡೀತಾ ಇದೆ. ಕಮಾನ್... ಓಪನ್ ದಿ ಡೋರ್ ಎಂದು ಅಬ್ಬರಿಸಿದಾಗ ನನಗೆ ಭಯವಾಗಿ ಅವಳ ಮೈ ತುಂಬಾ ರಗ್ಗನ್ನು ಹಾಕಿದೆ.''

''ಓ.ಕೆ. ಆಮೇಲೆ ಏನಾಯಿತು?''

''ಡೋರ್ ಓಪನ್ ಮಾಡಿದಾಗ ಯಾರೋ ಗೂಳಿ ರೀತಿ ನುಗ್ಗಿ ನನ್ನ ತಲೆಗೆ ದೊಣ್ಣೆಯಿಂದ ಬಲವಾಗಿ ಹೊಡೆದರು. ನಾನು ತೂರಾಡುತ್ತಾ ನೆಲದ ಮೇಲೆ ಬಿದ್ದೆ. ಪ್ರಜ್ಞೆ ಇರಲಿಲ್ಲ. ಎಚ್ಚರವಾದಾಗ ಅಲ್ಲಿ ಪದ್ಮಿನಿ ಇರಲಿಲ್ಲ.'

''ಇದಕ್ಕೆ ಸಾಕ್ಷಿ, ಆಧಾರ ಇರುವುದೆ?''

''ನಮ್ಮ ಬಡಾವಣೇಲಿ ಸಂಜೀವಿನಿ ನರ್ಸಿಂಗ್ ಹೋಂ ಇದೆ. ಬೇಕಾದರೆ ನೀವು ಅವರನ್ನು ವಿಚಾರಣೆ ಮಾಡಿ'' ಎಂದು ಹೇಳಿ ತನ್ನ ಮೊಬೈಲ್ ವಿಚಾರಣೆ ಮಾಡಿ'' ಎಂದು ಹೇಳಿ ತನ್ನ ಮೊಬೈಲ್ ತೆಗೆದು ಆ ಕಾಲ್ ಡೀಟೈಲ್ಸ್ ತೋರಿಸಿದನು. ಆ ರಾತ್ರಿ ಸುಮಾರು ಹನ್ನೆರಡು ಗಂಟೆ ಸಮಯದಲ್ಲಿ ಸಂಜೀವಿನಿ ಆಸ್ಪತ್ರೆಗೆ ಫೋನ್ ಮಾಡಿದ್ದನು.

''ಒಕೆ ಆಮೇಲೆ ಏನಾಯಿತು?''

''ಹಿಂಭಾಗದ ತಲೆ ಭಾಗದಿಂದ ರಕ್ತ ಹೆಪ್ಪುಗಟ್ಟಿ ಸೋರುತ್ತಿದ್ದರಿಂದ ಆ್ಯಂಬುಲೆನ್ಸ್‌ನಲ್ಲಿ ಬಂದು ಕರೆದುಕೊಂಡು ಹೋಗಿ ಟ್ರೀಟ್‌ಮೆಂಟ್ ಪಡೆಯುತ್ತಿದ್ದೆ. ಸಾರ್... ಈ ಹೇಳಿಕೆ ನಿಜ ಅಂತ ತಿಳಿಯಲು ನರ್ಸಿಂಗ್ ಹೋಂಗೆ ಫೋನ್ ಮಾಡಿ'' ಎಂದನು.

ಪೊಲೀಸ್ ಅಧಿಕಾರಿ ದೇವಗನ್ ಫೋನ್ ಮಾಡಿ ಆಸ್ಪತ್ರೆಯಿಂದ ಇನ್‌ಫರ್‌ಮೇಷನ್ ಕಲೆಕ್ಟ್ ಮಾಡಿದನು.

ಲೆಕ್ಚರರ್ ಹೇಳಿದ್ದು ನಿಜವಾಗಿದೆ. ಆದಿತ್ಯ ಮತ್ತು ಪದ್ಮಿನಿ ಬೇಸರ, ಅಸಹನೆಯಿಂದ ಪರಸ್ಪರ ಮುಖ ನೋಡಿಕೊಂಡರು. ನಂತರ ''ನಿನ್ನ ಮೇಲೆ ಆಕ್ರಮಣ ಮಾಡಿದವನು ಯಾರು ಅಂತ ಗೊತ್ತಾ ?''

''ಗೊತ್ತಿಲ್ಲ ಸಾರ್.''

''ಹೋಗಲಿ, ಅವನ ಬಗ್ಗೆ ಸುಳಿವು ನೀಡುವಂತ ವಿಷಯ ಘಟನೆ ಅಥವಾ ಯಾವುದಾದರೂ ವಸ್ತು ಇಲ್ಲಿ ಬಿಟ್ಟು ಹೋಗಿದ್ದರೆ ನೆನಪು ಮಾಡಿಕೊಂಡು ಹೇಳಲು ಸಾಧ್ಯವೆ?''

''ತಲೆಗೆ ಪೆಟ್ಟು ಬಿದ್ದು ಪ್ರಜ್ಞಾಶೂನ್ಯ ಳಾಗಿದ್ದ ನನಗೆ ಅವೆಲ್ಲಾ ಹೊಗೆ ಗೊತ್ತಾಗಲು ಸಾಧ್ಯವೆ?

ಪೊಲೀಸ್ ಅಧಿಕಾರಿ ಪದ್ಮಿನಿಯ ಕಡೆ ನೋಡುತ್ತಾ ''ಇವನಿಂದ ತಪ್ಪಾಗಿಲ್ಲ. ಸುಳಿವನ್ನು ಪತ್ತೆ ಮಾಡಲು ಪ್ರಯತ್ನ ಮಾಡೋಣ'' ಎಂದು ಹೇಳಿ ಲೆಕ್ಚರರ್ ಕಡೆ ತಿರುಗಿ ಎಚ್ಚರಿಕೆ ನೀಡಿ ಅಲ್ಲಿಂದ ಹೊರಟನು.

ಪದ್ಮಿನಿ ಅವನ ಕಡೆ ಕೋಪ, ತಿರಸ್ಕಾರದಿಂದ ಕ್ಯಾಕರಿಸಿ ಉಗಿದಳು. ಆದಿತ್ಯ ಮುಷ್ಠಿ ಬಿಗಿದು ಆಡಿಸುತ್ತಾ ಅವಳನ್ನು ಇನ್ನು ಮುಂದೆ ನೀನು ಕನಸ್ಸಲ್ಲಿ ಸಹ ನೆನಪು ಮಾಡಿಕೊಳ್ಳಬಾರದು'' ಎಂದು ಹೇಳಿದನು.

●●●

ತನಿಖೆ ಸದ್ಯಕ್ಕೆ ಸ್ಟಾಪ್ ಆಗಿದೆ! ಮತ್ತೊಂದು ದಿನ ದೇವಗನ್ ಒಬ್ಬನೇ ಬಂದು ಪದ್ಮಿನಿಯನ್ನು ಮೀಟ್ ಮಾಡಿದನು. ''ಪದ್ಮಿನಿ... ಆ ಕಾಮುಕನನ್ನು ಪತ್ತೆ ಮಾಡಬೇಕಾದರೆ ನೀನು ಸುಳಿವನ್ನು ಕೊಡಲು ಪ್ರಯತ್ನ ಮಾಡಬೇಕು.''

''ನಾನು ಅಲ್ಲಿದ್ದಷ್ಟು ಕಾಲ ಮತ್ತಿನಲ್ಲಿದ್ದೆ. ನನಗೇನೂ ಗೊತ್ತಾಗುತ್ತಿರಲಿಲ್ಲ.''

''ಆದರೂ ಸಹ ಪ್ರಯತ್ನ ಮಾಡಿದರೆ, ಅಮಲಿನ ಸ್ಥಿತಿಯಲ್ಲಿ ಅಸ್ಪಷ್ಟವಾಗಿ ಏನಾದರೂ ಗೋಚರವಾದರೆ ಅಥವಾ ನೆನಪಿಗೆ ಬಂದರೆ ಹೇಳು.''

''ಆಗಲಿ ಪ್ರಯತ್ನ ಮಾಡ್ತೀನಿ.''

''ನಿನ್ನನ್ನು ಯಾವ ಬಡಾವಣೆಗೆ ಕರೆದುಕೊಂಡು ಹೋದ್ರು ಅಂತ ಗೊತ್ತಿದ್ಯ ?''

ಅವಳು ನೆನಪುಗಳನ್ನು ಕೆದಕುತ್ತಿದ್ದಾಳೆ. ಕ್ಷಣಗಳ ನಂತರ ''ನನ್ನನ್ನು ಕಾರಿನಿಂದ ಎತ್ತಿಕೊಂಡು ಹೋದ್ರು.''

''ಗುಡ್... ವೆರಿಗುಡ್... ಆಮೇಲೆ...''

''ರೈಲ್ವೆ ನಿಲ್ದಾಣ ಅಸ್ಪಷ್ಟವಾಗಿ ಕಂಡಿತು. ಆ ಮನೆಗೆ ಮೆಟ್ಟಿಲುಗಳಿವೆ. ನನಗೆ ಕಾಣಲಿಲ್ಲ. ನನ್ನನ್ನು ಎತ್ತಿಕೊಂಡು ನಡೆಯುತ್ತಿದ್ದ ರೀತಿಯಿಂದ ಅನುಭವ ಆಯಿತು.''

''ಒಕೆ ಆಮೇಲೆ...''

''ಮನೆಯೊಳಗೆ ಹೋಗುವ ಮೊದಲು ರೈಲ್ವೆ ಸ್ಟೇಷನ್ನಿನ ಬೋರ್ಡ್ ಕಂಡಿತು.''

''ಓ... ಫೈನ್... ಹೇಳು... ಹೇಳು.''

''ಅಲ್ಲಿ... ಅಲ್ಲಿ 'ದೇವಲಾಪುರಂ' ರೈಲ್ವೆ ನಿಲ್ದಾಣ ಎಂಬ ಬೋರ್ಡ್ ಕಂಡಿತು.''

''ದೇವಲಾಪುರಂ ರೈಲ್ವೆಸ್ಟೇಷನ್...'' ಎಂದು ಉದ್ಗರಿಸಿದ ನಂತರ ''ಓ.ಕೆ. ಆಮೇಲೆ ಏನಾದರೂ ಸುಳಿವು ಗಮನಕ್ಕೆ ಬಂತಾ.''

''ಇಲ್ಲ ದೇವಗನ್. ಮನೆಯೊಳಗೆ ಬಂದ ಕೂಡಲೇ ವಿಸ್ಕಿ ಕುಡಿಸಿದರು. ನಂತರ ನಾನು ಅಮಲಿನ ಲೋಕದಲ್ಲಿ ಜಾರಿ ಹೋಗಿದ್ದೆ.''

ದೇವಗನ್‌ಗೆ ಪೊಲೀಸ್ ಸ್ಟೇಷನ್‌ನಿಂದ ಫೋನ್ ಕಾಲ್ ಬಂದಿತು. ಮಾತಾಡಿದ ನಂತರ ಈಗ ಅವಳ ಕಡೆ ತಿರುಗಿ ''ಪದ್ಮಿನಿ... ಎಮರ್‌ಜೆನ್ಸಿ ಕಾಲ್ ಬಂದಿದೆ. ನಾನು ಅಟೆಂಡ್ ಮಾಡಿ ಬರ್ತೀನಿ. ಏನಾದರೂ ನೆನಪಿಗೆ ಬಂದರೆ ಪಾಯಿಂಟ್ ಮಾರ್ಕ್ ಮಾಡು'' ಎಂದು ಹೇಳಿದ ನಂತರ ಏನೋ ನೆನಪು ಮಾಡಿಕೊಂಡು ''ನಿನ್ನನ್ನು ಕಿಡ್ನಾಪ್ ಮಾಡಿದವನು ಯಾರು ಎಂಬುವನ ಬಗ್ಗೆ ಏನಾದರೂ ಗೊತ್ತಾಯಿತಾ?''

''ಸಾರಿ ದೇವಗನ್.''

''ಒಕೆ ಡಿಪ್ರಸ್ ಆಗ್ಬೇಡ. ನಾನು ಆ ಅಗೋಚರ ಕಾಮುಕನನ್ನು ಸಧ್ಯದಲ್ಲೇ ಪತ್ತೆ ಮಾಡ್ತೀನಿ.''

●●●

ಲೆಕ್ಚರರ್ ಬೈರಪ್ಪಗೌಡ, ಮೆಡಿಕಲ್ ಗ್ರೌಂಡ್ಸ್ ಮೇಲೆ ಒಂದು ತಿಂಗಳು ರಜಾ ಹಾಕಿರುವುದಾಗಿ ತಿಳಿಯಿತು. ಆ ಕಾರಣದಿಂದ ಇವಳು ಕಾಲೇಜಿಗೆ ಹೋಗುತ್ತಿದ್ದಾಳೆ. ಆದಿತ್ಯ ಎಂದಿನಂತೆ ಅವಳನ್ನು ಬೈಕಲ್ಲಿ ಕರೆದುಕೊಂಡು ಹೋಗುತ್ತಾನೆ.

ಆದಿತ್ಯ ತಾಯಿ ತುಂಬಾ ಬಲವಂತ ಮಾಡಿದ್ದರಿಂದ ಅವರ ಮನೆಗೆ ಹೋದಳು. ಆದಿತ್ಯ ಹೊರಗೆಲ್ಲೋ ಹೋಗಿದ್ದನು. ಆ ಮನೇಲಿ ಇವಳಿಗೆ ಫ್ರೀಡಮ್ ಇದ್ದ ಕಾರಣದಿಂದ ಅವನ ರೂಮಿಗೆ ಬಂದಳು. ಅವಳಿಗೆ ಮೊದಲು ಕಂಡಿದ್ದು ಟೇಬಲ್ ಮೇಲಿದ್ದ ಅವನ ಮೊಬೈಲ್. ಹೊರಗೆ ಹೋಗುವಾಗ ಮರೆತು ಹೋಗಿದ್ದನು. ಅವಳು ಮೊಬೈಲ್ ಎತ್ತಿಕೊಂಡು ಕ್ಯಾಜುವಲ್ ಆಗಿ ನೋಡುತ್ತಿರುವಾಗ ಆ ದೃಶ್ಯ ಕಂಡಿತು. ಅವಳ ಫೋಟೋ ಇದೆ! ಅವಳಿಗೆ ಬೇರೆ ಆಲೋಚನೆ ಬರಲಿಲ್ಲ. ಫೋಟೋ ಗ್ಯಾಲರಿ ಓಪನ್ ಮಾಡಿದರು. ಅವಳು ಬೆಚ್ಚಿಬಿದ್ದಳು. ಗ್ಯಾಲರಿ ತುಂಬಾ ಅವಳ ನೂರು ಫೋಟೋಗಳಿವೆ. ಬೇರೆ ಬೇರೆ ಡ್ರೆಸ್‌ಗಳಲ್ಲಿ, ಬೇರೆ ಬೇರೆ ಭಂಗಿಗಳಲ್ಲಿ ಮತ್ತು ಸ್ನಾನ ಮಾಡಿ ಟವಲ್ ಸುತ್ತಿಕೊಂಡಿದ್ದಾಗ ಮತ್ತು ನೈಟಿ ಧರಿಸಿದ್ದಾಗ ಮತ್ತು ರೋಚಕ ಶೃಂಗಾರ ಅರೆನಗ್ನ ಸ್ಥಿತಿಯಲ್ಲಿರುವಾಗ ತೆಗೆದಿದ್ದ ಫೋಟೋಗಳಿವೆ. ಅವಳಿಗೆ ಶಾಕ್ ಆಗಿದೆ. ಆತ್ಮೀಯತೆಯ ಕಾರಣದಿಂದ ನನ್ನ ಒಂದು ಫೋಟೋ ಇಟ್ಟುಕೊಳ್ಳುವುದು ಸಹಜ. ಆದರೆ ಈ ರೀತಿ ಸ್ಟೋರ್ ಮಾಡಿಕೊಂಡಿದ್ದಾನೆ. ಅವನ ಮನದಲ್ಲಿ ಏನಿದೆ? ಅವಳಿಗೆ ಮುಜುಗರ ಆಗುತ್ತಿದೆ. ಅವನ ಮೊಬೈಲ್‌ನಲ್ಲಿರುವ ಎಲ್ಲಾ ಫೋಟೋಗಳನ್ನು ತನ್ನ ಮೊಬೈಲ್‌ಗೆ ಫಾರ್‌ವರ್ಡ್ ಮಾಡಿಕೊಂಡು, ಮನೆಯವರಿಗೆ ಏನೋ ನೆಪ ಹೇಳಿ ಅಲ್ಲಿಂದ ಹೊರಗೆ ಬಂದಳು. ಆಟೋದಲ್ಲಿ ಹೋಗುತ್ತಿರುವಾಗ ದೇವಗನ್‌ಗೆ ಫೋನ್ ಮಾಡಿದಳು. ಅವರಿಬ್ಬರು ಮೀಟ್ ಮಾಡಿದ್ದಾರೆ. ಫೋಟೋಗಳನ್ನು ತೋರಿಸಿ ಎಲ್ಲಾ ಹೇಳಿದಳು.

ಆ ಕ್ಷಣ ನೆನಪಿಗೆ ಬಂದಿತು. ''ನನ್ನ ಶೀಲದ ಜೊತೆ ಆಟ ಆಡಿ ಸುಖ ಅನುಭವಿಸುತ್ತಿದ್ದವನು, ನನ್ನ ಮುಖ ಸವರುತ್ತಾ ಬಾಯೊಳಘೆ ತನ್ನ ಬೆರಳನ್ನು ತೂರಿಸಿ ಹಲ್ಲುಗಳನ್ನು ಸವರಿದ್ದನು. ಆಗ ನಾನು ಉನ್ಮಾದಗೊಂಡಿದ್ದರಿಂದ ಅವನ ಬೆರಳನ್ನು ಕಚ್ಚಿದ್ದೆ. ಈಗ ನೆನಪಾಗುತ್ತಿದೆ. ಉದಯನ ಬೆರಳಲ್ಲಿ ಗಾಯವಾಗಿದೆ. ಅವನು ಬ್ಯಾಂಡೇಜ್ ಮಾಡಿಕೊಂಡಿದ್ದಾನೆ.''

ದೇವಗನ್ ''ಅಂದರೆ ಅವನು ಆತ್ಮೀಯನಂತೆ, ನಿನ್ನ ಸಹೋದರರಲ್ಲಿ ಒಬ್ಬನಂತೆ ನಟಿಸುತ್ತಾ ತುಂಬಾ ಒಳ್ಳೆಯವನಂತೆ ನಟಿಸುತ್ತಿದ್ದನು. ಆದರೆ ಅವನ ಅಂತರಾಳದಲ್ಲಿ ನಿನ್ನ ಬಗ್ಗೆ ತುಂಬಾ ಆಸೆ, ಕಾಮದ ಬಯಕೆಗಳಿತ್ತು ಅಲ್ವ?''

''ಹೌದು ದೇವಗನ್.''

ಅವಳನ್ನು ಕರೆದುಕೊಂಡು 'ದೇವಲಾಪುರ' ರೈಲ್ವೆ ಸ್ಟೇಷನ್ ಹತ್ತಿರ ಬಂದನು. ಮೆಟ್ಟಿಲುಗಳಿರುವ ಒಂಟಿ ಮನೆಯನ್ನು ಪತ್ತೆ ಮಾಡಿದನು. ಮಾಲೀಕರನ್ನು ಪತ್ತೆ ಮಾಡಿ ವಿಚಾರಿಸಿದನು.

''ಒಂದು ತಿಂಗಳ ಮಟ್ಟಿಗೆ ಜಾಸ್ತಿ ಬಾಡಿಗೆ ಕೊಟ್ಟು ಈ ಮನೇನಾ ಒಬ್ಬ ಯುವಕ ಪಡೆದಿದ್ದ. ಆದರೆ ಪ್ರತಿದಿವಸ ಬರೋಲ್ಲ. ಇಲ್ಲಿ ವಾಸವಾಗಿಲ್ಲ.''

ದೇವಗನ್ ಫೋಟೋ ತೋರಿಸಿದನು. ಮನೆ ಮಾಲೀಕರು ಇವನನ್ನು ಗುರುತಿಸಿದರು ಮತ್ತು ಹೇಳಿಕೆ ನೀಡಿದರು. ದೇವಗನ್ ಅವನನ್ನು ಬಂಧಿಸಿದನೇ ವಿನಹ ಅರೆಸ್ಟ್ ಮಾಡಿ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಲಿಲ್ಲ. ಅವನ ಮುಖದ ಮೇಲೆ ಕ್ಯಾಕರಿಸಿ ಉಗಿದಳು ಮತ್ತು ಕಾಲಿನಿಂದ ಜಾಡಿಸಿದಳು. ಆ ನಂತರ ಅವನ ಪುರುಷತ್ವ ನಾಶ ಮಾಡಲು ಪ್ಲಗ್ ಕನೆಕ್ಷನ್ ಕೊಟ್ಟು ಅವನ ಆ ಭಾಗಕ್ಕೆ ಅಲ್ಲಿಗೆ ವೈರ್ ಸುತ್ತಿದಳು. ಆದರೆ ಅಂತಹ ಶಿಕ್ಷೆ ಕೊಡಲು ಮನಸ್ಸಾಗದೆ ಚಪ್ಪಲಿ ಸೇವೆ ಮಾಡಿ ಹೊರಟಳು. ☯

## ಚಿಕ್ಕೋಡಿ : ಪಿಎಸ್ಐ ಬಸಗೌಡ ನೇರ್ಲಿ ಮತ್ತು ತಂಡದ ಮಿಂಚಿನ ಕಾರ್ಯಾಚರಣೆ...

# ಕಳೆದ 5 ತಿಂಗಳಲ್ಲಿ 11 ಮನೆ ಕಳ್ಳತನ ಮಾಡಿದ್ದ ಕುಖ್ಯಾತ ಕಳ್ಳ ಹಾಗೂ ಅಪ್ರಾಪ್ತ ಬಾಲಕನ ಬಂಧನ... 7.75 ಲಕ್ಷ ರೂ. ಸ್ವತ್ತು ವಶಕ್ಕೆ

**ಮೈ ಮುರಿದು ದುಡಿದು ತಿನ್ನಲಾರದ ಮಹಾ ಹರಾಮಿ ಐನಾತಿಯೊಬ್ಬನು ದಿಢೀರನೆ ಹಣ ಗಳಿಸಲು ತನ್ನ ಖಾಸಾ ತಮ್ಮನ ಅಪ್ರಾಪ್ತ ಮಗನನ್ನು ಕರೆದುಕೊಂಡು ಬೀಗ ಹಾಕಿದ್ದ ಮನೆಗಳನ್ನು ಟಾರ್ಗೆಟ್ ಮಾಡಿ ಕಳ್ಳತನಕ್ಕೆ ಇಳಿದಿದ್ದನು. ಕಳೆದ ಐದು ತಿಂಗಳಿನ ಅವಧಿಯಲ್ಲಿ ಚಿಕ್ಕೋಡಿ, ಘಟಪ್ರಭಾ, ಸಂಕೇಶ್ವರ, ರಾಯಭಾಗ, ಹುಕ್ಕೇರಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ 11 ಮನೆ ಕಳ್ಳತನಗಳನ್ನು ಮಾಡಿ, ಚಿನ್ನಾಭರಣ ಸೇರಿದಂತೆ ಮತ್ತಿತರ ಸಾಮಾನುಗಳನ್ನು ಲಪಟಾಯಿಸಿದ್ದನು. ಚತುರ ಸಿಪಿಐ ವಿಶ್ವನಾಥ ಚೌಗಲಾ ಅವರ ನಿರ್ದೇಶನದಲ್ಲಿ ತಮ್ಮ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಧಾಡಸಿ ಪಿಎಸ್ಐ ಬಸಗೌಡ ನೇರ್ಲಿ ಮತ್ತು ಹೆಚ್ಚುವರಿ ಪಿಎಸ್ಐಗಳಾದ ಲಕ್ಷ್ಮಿ ಬಿರಾದಾರ, ಲಕ್ಷ್ಮಣ ರೂಡಗಿ ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಕುಖ್ಯಾತ ಕಳ್ಳ ಮತ್ತು ಅಪ್ರಾಪ್ತ ಬಾಲಕನನ್ನು ಬಂಧಿಸಿ ಅವರಿಂದ 11 ಮನೆ ಕಳ್ಳತನ ಪತ್ತೆ ಮಾಡಿ 7.75 ಲಕ್ಷ ರೂ.ಗಳ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡ ಪ್ರಕರಣ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಕುಖ್ಯಾತ ಕಳ್ಳ ರಾಜೇಸಾಬ ಗುಲಾಬ ನಾಯಿಕವಾಡಿ

ಬೆಳಗಾವಿ
✍ ಮನ್ನಾಪೂರ

ಇಲ್ಲೊಬ್ಬ ಮಹಾ ಹರಾಮಿ ಐನಾತಿ ಕಳ್ಳತನೊಬ್ಬನು ಮೋಜು-ಮಜಾ-ಮಸ್ತಿಗಾಗಿ ಹೇಗಾದರೂ ಮಾಡಿ ಹಣ ಹೊಂದಿಸಬೇಕೆಂದು ದುಷ್ಟ ಸಂಚೊಂದನ್ನು ರೂಪಿಸಿದನು.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಬೀಗ ಹಾಕಿರುವ ಮನೆಗಳನ್ನೇ ಟಾರ್ಗೆಟ್ ಮಾಡಿಕೊಂಡು ಸದ್ದಿಲ್ಲದೇ ತನ್ನ ಸಹೋದರನ ಅಪ್ರಾಪ್ತ ಮಗನನ್ನು ಬಳಸಿಕೊಂಡು ಮನೆಗಳ ಕಳ್ಳತನಕ್ಕೆ ಇಳಿದುಬಿಟ್ಟನು. ಒಂದಲ್ಲ ಎರಡಲ್ಲ ಬರೋಬ್ಬರಿ 11 ಮನೆಗಳನ್ನು ಕಳೆದ 5 ತಿಂಗಳ ಅವಧಿಯಲ್ಲಿ ಕಳ್ಳತನ ಮಾಡಿ ಚಿನ್ನಾಭರಣ ಸೇರಿದಂತೆ ತಾಮ್ರ, ಹಿತ್ತಾಳೆಯ ಬಾಂಡಿಗಳನ್ನು ಕೊಳ್ಳೆ ಹೊಡೆದಿದ್ದನು. ಇಂತಹ ಖತರ್‌ನಾಕ್ ಕಳ್ಳನನ್ನು ಹೆಡೆ ಮುರಿ ಕಟ್ಟಿ ಆತನಿಂದ 11 ಮನೆ ಕಳ್ಳತನ ಪ್ರಕರಣಗಳನ್ನು ಭೇದಿಸಿ ಕಳ್ಳತನಕ್ಕೆ ಬಳಸಿದ ಕಾರು, ಚಿನ್ನಾಭರಣ ಸೇರಿದಂತೆ 7.75 ಲಕ್ಷರೂ.ಗಳ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಚಿಕ್ಕೋಡಿ ಟಫ್‌ಕಾಫ್ ಬಸಗೌಡ ನೇರ್ಲಿ ಅವರ ನೇತೃತ್ವದ ವಿಶೇಷ ತನಿಖಾ ತಂಡ ಯಶಸ್ವಿಯಾಗಿದೆ. ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಚತುರ ಸಿಪಿಐ ವಿಶ್ವನಾಥ ಚೌಗಲಾ ಅವರ ನಿರ್ದೇಶನದಲ್ಲಿ ಇಂದು ಕುಖ್ಯಾತ ಕಳ್ಳ ಜೈಲು ಸೇರಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾನೆ.


### ಉಮರಾಣಿಯಲ್ಲಿ ಕಳ್ಳತನವಾಗಿತ್ತು...

ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮದಲ್ಲಿ ದಿನಾಂಕ 02-12-2024ರಂದು ರಾತ್ರಿ ಕಲ್ಲಪ್ಪ ಲಗಮಪ್ಪ ಜಿಡ್ಡಿಮನಿ ಎಂಬುವವರು ತಮ್ಮ ಮನೆಗೆ ಬೀಗ ಹಾಕಿಕೊಂಡು ಮತ್ತೊಂದು ಮನೆಗೆ ಮಲಗಲು ಹೋಗಿದ್ದರು. ಮರುದಿನ ದಿನಾಂಕ 03-12-2024ರಂದು ಬೆಳಿಗ್ಗೆ ಮರಳಿ ತಾವಿರುತ್ತಿದ್ದ ಮನೆಗೆ ಬಂದಾಗ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ಮುರಿಯಲಾಗಿತ್ತು. ಗಾಭರಿಗೊಂಡ ಕಲ್ಲಪ್ಪ ಲಗಮಪ್ಪ ಜಿಡ್ಡಿಮನಿ ಮನೆ ಪ್ರವೇಶಿಸಿದಾಗ ಅಲ್ಲಿದ್ದ ಕಬ್ಬಿಣದ ಟ್ರಂಕ್, ಅಲಮೇರಾದ ಬೀಗ ಮುರಿದು ಚಿನ್ನಾಭರಣಗಳು, ನಗದು ಹಣ, ತಾಮ್ರದ ಬಾಂಡೆಗಳು, ಬೆಲೆಬಾಳುವ ಸೀರೆಗಳನ್ನು ಅದ್ಯಾರೋ ಕಳ್ಳರು ದೋಚಿಕೊಂಡು ಹೋಗಿದ್ದರು. ಇವುಗಳ ಒಟ್ಟು ಮೌಲ್ಯ ಸುಮಾರು 1.47 ಲಕ್ಷ ರೂ.ಗಳಾಗಿತ್ತು. ಮನೆ ಕಳ್ಳತನದಿಂದ ತೀರಾ ಕಂಗಾಲಾಗಿದ್ದ ಕಲ್ಲಪ್ಪ ದಿಕ್ಕು ತೋಚದಂತೆ ಕುಳಿತುಬಿಟ್ಟನು. ನೆರೆ-ಹೊರೆಯವರು ಸಮಾಧಾನ ಪಡಿಸಿ ಆದದ್ದು ಆಗಿದೆ ಪೊಲೀಸರಿಗೆ ದೂರು ನೀಡು ಎಂದಾಗ ಕಲ್ಲಪ್ಪನು ನೇರವಾಗಿ ಚಿಕ್ಕೋಡಿ ಪೊಲೀಸ್ ಠಾಣೆಗೆ ಧಾವಿಸಿ ಬಂದನು.

### ಪೊಲೀಸರಿಗೆ ದೂರು...

ದಿನಾಂಕ 03-12-2024ರಂದು ಕಲ್ಲಪ್ಪ ಜಿಡ್ಡಿಮನಿ ಕರ್ತವ್ಯದ ಮೇಲಿದ್ದ ಪಿಎಸ್ಐ ಬಸಗೌಡ ನೇರ್ಲಿ ಅವರನ್ನು ಕಂಡು ನಡೆದು ಹೋಗಿದ್ದ ಕಳ್ಳತನ ಕುರಿತು ವಿವರಿಸಿ ವಿವರವಾದ ದೂರನ್ನು ನೀಡಿದನು. ಕಳ್ಳತನದ ವಿಷಯವನ್ನು ಪಿಎಸ್ಐ ಬಸಗೌಡ ನೇರ್ಲಿ ಅವರು ಗಂಭೀರವಾಗಿ ಪರಿಗಣಿಸಿ ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಕ್ರೈಂ ನಂ. 214/2024 ಕಲಂ 331 (4) 305 ಬಿಎನ್‌ಎಸ್ ಕಾಯ್ದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತಕ್ಷಣ ತಡ ಮಾಡದೇ ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳ ಉಮರಾಣಿಗೆ ತೆರಳಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು. ಘಟನಾ ಸ್ಥಳದ ಪಂಚನಾಮೆ ಕೈಗೊಂಡರು. ಇದೇ ಸಂದರ್ಭದಲ್ಲಿ ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಭೇಟಿ ನೀಡಿ ಪರಿಶೀಲನೆ ನಡೆಸಿ ಪಿಎಸ್ಐ ಬಸಗೌಡ ನೇರ್ಲಿ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು.


ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ


ಸಿಪಿಐ ವಿಶ್ವನಾಥ ಚೌಗಲಾ


ಪಿಎಸ್ಐ (ಕಾ.ಸು) ಬಸಗೌಡ ನೇರ್ಲಿ


ಹೆಚ್ಚುವರಿ ಪಿಎಸ್ಐ ಲಕ್ಷ್ಮಿ ಬಿರಾದಾರ


ಹೆಚ್ಚುವರಿ ಪಿಎಸ್ಐ ಲಕ್ಷ್ಮಣ ರೂಡಗಿ

### ಸವಾಲಾಗಿ ಸ್ವೀಕರಿಸಿದರು...

ಉಮರಾಣಿಯಲ್ಲಿ ನಡೆದಿದ್ದ ಮನೆ ಕಳ್ಳತನ ಪ್ರಕರಣ ಪತ್ತೆ ಮಾಡುವಲ್ಲಿ ಸಿಪಿಐ ವಿಶ್ವನಾಥ ಚೌಗಲಾ ವಿಶೇಷ ಮುತುವರ್ಜಿ ವಹಿಸಿದರು. ಅವರು ಕಳ್ಳತನ ಪ್ರಕರಣದಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಂದ ನಿರ್ದೇಶನ ಪಡೆದುಕೊಂಡರು. ತನಿಖಾಧಿಕಾರಿ ಬಸಗೌಡರಿಗೆ ಶತಾಯ-ಗತಾಯ ಕಳ್ಳತನ ಪ್ರಕರಣ ಪತ್ತೆ ಮಾಡಲೇಬೇಕು. ಇದಕ್ಕಾಗಿ ಒಂದು ವಿಶೇಷ ತನಿಖಾ ತಂಡವನ್ನು ರಚಿಸಲು ತಿಳಿಸಿದರು. ಪಿಎಸ್ಐ ಬಸಗೌಡ ನೇರ್ಲಿ


ಕುಖ್ಯಾತ ಕಳ್ಳನಿಂದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಕಾರು ಸೇರಿದಂತೆ 7.75 ಲಕ್ಷರೂ.ಗಳ ಸ್ವತ್ತನ್ನು ವಶಪಡಿಸಿಕೊಂಡ ಚಿಕ್ಕೋಡಿ ಪೊಲೀಸರು

☞ 12

# ಕಳೆದ 5 ತಿಂಗಳಲ್ಲಿ 11 ಮನೆ ಕಳ್ಳತನ ಮಾಡಿದ್ದ ಕುಖ್ಯಾತ ಕಳ್ಳ

11 ☜

ಧಾಡಸಿತನಕ್ಕೆ ಮತ್ತು ಚಾಣಾಕ್ಷತನಕ್ಕೆ ಹೇಳಿ ಮಾಡಿಸಿದಂತ ದಕ್ಷರು. ಹಿಡಿದ ಹಠವನ್ನು ಯಾವುದೇ ಕಾರಣಕ್ಕೂ ಪಟ್ಟು ಹಿಡಿದು ಸಾಧಿಸುವ ಛಲ ಇವರಿಗೆ ಬಳುವಳಿಯಾಗಿ ಭಾರತೀಯ ಸೇನೆ ನೀಡಿದೆ. ಅದಕ್ಕಾಗಿ ಕಳ್ಳತನ ಪ್ರಕರಣ ವನ್ನು ಸವಾಲಾಗಿ ಸ್ವೀಕರಿಸಿದರು.

**ವಿಶೇಷ ತನಿಖಾ ತಂಡ ರಚನೆ...**

ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಸಿಪಿಐ ವಿಶ್ವನಾಥ ಚೌಗಲಾ ಅವರು ಪಿಎಸ್ಐ ಬಸಗೌಡ ನೇರ್ಲಿ ಅವರ ನೇತೃತ್ವದಲ್ಲಿ ಹೆಚ್ಚುವರಿ ಪಿಎಸ್ಐಗಳಾದ ಲಕ್ಷ್ಮಿ ಬಿರಾದಾರ, ಲಕ್ಷ್ಮಣ ರೂಡಗಿ, ಸಿಬ್ಬಂದಿಗಳಾದ ಗಜಾನನ ಕಾಂಬಳೆ, ಸಿದ್ದು ಗಲಗಲಿ, ಕಿರಣ ಖಿಡಕಭಾವಿ, ನಿತೀನ ಬಡಿಗೇರ, ಆರ್.ಜಿ. ಕುಳ್ಳೊಳ್ಳಿ, ವಿಜಯ ಪಾಟೀಲ, ಎಸ್.ಬಿ. ಚೌಗಲಾ, ಭರತ ಲಕ್ಕನ್ನವರ, ರಾಯಣ್ಣ ಕರಿಗಾರ, ಮಹೇಶ ಕರಗುಪ್ಪಿ (ಗೋಕಾಕ ಗ್ರಾಮೀಣ) ಬೆಳಗಾವಿಯ ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕನ್ನವರ ಒಳಗೊಂಡಂತೆ ವಿಶೇಷ ತನಿಖಾ ತಂಡ ರಚಿಸಿ ಅಗತ್ಯ ನಿರ್ದೇಶನಗಳನ್ನು ನೀಡಿದರು. ಅಂದುಕೊಂಡಂತೆ ಪಿಎಸ್ಐ ಬಸಗೌಡ ನೇರ್ಲಿ ನೇತೃತ್ವದ ವಿಶೇಷ ತನಿಖಾ ತಂಡ ಹಗಲಿರುಳು ಶ್ರಮಿಸಿತು. ಸಿಕ್ಕ... ಸಿಕ್ಕ ಸಣ್ಣ ಸುಳಿವು ಮಹತ್ವದ ಮೈಲಿಗಲ್ಲು ಮಾಡಿಕೊಂಡಿತು.

ವಿಶೇಷ ತನಿಖಾ ತಂಡವನ್ನು ಎರಡು-ಮೂರು ಗುಂಪುಗಳಾಗಿ ವಿಂಗಡಿಸಿ ಕಳ್ಳತನ ಪ್ರಕರಣ ಪತ್ತೆಹಚ್ಚಿ ಕಳ್ಳರನ್ನು ಹೆಡೆಮುರಿ ಕಟ್ಟಲು ಕಾರ್ಯಾಚರಣೆ ರೂಪಿಸ ಲಾಗಿತ್ತು. ಎಲ್ಲಾ ಮೂಲಗಳಿಂದ ಖಚಿತ ಮಾಹಿತಿ ಆಧರಿಸಿ ಕಳ್ಳರ ಬೆನ್ನು ಬಿದ್ದಿತ್ತು. ಅದಾಗಲೇ ಘಟನಾ ಸ್ಥಳದಲ್ಲಿ ಸಿಕ್ಕ ಸೂಕ್ಷ್ಮ ಸಾಕ್ಷಾಧಾರಗಳು ಹಾಗೂ ತಾಂತ್ರಿಕ ಸೌಲಭ್ಯದ ಆಧಾರದಿಂದ ಕಳ್ಳರ ಮನೆಯ ಮುಂದೆ ಹೋಗಿ ಕಳ್ಳರನ್ನು ತನಿಖಾ ತಂಡ ತಮ್ಮ ವಶಕ್ಕೆ ದಿನಾಂಕ 12-01-2025ರಂದು ತೆಗೆದುಕೊಂಡು ಪಿಎಸ್ಐ ಬಸಗೌಡರ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ಕಾಲಕ್ಕೆ ತನ್ನ ಹೆಸರು ರಾಜೇಸಾಬ ಗುಲಾಬ ನಾಯಿಕವಾಡಿ ಎಂದು ತಿಳಿಸಿದನಲ್ಲದೇ ಅಪ್ರಾಪ್ತ ಬಾಲಕ ತನ್ನ ಸಹೋದರನ ಮಗ ಎಂದು ಬಾಯಿ ಬಿಟ್ಟನು. ವಿಚಾರಣೆ ಕಾಲಕ್ಕೆ ಎಲ್ಲ ಸತ್ಯಗಳನ್ನು ಐನಾತಿ ಕಳ್ಳ ರಾಜೇಸಾಬ ಬಾಯಿ ಬಿಟ್ಟನು.

**ಯಾರೀತ ಐನಾತಿ ಕಳ್ಳ ರಾಜೇಸಾಬ...**

ಮೈ ಮುರಿದು ನಡು ಬಗ್ಗಿಸಿ ದುಡಿಯಲಾರದ ಹರಾಮಿ. ತನ್ನ ಸಹೋದರನ ಮಗನನ್ನು ಕ್ರಿಮಿನಲ್ ಚಟುವಟಿಕೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಿದ್ದನು. ತನ್ನ ಮೋಜು-ಮಸ್ತಿಗಾಗಿ ಕಳ್ಳತನದ ದಾರಿ ಹಿಡಿದಿದ್ದ ರಾಜೇಸಾಬ ಮೂಲತಃ ಹುಕ್ಕೇರಿ ತಾಲ್ಲೂಕಿನ ಸೊಲ್ಲಾಪೂರ ಗ್ರಾಮದವನು. ಊರಿನಲ್ಲಿ ಸಭ್ಯತೆಯ ಮುಖವಾಡ ಧರಿಸಿದ್ದ ಗೋಮುಖ ವ್ಯಾಘ್ರನಾಗಿದ್ದನು. ಊರಿನಲ್ಲಿ ಈತನ ಕೃತ್ಯ ಕೇಳಿದ ಜನತೆ ಛೀ... ಥೂ ಎನ್ನುತ್ತಿದ್ದಾರೆ.

**ಮನೆಗಳ ಕಳ್ಳತನ ಮಾಡಿದ್ದನು...**

ಮಹಾ ಹರಾಮಿ, ಕುಖ್ಯಾತ ಕಳ್ಳ ರಾಜೇಸಾಬ ನಾಯಿಕವಾಡಿಯು ಪಿಎಸ್ಐ ಬಸಗೌಡ ನೇರ್ಲಿ, ಸಿಪಿಐ ವಿಶ್ವನಾಥ ಚೌಗಲಾ ಅವರ ಮುಂದೆ ಕಳೆದ ನಾಲ್ಕೈದು ತಿಂಗಳಲ್ಲಿ ಹುಕ್ಕೇರಿ, ಚಿಕ್ಕೋಡಿ, ಘಟಪ್ರಭಾ, ಸಂಕೇಶ್ವರ ರಾಯಭಾಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 11 ಮನೆ ಕಳ್ಳತನ ಮಾಡಿರುವ ಬಗ್ಗೆ ಒಪ್ಪಿಕೊಂಡಿದ್ದಾನೆ. ತನ್ನ ಕರಾಳ ದಂಧೆ ಮುಂದುವರೆಸಲು ಕೆಎ-23 ಎಂ-6447 ಟಾಟಾ ಇಂಡಿಗೋ ಕಾರನ್ನು ಬಳಸುತ್ತಿದ್ದನು.

**7.75 ಲಕ್ಷರೂ.ಗಳ ಸ್ವತ್ತು ವಶಕ್ಕೆ...**

ಮಹಾ ಹರಾಮಿ ಐನಾತಿ ಕಳ್ಳ ರಾಜೇಸಾಬ ನಾಯಿಕವಾಡಿ ಮತ್ತು ಅಪ್ರಾಪ್ತ ಬಾಲಕ ಸೇರಿ ಕಳ್ಳತನ ಮಾಡಿದ್ದ 6,24,250 ರೂ.ಗಳ 120 ಗ್ರಾಂ ಚಿನ್ನಾಭರಣ ಸೇರಿದಂತೆ ತಾಮ್ರದ ಹಂಡೆ... ಕೊಡ ಜಪ್ತಿ ಮಾಡಿದ್ದು, ಕೃತ್ಯಕ್ಕೆ ಬಳಸಿದ ಕಾರು ಸೇರಿದಂತೆ ಒಟ್ಟು 7.75 ಲಕ್ಷರೂ. ಗಳ ಸ್ವತ್ತನ್ನು ಪಿಎಸ್ಐ ಬಸಗೌಡರ ತಂಡ ವಶಪಡಿಸಿಕೊಳ್ಳು ವಲ್ಲಿ ಯಶಸ್ವಿಯಾಗಿದೆ. ಅಪ್ರಾಪ್ತ ಬಾಲಕನನ್ನು ರಿಮ್ಯಾಂಡ್ ಹೋಂಗೆ ಸೇರಿಸಲಾಗಿದೆ.

**ಪಿಎಸ್ಐ ಬಸಗೌಡರ ತಂಡಕ್ಕೆ ಶ್ಲಾಘನೆ...**

ಕಳೆದ 5 ತಿಂಗಳ ಅವಧಿಯಲ್ಲಿ 11 ಮನೆ ಕಳ್ಳತನ ನಡೆಸಿದ್ದ ಕುಖ್ಯಾತ ಕಳ್ಳ ರಾಜೇಸಾಬ ಗುಲಾಬ ನಾಯಿಕ ವಾಡಿ ಮತ್ತು ಅಪ್ರಾಪ್ತ ಬಾಲಕನನ್ನು ಬಂಧಿಸಿ ಅವರಿಂದ 7.75 ಲಕ್ಷರೂ. ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಪಿಎಸ್ಐ (ಕಾ.ಸು) ಬಸಗೌಡ ನೇರ್ಲಿ, ಹೆಚ್ಚುವರಿ ಪಿಎಸ್ಐಗಳಾದ ಲಕ್ಷ್ಮಿ ಬಿರಾದಾರ, ಲಕ್ಷ್ಮಣ ರೂಡಗಿ ಮತ್ತು ಸಿಬ್ಬಂದಿಗಳು ಕಳ್ಳತನ ಪ್ರಕರಣ ಪತ್ತೆ ಮಾಡುವಲ್ಲಿ ಸೂಕ್ತ ನಿರ್ದೇಶನ ನೀಡಿದ ಸಿಪಿಐ ವಿಶ್ವನಾಥ ಚೌಗಲಾ ಅವರನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣಗೌಡರ ಅವರು ಶ್ಲಾಘಿಸಿದ್ದಾರೆ. ☯

---

9 ☜

ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು.

**ಪಂಚನಾಮೆ, ಮರಣೋತ್ತರ ಪರೀಕ್ಷೆ...**

ವಿಷಯ ತಿಳಿದ ಪಿಎಸ್ಐ (ಕಾ.ಸು) ಕಿರಣ ಮೋಹಿತೆ, ಸಿಪಿಐ ಸುರೇಶಬಾಬು ತಮ್ಮ ಸಿಬ್ಬಂದಿಗಳೊಡನೆ ಪ್ರಕಾಶನ ಕೊಲೆ ನಡೆದ ಸ್ಥಳಕ್ಕೆ ಧಾವಿಸಿದರು. ಕೊಲೆಯಾದ ಪ್ರಕಾಶನ ಶವ ಮತ್ತು ಘಟನಾ ಸ್ಥಳ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದರು. ಅದಾಗಲೇ ಗೋಕಾಕ ಪೊಲೀಸ್ ಉಪವಿಭಾಗದ ಡೈನಾಮಿಕ್ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಘಟನಾ ಸ್ಥಳಕ್ಕೆ ಧಾವಿಸಿ ಬಂದರು. ಇದಾದ ಕೆಲ ಹೊತ್ತಿನಲ್ಲಿ ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್. ಅವರು ಕೂಡಾ ಘಟನಾ ಸ್ಥಳಕ್ಕೆ ಬಂದು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ತನಿಖಾಧಿ ಕಾರಿ ಸುರೇಶಬಾಬು, ಪಿಎಸ್ಐ ಕಿರಣ ಮೋಹಿತೆ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು. ಸಿಪಿಐ ಸುರೇಶಬಾಬು ಅವರು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಪ್ರಕರಣದ ಬಗ್ಗೆ ಸಮಾಲೋಚಿಸಿ ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ನಂತರ ಪಿಎಸ್ಐ ಕಿರಣ ಮೋಹಿತೆ ಸಿಬ್ಬಂದಿಗಳೊಡನೆ ಶವದ ಮತ್ತು ಘಟನಾ ಸ್ಥಳದ ಪಂಚನಾಮೆ, ಪ್ರತ್ಯಕ್ಷದರ್ಶಿ ಸಾಕ್ಷಿಗಳ ಹೇಳಿಕೆ, ಸಂಬಂಧಿಗಳ ಹೇಳಿಕೆ ಪಡೆದುಕೊಂಡು ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಒಪ್ಪಿಸುವ ಕಾರ್ಯ ಮಾಡಿ ದರು.

**ವಿಶೇಷ ತನಿಖಾ ತಂಡ ರಚನೆ...**

ಶತಾಯ-ಗತಾಯ ಪ್ರಕಾಶ ಹಿರಟ್ಟಿ ಕೊಲೆ ಮಾಡಿದ ಹಂತಕರು ತಲೆಮರೆಸಿಕೊಳ್ಳದಂತೆ ತಕ್ಷಣ ಬಂಧಿಸಲು ಕ್ರಮ ಕೈಗೊಳ್ಳಬೇಕೆಂದು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರ ನಿರ್ದೇಶನ ದಂತೆ ವಿಶೇಷ ತನಿಖಾ ತಂಡವೊಂದನ್ನು ರಚಿಸಿ ಅದರ ನೇತೃತ್ವವನ್ನು ಸಿಪಿಐ ಸುರೇಶಬಾಬು ವಹಿಸಿಕೊಂಡರು. ತಂಡದಲ್ಲಿ ಪಿಎಸ್ಐ ಕಿರಣ ಮೋಹಿತೆ, ಎಎಸ್ಐಗಳಾದ ಎಸ್.ಕೆ. ಪಾಟೀಲ, ಎಫ್.ಕೆ. ಗುರನಗೌಡರ, ಟಿ.ಎಸ್. ದಳವಾಯಿ, ಸಿಬ್ಬಂದಿಗಳಾದ ಬಿ.ವ್ಹಿ. ನೇರ್ಲಿ, ಜಗದೀಶ ಗುಡ್ಲಿ, ಕುಮಾರ ಪವಾರ, ವ್ಹಿ.ಎಸ್. ಮಲಾಮರಡಿ, ಎಂ.ವೈ. ಪಡದಲಿ, ಆರ್.ವ್ಹಿ. ಅರವಾನಿ, ಡಿ.ಬಿ. ಅಂತರಗಟ್ಟಿ, ಡಿ.ಜಿ. ಕೊಣ್ಣೂರ, ಹೆಚ್.ಡಿ. ಗೌಡಿ, ಸಂಜು ಮಾನೆಪ್ಪಗೋಳ, ವ್ಹಿ.ಎಲ್. ನಾಯಿಕವಾಡಿ, ಎನ್.ಜಿ.



ಕೊಲೆಯಾಗಿರುವ ಪ್ರಕಾಶನ ಪಕ್ಕ ಹಂತಕರ ತಲ್ವಾರ್

ದುರದುಂಡಿ, ಪಿ.ಬಿ. ನೇಸರಗಿ, ಎಂ.ಎನ್. ಪರಮಶೆಟ್ಟಿ, ಕೆ.ಐ. ತಿಳಗಂಜಿ, ಸಂತೋಷ ವಜ್ರಮಟ್ಟಿ, ಎಸ್.ಎಸ್. ಕಲ್ಲೊಳ್ಳಿ, ಬೆಳಗಾವಿಯ ಟೆಕ್ನಿಕಲ್ ಸೆಲ್‌ನ ಸಹಾಯಕರಾದ ವಿನೋದ ಠಕ್ಕನ್ನವರ, ಸಚಿನ್ ಪಾಟೀಲ ಒಳಗೊಂಡಂತೆ ತಂಡ ರಚಿಸಿ ಸಿಪಿಐ ಸುರೇಶಬಾಬು ಅಗತ್ಯ ನಿರ್ದೇಶನಗಳನ್ನು ನೀಡಿದರು.

**24 ಗಂಟೆಗಳಲ್ಲಿ ಹಂತಕರ ಬಂಧನ...**


ಅಂದುಕೊಂಡಂತೆ ವಿಶೇಷ ತನಿಖಾ ತಂಡ ಮೂರು ಗುಂಪುಗಳಾಗಿ ಕಾರ್ಯಾಚರಣೆಗೆ ಇಳಿದಿತ್ತು. ಖಚಿತ ಮಾಹಿತಿ ಆಧರಿಸಿ ಹಂತಕರನ್ನು ಖೆಡ್ಡಾಗೆ ಕೆಡವಲಾಯಿತು. ದಿನಾಂಕ 16-01-2025ರಂದು ಐನಾತಿ ಹಂತಕ ವಿಜಯಕುಮಾರ ಅಲಿಯಾಸ್ ಕುಮಾರ ಮಲ್ಲಪ್ಪ ನಾಯಿಕ, ಉಮೇಶ ಬಾಳಪ್ಪ ಕಂಬಾರ, ಮಾರುತಿ ಯಲ್ಲಪ್ಪ ವಡ್ಡರ, ಅಭಿಲಾಷ ಬಸವರಾಜ ಪಾತ್ರೋಟ, ಮನೋಜ ಅಪ್ಪಣ್ಣ ಪಾತ್ರೋಟ, ರವೀಂದ್ರ ಸುಭಾಸ ಪಾತ್ರೋಟ ಸೇರಿದಂತೆ ಇಬ್ಬರು ಅಪ್ರಾಪ್ತ ತರುಣರನ್ನು ಕೇವಲ 24 ಗಂಟೆಗಳಲ್ಲಿ ವಿಶೇಷ ತನಿಖಾ ತಂಡ ಕಾರ್ಯಾಚರಣೆ ನಡೆಸಿ 8 ಜನ ಹಂತಕರನ್ನು ಬಂಧಿಸಿದ್ದು ನಿಜಕ್ಕೂ ರೋಚಕ. ಕೃತ್ಯಕ್ಕೆ ಬಳಸಿದ 2 ಬೈಕ್, 5 ಮೊಬೈಲ್ ಜಪ್ತಿ ಮಾಡುವುದಲ್ಲದೇ ಕೃತ್ಯಕ್ಕೆ ಉಪ ಯೋಗಿಸಿದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಂತಕರು ತಮ್ಮ ಕೃತ್ಯ ಒಪ್ಪಿಕೊಂಡಿದ್ದಾರೆ. ಎರಡು ಜನ ಬಾಲಪರಾಧಿಗಳನ್ನು ರಿಮ್ಯಾಂಡ್ ಹೋಂಗೆ ಸೇರಿಸಲಾಗಿದೆ. ಉಳಿದಂತೆ ಆರು ಜನರನ್ನು ಜೈಲಿಗಟ್ಟಲಾಗಿದೆ. ಬಂಧಿತರೆಲ್ಲ ಕಂಬಿಯ ಹಿಂದೆ ತಂಗಲು ಮುರಿಯುತ್ತಿದ್ದಾರೆ. ಗೋಕಾಕ ಗ್ರಾಮೀಣ ಪೊಲೀಸ್ ಠಾಣೆಯ ವಿಶೇಷ ತನಿಖಾ ತಂಡದ ಕಾರ್ಯವನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅಭಿನಂದಿಸಿ ಶ್ಲಾಘಿಸಿದ್ದಾರೆ. ☯

---

# ವಿಷ ಸೇವಿಸಿ ಆತ್ಮಹತ್ಯೆ!

3 ☜

ಈ ವಿಚಾರ ಪೊಲೀಸ್ ಠಾಣೆ ಮೆಟ್ಟಿಲೇರಿದ್ದರಿಂದಾಗಿ ಪೊಲೀಸರ ಸೂಚನೆಯಂತೆ ಮನೆಯಲ್ಲಿದ್ದ ಕೋವಿಯನ್ನು ಸುಳ್ಯದ ಕೋವಿ ಮಳಿಗೆಯಲ್ಲಿ ಮೂರು ತಿಂಗಳ ಅವಧಿಗೆ ಡೆಪಾಸಿಟ್ ಮಾಡಿಸಲಾಗಿತ್ತು. ಅವಧಿ ಮುಗಿದ ಹಿನ್ನೆಲೆಯಲ್ಲಿ ಪತ್ನಿ ವಿನೋದರವರ ವಿನಂತಿಯ ಮೇರೆಗೆ ಸ್ಥಳೀಯ ಸಾಮಾಜಿಕ ಕಾರ್ಯಕರ್ತರೊಬ್ಬರು ಕೋವಿ ಬಿಡಿಸಿಕೊಡಲು ಸಹಕರಿಸಿದ್ದರು. ಅದರಂತೆ ಕೋವಿಯನ್ನು



ಮನೆಗೆ ವಾಪಸ್ ತಂದಿದ್ದರು. ಹಾಗೆ ತಂದು ಕೇವಲ ಮೂರು ದಿನವಷ್ಟೆ ಆಗಿತ್ತು. ಮತ್ತೆ ರಾಮಚಂದ್ರಗೌಡ ಉಗ್ರಗೊಂಡು ಕೋವಿಯನ್ನು ಕೈಗೆ ತೆಗೆದುಕೊಳ್ಳುತ್ತಾನೆ ಎಂದು ಯಾರೂ ನಂಬಿರಲಿಲ್ಲ. ಒಂದು ವೇಳೆ ಮನೆಯಲ್ಲಿ ಬಂದೂಕು ಇದ್ದಿದ್ದರೂ ಅದಕ್ಕೆ ಬಳಸುವ ಬುಲೆಟ್‌ನ್ನು ಕೈಗೆ ಸಿಗದಂತೆ ರಹಸ್ಯವಾಗಿ ಇಟ್ಟಿದ್ದರೆ ಬಹುಶಃ ದುರಂತ ನಡೆಯುತ್ತಿರಲಿಲ್ಲವೇನೋ?

ಈ ಹಿಂದೆ ಪ್ರಕರಣ ಪೊಲೀಸ್ ಠಾಣೆ ತನಕ ಹೋಗಿ ಪೊಲೀಸರು ಎಚ್ಚರಿಕೆ ನೀಡಿ ಕಳಿಸಿದ್ದರಿಂದ ಮತ್ತೆ ರಾಮಚಂದ್ರಗೌಡ ಆ ರೀತಿ ವರ್ತಿಸುವುದಿಲ್ಲವೆಂದು ಮನೆಯವರು ನಂಬಿದ್ದರೇನೋ? ಆದರೆ ಅದೇನಾ ಯಿತೋ ಏನೋ ಅವತ್ತು ಅಂದರೆ ಜನವರಿ 17ರಂದು ಎಂದಿನಂತೆ ಕಂಠಮಟ್ಟ ಕುಡಿದ ರಾಮಚಂದ್ರಗೌಡ ರಾತ್ರಿ 10ಗಂಟೆಯ ವೇಳೆಗೆ ಪತ್ನಿ ವಿನೋದ ಜತೆ ಜಗಳ ತೆಗೆದಿದ್ದಾನೆ. ಈ ವೇಳೆ ಮನೆಯಲ್ಲಿ ಹಿರಿಮಗ ಪ್ರಶಾಂತ್ ಮಾತ್ರ ಇದ್ದನು. ಉಳಿದಂತೆ ಎರಡನೇ ಮಗ ನಿಶಾಂತ್ ಸುಳ್ಯದಲ್ಲಿದ್ದನೆಂದೂ, ಕಿರಿಮಗ ರಂಜಿತ್ ಬೆಳ್ತಂಗಡಿ ತಾಲೂಕಿನ ಕ್ಷೇತ್ರವೊಂದಕ್ಕೆ ಹೋಗಿದ್ದನಂತೆ.

ಜಗಳ ತಾರಕಕ್ಕೇರಿ ರಾತ್ರಿ 10.30ರ ವೇಳೆಗೆ ರಾಮಚಂದ್ರ ಗೌಡ ಇನ್ನಷ್ಟು ರೊಚ್ಚಿಗೆದ್ದಿದ್ದು, ಮನೆಯಲ್ಲಿದ್ದ ಕೋವಿ ಎತ್ತಿಕೊಂಡು, ಮಗ ಪ್ರಶಾಂತ್‌ಗೆ ಗುಂಡಿಕ್ಕಲು ಮುಂದಾಗಿದ್ದಾನೆ. ಗಂಡ ಕೈನಲ್ಲಿ ಕೋವಿ ಹಿಡಿದು ಮಗನಿಗೆ ಗುಂಡು ಹಾರಿಸಲು ಮುಂದಾಗಿರುವುದನ್ನು ಕಂಡ ಹೆಂಡತಿ ವಿನೋದ ಅದನ್ನು ತಡೆಯುವ ಸಲುವಾಗಿ. ಗಂಡ ರಾಮಚಂದ್ರನನ್ನು ಆತ ಮಲಗುತ್ತಿದ್ದ ಕೊಠಡಿಯ ಕಡೆಗೆ ದೂಡಿಕೊಂಡು ಹೋಗಿದ್ದಾರೆ. ಈ ವೇಳೆ ರಾಮಚಂದ್ರಗೌಡ ತನ್ನ ಕೈನಲ್ಲಿದ್ದ ಕೋವಿಯ ಟ್ರಿಗರ್ ಎಳೆದಿದ್ದರಿಂದ ಗುಂಡು ಹಾರಿ ಎದುರಿಗಿದ್ದ ಹೆಂಡತಿ ವಿನೋದಳ ಎದೆಯನ್ನು ಹೊಕ್ಕಿದೆ. ಪರಿಣಾಮ ಅವರು ರಕ್ತಸ್ರಾವಗೊಂಡು ನೆಲಕ್ಕೆ ಬಿದ್ದಿದ್ದಲ್ಲದೆ ಅಲ್ಲಿಯೇ ಪ್ರಾಣ ಬಿಟ್ಟಿದ್ದಾರೆ.

ಯಾವಾಗ ಗುಂಡು ತಗುಲಿ ಹೆಂಡತಿ ವಿನೋದ ಪ್ರಾಣಬಿಟ್ಟಳೋ ಗಂಡ ರಾಮಚಂದ್ರಗೌಡ ಕುಡಿತದ ಮತ್ತು ತಲೆಯಿಂದ ಜರ್ರನೆ ಇಳಿದಿತ್ತು. ಇನ್ನು ತನಗೆ ಉಳಿಗಾಲವಿಲ್ಲವೆಂದು ಅರಿತ ಆತ ಮನೆಯಲ್ಲಿ ರಬ್ಬರ್‌ಗೆ ಹಾಕಲೆಂದು ತಂದಿದ್ದ ರಾಸಾಯನಿಕವನ್ನು ಕುಡಿದು ಹೆಂಡತಿ ಬಿದ್ದಲ್ಲಿ ಬಂದು ಬಿದ್ದು ಅಲ್ಲಿಯೇ ಪ್ರಾಣ ಬಿಟ್ಟಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಪಶ್ಚಿಮ ವಲಯದ ಐಜಿ ಅಮಿತ್ ಸಿಂಗ್ ಭೇಟಿ ನೀಡಿ ಕೊಲೆ ಮತ್ತು ಆತ್ಮಹತ್ಯೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಅಲ್ಲದೆ ಪುತ್ತೂರು ಡಿವೈಎಸ್ಪಿ ಅರುಣ್ ನಾಗೇಗೌಡ, ಎಸ್ಪಿ ಯತೀಶ್, ಸುಳ್ಯ ಸರ್ಕಲ್ ಇನ್ಸ್‌ಪೆಕ್ಟರ್ ತಿಮ್ಮಪ್ಪ ನಾಯ್ಕ ಹಾಗೂ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿ ಬಳಿಕ ಮೃತದೇಹಗಳನ್ನು ಎರಡು ಆಂಬ್ಯುಲೆನ್ಸ್‌ಗಳಲ್ಲಿ ಸುಳ್ಯದ ಕೆವಿಜಿ ಆಸ್ಪತ್ರೆಗೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ಬಳಿಕ ಶವಗಳನ್ನು ವಾರಸುದಾರರಿಗೆ ನೀಡಿದ್ದು ಅಂತ್ಯ ಕ್ರಿಯೆ ನಡೆಸಲಾಗಿದೆ. ☯

## ಪಾತಕ ಪ್ರಪಂಚ

# ಎಲ್ಲಾ ಪುರುಷರಿಗಾಗಿ!

ಪುರುಷ ಶಕ್ತಿ ಅಂದರೇನು ಅಂತ ವಿವರಿಸುವ ಅಗತ್ಯ ಇಲ್ಲ. ಪ್ರತಿಯೊಬ್ಬ ಗಂಡಸರು ಸಹ ಪುರುಷ ಶಕ್ತಿ ಸಮೃದ್ಧಿಯಾಗಿರಬೇಕು ಮತ್ತು ಎಷ್ಟೇ ವಯಸ್ಸಾದರೂ ಆ ಶಕ್ತಿಯ ತೀವ್ರತೆ ಕಡಿಮೆ ಆಗಬಾರದು ಎಂಬುದು ಆಸೆ . ಈ ಆಸೆ ಬಹುತೇಕ ಗಂಡಸರಲ್ಲಿ ಇರುತ್ತದೆ.

ಹೆಂಡತಿನ ತೃಪ್ತಿಪಡಿಸಬೇಕು. ಮಿಲನದಲ್ಲಿ ವಿಜೃಂಭಿಸಬೇಕು. ವಿಜಯ ಪತಾಕೆ ಹಾರಿಸಬೇಕು. ಹೆಂಡತಿ ತೃಪ್ತಳಾಗಿ ಗಂಡನನ್ನು ಮೆಚ್ಚಿಕೊಳ್ಳಬೇಕು ಎಂಬ ಅಂತರ್ಯದ ಆಸೆ ಎಲ್ಲರಲ್ಲಿಯೂ ಇರುತ್ತದೆ. ಆದರೆ ಎಲ್ಲರಲ್ಲಿಯೂ ಈ ಪರಿಪೂರ್ಣ ಶಕ್ತಿ ಇರೋಲ್ಲ. ಕಾರಣ ಹಲವಾರು ಇರಬಹುದು. ಅದರ ವಿಶ್ಲೇಷಣೆ ಅನಗತ್ಯ.

ದಾಂಪತ್ಯ ಸುಖದಲ್ಲಿ ವಿಜೃಂಭಿಸಲಾರದ ಗಂಡಸನ್ನು ಹೆಂಡತಿ ತಿರಸ್ಕಾರದಿಂದ ಕಾಣುತ್ತಾಳೆ. ಅದಕ್ಕಾಗಿ ಎಷ್ಟೋ ಮಂದಿ ಜಾಹೀರಾತುಗಳಲ್ಲಿ ಬರುವ ಮಾತ್ರೆ, ಔಷಧಿ, ಕಷಾಯದ ಪುಡಿಗಳಿಗೆ ವಿಪರೀತ ಹಣ ಕೊಟ್ಟು ರಹಸ್ಯವಾಗಿ ಉಪಯೋಗಿಸುತ್ತಾರೆ.

ಇದು ಒಂದು ವರ್ಗದ ಜನಗಳ ಸಂಗತಿ ಆಯಿತು. ಇನ್ನುಕೆಲವರು ಅಂದರೆ ವಯಸ್ಸಾಗಿದ್ದರೂ ಚಪಲ ಕಡಿಮೆ ಆಗಿರಲ್ಲ. ಆಸೆ, ಚಪಲ ಇದ್ದರೂ ಶಕ್ತಿ ಬೇಕಲ್ಲ. ಅದಕ್ಕಾಗಿ ಅವರೂ ಸಹ ನಕಲಿ ಜಾಹೀರಾತುಗಳ ಪ್ರಭಾವಕ್ಕೆ ಒಳಗಾಗಿ ಹಣವನ್ನು ನೀರಿನ ರೀತಿ ಖರ್ಚು ಮಾಡುತ್ತಾರೆ.

ಆದರೆ ಈ ಲೇಖನಗಳಲ್ಲಿ ಹೇಳಲಿರುವುದು ಇಂತಹ ಸಾಮಾನ್ಯ ವಿಚಾರಗಳಲ್ಲ. ಅಸಾಮಾನ್ಯ ವ್ಯಕ್ತಿಯ ಭಯಾನಕ ಆಟದ ರೋಚಕ ಪ್ರಸಂಗ.

ರಾಜ್ಯ - ಕೇರಳ, ಸ್ಥಳ - ಕೊಟ್ಟಾಯಂ ಪ್ರಾಂತ್ಯ, ಕಾಲಾವಧಿ - 2008ರಿಂದ 2010

●●●

ರಾತ್ರಿ ಒಂಭತ್ತೂವರೆ! ಮಗಳು ರೂಪ ನಾಯರ್. ಪ್ರಾಯದ ಯುವತಿ. ಅವಳು ಡಿಗ್ರಿ ಓದುತ್ತಿದ್ದಾಳೆ. ರಾತ್ರಿಯ ಹೊತ್ತು ಒಂದು ಗಂಟೆತನಕ ಓದುತ್ತಾಳೆ. ಅವಳ ತಾಯಿ ಶುಭಕಾಂತೆ ಟೀ ಮಾಡಿಕೊಂಡು ಬಂದರು.

ರೂಮಿನ ಬಾಗಿಲು ತೆರೆದಿದೆ. ದೀಪ ಬಳಗುತ್ತಿದೆ. ರೂಪ ನಾಯರ್ ಇರಲಿಲ್ಲ. ಟಾಯ್ಲೆಟ್‌ಗೆ ಹೋಗಿರಬಹುದು ಎಂದುಕೊಂಡು ಈಗ ಜೋರಾಗಿ ಕೂಗಿದರು. ಅವಳಿಂದ ಉತ್ತರ ಬರಲಿಲ್ಲ. ಮತ್ತೊಮ್ಮೆ ಕೂಗಿದರು. ಶುಭಕಾಂತೆಯ ಕೂಗಾಟ ಕೇಳಿ ಮನೆಯವರೆಲ್ಲಾ ಹೊರಗೆ ಬಂದರು.

ಎಲ್ಲಿ... ಎಲ್ಲಿ... ರೂಪ ಎಲ್ಲಿ? ಎಲ್ಲರೂ ತಲೆಕೆಡಿಸಿಕೊಂಡಿದ್ದಾರೆ. ಎಲ್ಲ ಕಡೆ ಹುಡುಕುತ್ತಿದ್ದಾರೆ.

ಇಲ್ಲ... ಅವಳೆಲ್ಲಿಯೂ ಇರಲಿಲ್ಲ.

ರಾತ್ರಿ ವೇಳೆ ಹೇಳದೆ-ಕೇಳದೆ ಎಲ್ಲಿಗೆ ಹೋದ್ಲು ಎಂದು ಫೋನ್ ಮಾಡಿದರು. ಫೋನ್ ರಿಂಗಿಂಗ್ ಸೌಂಡ್ ಕೇಳಿ ಬಂದಿತು.

ಮೊಬೈಲ್ ಅವಳ ರೂಮಲ್ಲಿದೆ.

ರೂಪ ನಾಯರ್ ತಂದೆ, ಅವರ ಮಗ ಮತ್ತು ಇಬ್ಬರು ಸಂಬಂಧಿಕರು ಅವಳನ್ನು ಹುಡುಕಲು ಈಗ ಹೊರಟರು. ಆ ಊರಿನ ಹಲವಾರು ಕಡೆ ನೋಡಿದರು. ಮನೇಲಿ ತಾಯಿ, ಸಂಬಂಧಿಕರಿಗೆಲ್ಲಾ ಫೋನ್ ಮಾಡಿ ಅವಳು ಬಂದಿದ್ದಾಳ ಎಂದು ವಿಚಾರಿಸಿದರು.

ಇಲ್ಲ... ಎಲ್ಲಿಯೂ ಇಲ್ಲ. ಹಾಗಾದರೆ ರೂಪ ಎಲ್ಲಿ? ರೂಪ ನಾಯರ್ ಎಲ್ಲಿದ್ದಾಳೆ ಅಂತ ಬೆಳಗಾದರೂ ಸಹ ಪತ್ತೆ ಆಗಲಿಲ್ಲ. ಮನೆಗೆ ಅಪರಿಚಿತರು ಬಂದಿಲ್ಲ. ಯಾರೂ ಕಿಡ್ನಾಪ್ ಮಾಡಿಲ್ಲ.

ಒಂದು ವೇಳೆ ತಂಗಾಳಿ ಸೇವನೆಗಾಗಿ ರೂಮಿನಿಂದ ಹೊರಗೆ ಹೋಗಿದ್ದಾಗ ಯಾರಾದರೂ ಕಿಡ್ನಾಪ್ ಮಾಡಿರಬಹುದೆ?

ಬೆಳಗಿನ ಒಂಭತ್ತು ಗಂಟೆ. ಹೆತ್ತವರ ದುಃಖ, ಸಂಕಟ ಅನುಭವಿಸಿದವರಿಗೆ ಗೊತ್ತಿದೆ ಬಿಡಿ. ಅವರು ಎಷ್ಟು ಕಾಲ ಸಹಿಸಲು ಸಾಧ್ಯ? ಹಾಗಾಗಿ ಅವರು ಪೊಲೀಸ್ ಸ್ಟೇಷನ್‌ಗೆ ಬಂದು ಕಂಪ್ಲೆಂಟ್ ಕೊಟ್ಟರು.

ಪೊಲೀಸ್ ಅಧಿಕಾರಿ ಮಾದವನ್!

ಉಡಾಫೆಯಿಂದ ಮಾತಾಡಿದನು.

"ನಿಮ್ಮ ಮಗಳಿಗೆ ವಯಸ್ಸೆಷ್ಟು?"

"ಇಪ್ಪತ್ತು ವರ್ಷ ಸಾರ್.'

"ಅಂದರೆ ಓಡಿ ಹೋಗುವ ವಯಸ್ಸು."

ರೂಪಾಳ ತಂದೆ ಗಾಬರಿಯಿಂದ "ಸಾರ್... ನೀವು ಏನು ಹೇಳ್ತಾ ಇದ್ದೀರ?'

"ರೂಪ ಯಾರನ್ನೋ ಲವ್ ಮಾಡಿದ್ದಾಳೆ. ಮನೆಯವರು ಒಪ್ಪಲಾರರು ಎಂದು ಹೆದರಿ ಪ್ರಿಯತಮನ ಜೊತೆ ಊರು ಬಿಟ್ಟು ಹೋಗಿದ್ದಾಳೆ. ಇಂತಹ ಕೇಸುಗಳು ಆಗಾಗ ಬರುತ್ತದೆ."

"ಹಾಗಲ್ಲ ಸಾರ್...'

ಮಾದವನ್ ಕೂಡಲೇ "ಹಾಗೂ ಇಲ್ಲ... ಹೀಗೂ ಇಲ್ಲ. ಇಂತಹ ಕೇಸುಗಳ ಕಂಪ್ಲೆಂಟ್ ತಗೋಳಲ್ಲ ನೀವು ಹೊರಡಿ" ಎಂದನು.

"ಸಾರ್... ನನ್ನ ಮಗಳು ಯಾರನ್ನೂ ಲವ್ ಮಾಡಿಲ್ಲ. ಮಾಡೋದು ಇಲ್ಲ. ಸಂಬಂಧಿಕರ ಹುಡುಗನ ಜೊತೆ ಮದುವೆ ಫಿಕ್ಸ್ ಆಗಿದೆ."

"ನೀವು ಫಿಕ್ಸ್ ಮಾಡಿದ್ದೀರ. ಅವಳಿಗೆ ಇಷ್ಟ ಇಲ್ಲದೆ ಬೇರೆಯವನ ಜೊತೆ ಹೋಗಿದ್ದಾಳೆ."

ತಂದೆ ಬೇಸರದಿಂದ "ಅಂದರೆ... ನೀವು... ನೀವು ಕಂಪ್ಲೆಂಟ್ ತಗೋಳಲ್ವ?"

"ಈಗ ತಗೋಳಲ್ಲ."

"ಇನ್ಯಾವಾಗ ತಗೋತೀರ?"

"ಎರಡು ದಿವಸ ಕಳೆದ ಮೇಲೆ ಬನ್ನಿ. ಅವಳ ಲವ್ ಬಗ್ಗೆ ವಿಚಾರಣೆ ಮಾಡಿ. ಅವಳು ಸಿಗದಿದ್ದರೆ ಆಗ ಕಂಪ್ಲೆಂಟ್ ತಗೋತೀನಿ."

"ಅಷ್ಟರಲ್ಲಿ ಅವಳಿಗೇನಾದರೂ ತೊಂದರೆಯಾದರೆ ಏನು ಗತಿ ಸಾರ್.'

ಪೊಲೀಸ್ ಅಧಿಕಾರಿ ಕೆರಳಿದರು.

ಅವನು ಕೋಪದಿಂದ "ತೊಂದರೆ ಬಂದರೆ ಅನುಭವಿಸಲೇಬೇಕು. ಅದಕ್ಕೆ ನಾನೇನು ಮಾಡಲು ಸಾಧ್ಯ? ಚರ್ಚೆ ಬೇಡ. ಎರಡು ದಿವಸ ಕಳೆದ ಮೇಲೆ ಬನ್ನಿ" ಎಂದನು.

ಪಾಪ... ರೂಪಾಳ ತಂದೆ-ತಾಯಿ ಮತ್ತು ಹತ್ತಿರದ ಇಬ್ಬರು ಸಂಬಂಧಿಕರು ಬೇಸರದಿಂದ ಹೊರಗೆ ಬಂದರು.

"ಈಗ ಏನು ಮಾಡೋಣ?"

ಮಗ "ಅಪ್ಪ... ಇನ್ಸ್‌ಪೆಕ್ಟರ್ ಹೇಳಿರೋದು ಸರಿಯಾಗಿದೆ. ನಾವು ಅವಳ ಲವ್ ಬಗ್ಗೆ ತನಿಖೆ ಮಾಡಿದರೆ ಸತ್ಯಾಂಶ ಗೊತ್ತಾಗುತ್ತೆ" ಎಂದರು.

"ಯಾರನ್ನ ತನಿಖೆ ಮಾಡ್ತೀಯ?"

"ರೂಪಾಳ ಕೊಲೀಸ್ ಫ್ರೆಂಡ್ಸ್‌ಗೆ ಎಲ್ಲಾ ಗೊತ್ತಿರುತ್ತೆ. ಅವರನ್ನ ಕೇಳಿದರೆ ಗೊತ್ತಾಗುತ್ತೆ."

●●●

ಪೊಲೀಸ್ ಸ್ಟೇಷನ್ನಿನ ಚೇಂಬರ್‌ನಲ್ಲಿ ಈ ಪೊಲೀಸ್ ಅಧಿಕಾರಿ ಮಾಧವನ್ ಸಿಗರೇಟ್ ಸೇದುತ್ತಾ ಬೇರೆ ಯಾವುದೋ ಕೇಸಿನ ಬಗ್ಗೆ ತಲೆಕೆಡಿಸಿಕೊಂಡಿದ್ದಾನೆ.

ಇದೆಂತಹ ವಿಪರ್ಯಾಸ! ಪೊಲೀಸ್ ಸ್ಟೇಷನ್‌ನಲ್ಲಿ ಸಿಗರೇಟ್ ಸೇದುವುದು ಅಪರಾಧ ಅಲ್ವ. ಇವರೇ ಹೀಗೆ ಮಾಡಿದರೆ ಏನು ಗತಿ? ಫೋನ್ ಕಾಲ್ ಬಂದಿತು.

ಮಿನಿಸ್ಟರ್ ದೇವಕುಮಾರನ್ ಮಾಡಿರೋದ್ರಿಂದ ಸಡಗರದಿಂದ ಅಟೆಂಡ್ ಮಾಡಿ "ಹಾಂ... ಹೇಳಿ... ಹೇಳಿ ಸಾಹೇಬರೆ" ಎಂದನು.

"ರೂಪ ನಾಯರ್ ಕಡೆಯವರು ಕಂಪ್ಲೆಂಟ್ ಕೊಡಲು ಬಂದಿದ್ರು ಅಲ್ವ?"

ಮಾಧವನ್ ಆಶ್ಚರ್ಯದಿಂದ "ಸಾರ್... ಇದು ನಿಮಗೆ ಹೇಗೆ ಗೊತ್ತಾಯಿತು?"

ಮಿನಿಸ್ಟರ್ ರೇಗುತ್ತಾ "ಏ... ಪ್ರಶ್ನೆ ಕೇಳ್ಬೇಡ. ಕೇಳಿದ್ದಕ್ಕೆ ಉತ್ತರಿಸು."

"ಸಾರಿ ಸಾರ್.'

"ಕಂಪ್ಲೆಂಟ್ ತಗೊಂಡ್ರ?"

"ಇಲ್ಲ... ಇಲ್ಲ ಸಾರ್."

"ಗುಡ್... ವೆರಿಗುಡ್... ನಾನು ಹೇಳುವತನಕ ಯುವತಿಯರು ಕಣ್ಮರೆ ಆಗಿರುವ ಕೇಸಿನ ಕಂಪ್ಲೆಂಟ್ ತಗೋಬೇಡ."

"ಆಗಲಿ ಸಾರ್."

"ಇದು ಹೆಚ್ಚು ಪ್ರಚಾರ ಆಗಬಾರದು."

"ಕಂಟ್ರೋಲ್ ಮಾಡ್ತೇನಿ ಸಾರ್."

●●●

ರೂಪ ನಾಯರ್‌ಗೆ ಎಚ್ಚರವಾಗಿದ್ದು ಬೆಳಿಗ್ಗೆ ಎಂಟು ಗಂಟೆಯ ನಂತರ.

ತಲೆ ಧೀಂ ಗುಡುತ್ತಿದೆ.

ಅಮಲಿನ ಮಂಪರು ಕಡಿಮೆ ಆಗಿಲ್ಲ.

ತೇಲುಗಣ್ಣು ಮಾಡುತ್ತಿದ್ದಾಳೆ.

'ಕಿರ್' ಎಂಬ ಶಬ್ದದೊಂದಿಗೆ ಬಾಗಿಲು ತೆರೆದುಕೊಂಡಿತು. ಅವಳು ತುಂಬಾ ಕಷ್ಟದಿಂದ ಕಣ್ಣುಗಳನ್ನು ಅರಳಿಸಿ ನೋಡಿದಳು.

ಇಬ್ಬರು ಹೆಂಗಸರು ನಿಂತಿದ್ದಾರೆ.

ಅವಳು ತಡವರಿಸುತ್ತಾ "ನೀವಿಬ್ಬರು ಯಾರು? ನಾನು ಇಲ್ಲಿಗೆ ಹೇಗೆ ಬಂದೆ? ಕರೆದುಕೊಂಡು ಬಂದವರು ಯಾರು? ಇದು ಯಾರ ಮನೆ?"

ಆ ಹೆಂಗಸರು ಅವಳ ತೋಳನ್ನು ಹಿಡಿದು ಎಳೆದಾಡುತ್ತಾ "ಏ... ನಿನ್ನ ಪ್ರಶ್ನೆಗಳಿಗೆ ಉತ್ತರ ಕೊಡಲು ಟೈಂ ಇಲ್ಲ. ನನ್ನ ಜೊತೆ ಬಾ" ಎಂದು ಬಲವಂತವಾಗಿ ಎಳೆದುಕೊಂಡು ಹೊರಟರು.

ಅವಳು ಕೊಸರಾಡಿದಳು.

"ಎಲ್ಲಿಗೆ ಕರ್ಕೊಂಡು ಹೋಗ್ತಾ ಇದ್ದೀರ?"

ಅವರಿಂದ ಉತ್ತರ ಬರಲಿಲ್ಲ.

ಬಾತ್‌ರೂಮಿಗೆ ಕರೆದುಕೊಂಡು ಬಂದರು. ಅಲ್ಲಿನ ದೃಶ್ಯ ಕಂಡು ಗಾಬರಿಯಾದರು.

ಸಗಣಿಯ ನೀರು ತುಂಬಿರುವ ಪಾತ್ರೆ. ಮತ್ತೊಂದರಲ್ಲಿ ಗಂಜಲ. ರಕ್ತ ತುಂಬಿರುವ ಮಡಕೆ. ಕಾಗೆ-ಹುಲಿಯ ಮಲ. ಕೆಂಪು-ಅರಿಶಿನದ ನೀರು.

ಅವಳು ಗಾಬರಿಯಿಂದ "ಏ... ಇದೆಲ್ಲಾ ಏನು ನನಗೆ ಏನು ಮಾಡ್ತೀರ?"

ಒಬ್ಬಳು ಗಡುಸಾಗಿ ಹೇಳಿದಳು.

"ಸ್ನಾನ ಮಾಡಿಸುತ್ತೇನೆ."

ರೂಪ "ಬೇಡ... ಬೇಡ..." ಎಂದು ಕೊಸರಾಡುತ್ತಾ ಓಡಲು ಪ್ರಯತ್ನ ಮಾಡಿದಳು.

ಹೆಂಗಸರು ಅವಳನ್ನು ಅದುಮಿ ಒತ್ತಿಕೊಂಡು ಪ್ರಾರಂಭ ಮಾಡಿದರು.

ರಕ್ತದ ಅಭಿಷೇಕ.

ಅವಳ ತಲೆಯ ಮೇಲಿಂದ ರಕ್ತ ಸುರಿದರು. ಅವಳ ಇಡೀ ಶರೀರ ಕೆಂಪು ಕೆಂಪಾಗಿದೆ.

ಅವಳು ವಿರೋಧಿಸುತ್ತಿದ್ದಾಳೆ. ಆ ಹೆಂಗಸರು ಕೆರಳಿದರು. ಅವಳ ಕೆನ್ನೆಗೆ ಹೊಡೆದರು. ನೋವಿನಿಂದ ಕಿರುಚಿದಳು. ಅವಳನ್ನು ಹಿಡಿದು ಎಳೆದಾಡುತ್ತಾ ಈಗ ಸಗಣಿ ಕರಿದ್ದ ನೀರನ್ನು ಸುರಿದರು. ನಂತರ ಗಂಜಲದ ಸ್ನಾನ ಮಾಡಿಸಿದರು. ಇದಾದ ಮೇಲೆ ಅದಕ್ಕೆ ಸಿದ್ದರಾದರು.

ಅವಳನ್ನು ರೂಮಿನ ನೆಲದ ಮೇಲೆ ತೂರಿಸಿದರು. ಅವಳಿಗೆ ಆ ದೃಶ್ಯ ಕಂಡಿತು.

ಹಂದಿಯ ಮಲ. ಮೊಲದ ಮೂತ್ರ.

ಬೇರೆ-ಬೇರೆ ಕೀಟಗಳ ಅಮೇಧ್ಯ (ಮಲ ಮತ್ತು ಮೂತ್ರ) ಕಂಡು ಬಂದಿತು.

ಅವಳ ಬೆತ್ತಲೆ ಮೈ ತುಂಬಾ ಒಂದೊಂದಾಗಿ ಎಲ್ಲವನ್ನೂ ಬಳಿಯುತ್ತಿದ್ದಾರೆ. ಅಬ್ಬ ಹೇಸಿಗೆ ಆಗುತ್ತಿದೆ. ವಾಂತಿ ಆಗುವ ಸೆನ್‌ಸೇಷನ್ ಅವಳಲ್ಲಿ ಉಂಟಾಗಿದೆ. ಅಂತಿಮವಾಗಿ ಏನು.

ಮಡಕೆಯಲ್ಲಿದ್ದ ಹೆಂಡವನ್ನು ತಂದು ಅವಳಿಗೆ ಬಲವಂತ ಮಾಡಿ ಕುಡಿಸಿದರು. ವಾಂತಿ ಮಾಡಿಕೊಂಡಳು. ಪುನಹ ಕುಡಿಸಿದರು. ಏನೇನೋ ತಿನ್ನಿಸಿದರು.

ಅವಳು ಅಮಲಿನಲ್ಲಿರುವಾಗ ಆ ಹೆಂಗಸರು ಅವಳನ್ನು ಬಲವಂತವಾಗಿ ನಡೆಸಿಕೊಂಡು ಅಲ್ಲಿಂದ ಹೊರಟರು.

ಅಲ್ಲೇನು ನಡೆಯಿತು?

ರಾತ್ರಿ ಎರಡು ಗಂಟೆಯತನಕ ತುಂಬಾ ವಿಚಿತ್ರವಾದ-ವಿಲಕ್ಷಣವಾದ ಸನ್ನಿವೇಶ ಸೃಷ್ಟಿ ಆಗಿತ್ತು ಎಂದು ಹೇಳಬಹುದು.

●●●

ರೂಪಾಳ ತಂದೆ-ತಾಯಿಗೆ ಈಗ ಭಯ, ಆತಂಕ ಜಾಸ್ತಿ ಆಗಿದೆ. ಯಾಕೆ ಅಂದರೆ ಎರಡು ದಿನಗಳಾದರೂ ಮಗಳು ಮನೆಗೆ ಬಂದಿರಲಿಲ್ಲ. ಪೊಲೀಸ್ ಸ್ಟೇಷನ್‌ಗೆ ಬಂದಾಗ ಬೆಳಗಿನ ಹನ್ನೊಂದು ಗಂಟೆ ಆಗಿತ್ತು.

ಪೊಲೀಸ್ ಅಧಿಕಾರಿ ಮಾಧವನ್ "ಏ ಪುನಹ ಯಾಕೆ ಬಂದಿದ್ದೀರ" ಎಂದು ರೇಗಿದನು.

"ಕಂಪ್ಲೆಂಟ್ ಕೊಡಬೇಕು ಸಾರ್."

"ಯಾಕೆ... ಏನಾಗಿದೆ?"

"ನನ್ನ ಮಗಳು ಕಣ್ಮರೆಯಾಗಿದ್ದಾಳೆ ಅಂತ ಅವತ್ತು ಕಂಪ್ಲೆಂಟ್ ಕೊಡಲು ಬಂದಿದ್ದವು."

"ಸರಿ ಈಗ ಯಾಕೆ ಬಂದಿದ್ದೀರ?"

"ಅದೇ... ಅದೇ ಸಾರ್. ನಮ್ಮ ಮಗಳನ್ನು ಹುಡುಕಿ ಕೊಡಿ."

"ಅದರ ಅಗತ್ಯ ಇಲ್ಲ."

"ಸಾರ್... ನೀವು ಏನು ಹೇಳ್ತಾ ಇದ್ದೀರ?'

"ನಿಮ್ಮ ಮಗಳು ಮನೆಗೆ ಬಂದಿದ್ದಾಳೆ ಹೋಗಿ ನೋಡಿ."

ರೂಪ ನಾಯರ್ ತಂದೆಗೆ ಫೋನ್‌ಕಾಲ್ ಬಂದಿತು.

ಮಗ ಫೋನ್ ಮಾಡಿದ್ದಾನೆ.

ಸಂತೋಷ, ಉದ್ವೇಗದಿಂದ ಮಾತಾಡುತ್ತಾ "ಅಪ್ಪ... ರೂಪ ಮನೆಗೆ ಬಂದಿದ್ದಾಳೆ" ಎಂದ ಕೂಡಲೇ ಗಂಡ-ಹೆಂಡತಿ ಕೂಡಲೇ ಹೊರಟರು.

●●●

ರೂಪ ನಾಯರ್ ವಿಕೃತಗೊಂಡಿರುವಂತೆ ಕಾಣುತ್ತಿದ್ದಾಳೆ.

ಅವಳ ಮೈ ತುಂಬಾ ರಕ್ತ , ಅರಿಶಿನ ಮತ್ತು ಬೇರೆ-ಬೇರೆ ಬಣ್ಣಗಳನ್ನು ಬಳಿದಿದ್ದಾರೆ. ಅವಳು ಮನೆಗೆ ಬಂದಿದ್ದರೂ ಸಹ ಅಮಲಿನಿಂದ ಹೊರ ಬಂದಿರಲಿಲ್ಲ.

ಅವಳನ್ನು ಬಾತ್‌ರೂಮಿಗೆ ಕರೆದುಕೊಂಡು ಹೋಗಿ ಬಿಸಿ ನೀರಿನ ಸ್ನಾನ ಮಾಡಿಸಿದರು ಮತ್ತು ಅಮಲು ಕಡಿಮೆಯಾಗಲಿ ಎಂದು ಹೆರಳೆಹಣ್ಣಿನ ಪಾನಕ ಕುಡಿಸಿದರು. ಶುಭ್ರವಾಗಿ ಧರಿಸಿರುವ ಬಟ್ಟೆಗಳನ್ನು ಅವಳಿಗೆ ತೊಡಿಸಿ ಮಲಗಿಸಿದರು. ಮೈತುಂಬಾ ಬೆಚ್ಚಗೆ ಆಗುವಂತೆ ರಗ್ಗನ್ನು ಹೊದೆಸಿ ಮಲಗಿಸಿದರು.

ಅವಳಿಗೆ ಎಚ್ಚರವಾದ ಮೇಲೆ ಎಲ್ಲಾ ಕೇಳಿ ತಿಳಿದುಕೊಂಡರಾಯಿತು ಎಂದುಕೊಂಡರು. ಈ ಆಲೋಚನೆ ಬಂದಿತು. ಪೊಲೀಸ್ ಆಫೀಸರ್ ಮಾಧವನ್‌ಗೆ, ರೂಪ ಮನೆಗೆ ಬಂದಿದ್ದ ಸಂಗತಿ ಹೇಗೆ ತಿಳಿಯಿತು?

●●●

ಮಧ್ಯಾಹ್ನದ ಸಮಯ! ವೈಶಾಖದ ಸುಡು ಬಿಸಿಲು ದೇಹದ ಬೆವರಿಳಿಸುತ್ತಿದೆ.

ಬಡಕುಟುಂಬದ ಮನೆ. ಆಟೋ ಮನೆಯ ಮುಂದೆ ಬಂದು ನಿಂತಿತು. ಅದರಿಂದ ಶ್ರೀಮಂತಿಕೆಯ ಲಕ್ಷಣಗಳಿರುವ ಹೆಂಗಸು ಇಳಿದರು.

ಆಕೆ ಸ್ನೇಹಲತಾ ನಾಯರ್! ಈ ಬಡವರ ಕುಟುಂಬದ ಮನೆಗೆ ದಿಢೀರ್ ಅಂತ ಬಂದಿರೋದು ಎಲ್ಲರಿಗೂ ಆಶ್ಚರ್ಯ ಮತ್ತು ಆನಂದ ಉಂಟಾಗುತ್ತಿದೆ. ರೋಮಾಂಚನ ಆಗುತ್ತಿದೆ.

ಸ್ನೇಹಲತಾ ನಾಯರ್ ಈ ಬಡಕುಟುಂಬದ 'ಮಾನಿನಿ ಪಳನಿಯಮ್ಮ' ಎಂಬ ಹೆಸರಿನ ಯಜಮಾನಿಯ ಕಸಿನ್ ಸಿಸ್ಟರ್.

ಆಕೆ ಏನು ಆಗಾಗ ಈ ಮನೆಗೆ ಬರುತ್ತಿರಲಿಲ್ಲ ಮತ್ತು

☞14

13 ☜
ಫೋನ್ ಮಾಡಿ ಕಷ್ಟಸುಖ ವಿಚಾರಿಸಿಕೊಳ್ಳುತ್ತಿರಲಿಲ್ಲ. ಈಗ ದಿಢೀರ್ ಅಂತ ಬಂದಿರೋದ್ರಿಂದ ಆಶ್ಚರ್ಯವಾಗುತ್ತಿದೆ.

ಮಾನಿನಿ ಪಳನಿಯಮ್ಮ ತುಂಬಾ ಪ್ರೀತಿ, ಅಭಿಮಾನ, ಸಡಗರದಿಂದ ಉಪಚರಿಸಿದರು ಮತ್ತು ಒಳಗೆ ಕರೆತಂದು ಕ್ಷೇಮ ವಿಚಾರಿಸಿದರು. ಆ ಕಾರಣದಿಂದ ಅವರು ಮಗಳನ್ನು ಪರಿಚಯ ಮಾಡಿಸಿದರು. ಆಕೆ ನಾನು ಪರಿಚಯ ಮಾಡಿಸಿದರು. ಆಕೆ "ನಾನು ಬಂದಿರೋದೇ ನಿಮ್ಮ ಮಗಳಿಗೆ ಅನುಕೂಲ ಮಾಡಿಕೊಡಲು ಮತ್ತು ಭವಿಷ್ಯ ರೂಪಿಸಲು ಬಂದಿದ್ದೇನೆ."

ಅವರಿಗೆಲ್ಲಾ ತುಂಬಾ ಖುಷಿಯಾಗಿದೆ.

ಮಗಳು ದೇವಕಾಂತೆ...!

ಸ್ನೇಹಲತಾ ನಾಯರ್ ಅವರು ತುಂಬಾ ಮೆಲ್ಲಗೆ "ನಿನ್ನ ಮಗಳಿಗೆ ವಯಸ್ಸು ಎಷ್ಟು?"

"ಈಗ ಇಪ್ಪತ್ತು."

"ಅವಳ ನಕ್ಷತ್ರ ಯಾವುದು?

"ಶ್ರಾವಣ ನಕ್ಷತ್ರ."

"ಹುಟ್ಟಿದ ತಿಥಿ ಯಾವುದು?'

"ಪೂರ್ಣ ಸತ್ಯಾಗ್ರಹಣದ ಅಮಾವಾಸ್ಯೆಯ ಪ್ರದೋಷ ಕಾಲದಲ್ಲಿ."

ಸ್ನೇಹಲತಾ ಮುಖ ಬೆಳಗಿತು.

ಆಕೆ ಸಡಗರದಿಂದ ಮಾತಾಡುತ್ತಾ "ನಿನ್ನ ಮಗಳು ತುಂಬಾ ಅದೃಷ್ಟವಂತೆ. ವಳಿಗೆ ಈಗ ಒ ಒಳ್ಳೆಯ ಕಾಲ ಕೂಡಿ ಬಂದಿದೆ" ಎಂದರು.

ಮಾನಿನಿ ಪಳನಿಯಮ್ಮ ಸಂತೋಷ ಮತ್ತು ಸಡಗರದಿಂದ "ಏನು ಅಂತಹ ಅದೃಷ್ಟ ಇದು ನನ್ನ ಮಗಳಿಗೆ ಯಾವುದಾದರೂ ಶ್ರೀಮಂತರ ಸಂಬಂಧ ಕೂಡಿ ಬಂದಿರುವುದೆ" ಎಂದು ಕೇಳಿದರು.

"ಶ್ರೀಮಂತ ಸಂಬಂಧ ಅಲ್ಲ."

"ಹಾಗಾದರೆ ಬೇರೆ ಏನು?"

"ನಿನ್ನ ಮಗಳು ಅಮಾವಾಸ್ಯೆಯ ಸೂರ್ಯಗ್ರಹಣದ ದಿವಸ ಜನಿಸಿದ್ದಾಳೆ. ಅವಳಿಗೆ ನಮ್ಮ ಊರಲ್ಲಿ ಪ್ರದೋಷ ಪೂಜೆ ಮಾಡುತ್ತಾರೆ. ಆ ರೀತಿ ಮಾಡಿದರೆ ಮಳೆ ಬರುತ್ತದೆ. ನಮ್ಮ ಊರಲ್ಲಿ ಮೂರು ವರ್ಷಗಳಿಂದ ಮಳೆ ಬಂದಿಲ್ಲ. ಈ ರೀತಿ ಪೂಜೆ ಮಾಡಿದರೆ ಮಳೆ ಬರುತ್ತದೆ. ನಿನ್ನ ಮಗಳ ನಕ್ಷತ್ರ , ಹುಟ್ಟಿರುವ ದಿನ ಈ ಪೂಜೆಗೆ ತುಂಬಾ ಯೋಗ್ಯವಾಗಿದೆ. ಆದ್ದರಿಂದ ಗ್ರಾಮದವರು ಸೇರಿ ನಿನ್ನ ಮಗಳಿಗೆ ಅಂತ ಹಣ ಕೊಟ್ಟಿದ್ದಾರೆ" ಎಂದು ಒಂದು ಲಕ್ಷ ರೂಪಾಯಿ ತೆಗೆದುಕೊಟ್ಟಳು.

ಒಂದು ಲಕ್ಷ ರೂಪಾಯಿ...! ಇಷ್ಟೊಂದು ಹಣವನ್ನು ಅವರು ನೋಡಿರಲಿಲ್ಲ. ಎಲ್ಲರಿಗೂ ತುಂಬಾ ಖುಷಿಯಾಗಿದೆ.

ಸ್ನೇಹಲತಾ ನಾಯರ್ ಹೇಳಿದಳು "ನಿನ್ನ ಮಗಳು ದೇವಕಾಂತೆ ನನ್ನ ಜೊತೆ ಬರಲಿ. ಅವಳಿಗೆ ಪ್ರದೋಷ ಪೂಜೆ ಮಾಡಿದ ಮೇಲೆ ಮತ್ತೊಂದು ಲಕ್ಷ ರೂಪಾಯಿಯನ್ನ ದೇವದಕ್ಷಿಣೆ ಅಂತ ಕೊಡ್ತಾರೆ. ಜೊತೆಗೆ ಅಕ್ಕಿ, ರಾಗಿ, ಜೋಳ, ಇನ್ನಿತರ ದಿನಸಿ ಸಾಮಾನುಗಳನ್ನು ಸಹ ಕೊಡುತ್ತಾರೆ. ಇದು ತುಂಬಾ ಮುಖ್ಯ."

ಮತ್ತೊಂದು ಲಕ್ಷ ಕೊಡುತ್ತಾರೆ. ಇದೇನು ಸಾಮಾನ್ಯವೆ? ಹೆತ್ತವರು ಒಪ್ಪಿಕೊಂಡರು.

"ಆಗಲಿ... ನಿಮ್ಮ ಜೊತೆ ದೇವಕಾಂತೆಯನ್ನು ಕಳಿಸಿಕೊಡುತ್ತೇನೆ."

ದೇವಕಾಂತೆ ಚಡಪಡಿಸಿದಳು. ಅವಳಿಗೆ ಇಷ್ಟ ಇರಲಿಲ್ಲ. ಆದರೂ ವಿರೋಧಿಸಲಿಲ್ಲ.

ಯಾಕೆ ಅಂದರೆ, ಕಡುಬಡತನದಲ್ಲಿರುವ ತಂದೆ-ತಾಯಿಗೆ ಒಂದು ಲಕ್ಷ ಈಗ ಕೈ ಸೇರಿದೆ. ಆಮೇಲೆ ಅಷ್ಟೇ ಪ್ರಮಾಣದ ಹಣ ಸಿಗುತ್ತದೆ ಎಂಬ ಕಾರಣದಿಂದ ಇದಕ್ಕೆ ಒಪ್ಪಿಕೊಂಡಳು.

"ದೇವಕಾಂತೆ ಬೇಗ ರೆಡಿಯಾಗು."

ಮಾನಿನಿ ಪಳನಿಯಮ್ಮ "ನೀವು ಊಟ ಮಾಡಿಕೊಂಡು ಹೋಗಬೇಕು" ಎಂದು ತುಂಬಾ ಒತ್ತಾಯ ಮಾಡಿದಳು.

ಮುಖ ತೊಳೆದು ಡ್ರೆಸ್ ಬದಲಿಸಿ ಬರುತ್ತೇನೆ ಎಂದು ಹೇಳಿ ದೇವಕಾಂತೆ ಅಲ್ಲಿಂದ ಜಾಗ ಖಾಲಿ ಮಾಡಿದಳು. ಬ್ಯಾಕ್ ಡೋರ್ ಮೂಲಕ ಹೊರಗೆ ಬಂದು ಅಲ್ಲಿಂದ ಅವಳು ಕಾಂಪೌಂಡ್ ಗೋಡೆ ನೆಗೆದು ಬೀದಿಗೆ ಬಂದಳು.

ಅಲ್ಲೊಂದು ಮನೆ ಇದೆ. ಆತ್ಮೀಯ ಗೆಳತಿಯ ಮನೆ. ಅವಳೇ ಶ್ವೇತ ಮೆನನ್...! ಗೆಳತಿಯ ಜೊತೆ ದೇವಕಾಂತೆ ಕೇವಲ ಐದು ನಿಮಿಷಗಳ ಕಾಲ ಮಾತಾಡಿದಳು.

ರೂಪ ನಾಯರ್-ದೇವಕಾಂತೆ ಮತ್ತು ಈ ಶ್ವೇತ ಮೆನನ್ ಆತ್ಮೀಯ ಗೆಳತಿಯರು. ಶಾಕ್‌ನಿಂದ ಚೇತರಿಸಿಕೊಂಡ ನಂತರ ರೂಪ ನಾಯರ್ ಗೆಳತಿಗೆ ಫೋನ್ ಮಾಡಿದ್ದಳು. ತನ್ನ ಅಸಹ್ಯಕರ ಅನುಭವ ಹೇಳಿದ್ದಳು. ಶ್ವೇತ ಭರವಸೆ ನೀಡಿದ್ದಾಳೆ.

ಶ್ವೇತ ಇವರಿಬ್ಬರಂತೆ ಅಲ್ಲ. ಒಂದು ರೀತಿ ಧೈರ್ಯವಂತೆ. ಲೇಡಿ ಬಾಂಡ್ ಎಂದು ಅವಳನ್ನು ಗೆಳತಿಯರು ಕರೆಯುತ್ತಾರೆ.

●●●

ರೂಪ ನಾಯರ್ ತನ್ನ ಕಹಿ ಅನುಭವವನ್ನು ತಂದೆತಾಯಿಗೆ ಹೇಳಿದ್ದಳು. ಹೆಂಡ, ಗಂಜಲ, ಸಗಣಿ, ನೀರು ಪ್ರಾಣಿಗಳ ಮಲ ಮತ್ತು ಮೂತ್ರದಿಂದ ಏನೇನು ಮಾಡಿದ್ದರು ಎಂಬುದನ್ನು ಹೇಳಿದ್ದಳು.

ವಿಪರೀತ ಹೆಂಡ ಕುಡಿಸಿ ಅಮಲಿಗೆ ತಳ್ಳಿದ್ದರಿಂದ ನಂತರ ಏನಾಯಿತು ಎಂಬುದು ಅವಳಿಗೆ ಗೊತ್ತಿರಲಿಲ್ಲ.

ಒಂದು ಹಂತ ಏನು? ಅವಳ ಮೇಲೆ ಅತ್ಯಾಚಾರ ಮಾಡಿರಲಿಲ್ಲ. ಬೆತ್ತಲೆಯಾಗಿ ಕೂರಿಸಿ ಏನೇನೋ ಪೂಜೆ ಮಾಡಿದ್ದರು ಎಂಬುದು ಪೂಜಾ ದ್ರವ್ಯಗಳಿಂದ, ದಾಸವಾಳದ ಹೂವಿನ ಹಾರಗಳಿಂದ ಗೊತ್ತಾಗಿತ್ತು. ನಂತರ ಅವಳನ್ನು ಕಾರಲ್ಲಿ ಮನೆಗೆ ಕರೆದುಕೊಂಡು ಬಂದು ಬಿಟ್ಟಿದ್ದರು.

ಪೊಲೀಸ್ ಅಧಿಕಾರಿ ಮಾಧವನ್ ಫೋನ್ ಮಾಡಿ ಎಚ್ಚರಿಸಿದ್ದನು.

ಇದು ಬಹಿರಂಗ ಆಗಬಾರದು. ಆ ರೀತಿ ಮಾಡಿದರೆ ನಿಮಗೆ ತೊಂದರೆ ಆಗುತ್ತೆ.

ಯಾವ ರೀತಿ ತೊಂದರೆ ಆಗುತ್ತೆ?

ಊಹೆ ಮಾಡಲು ಸಾಧ್ಯ ಇಲ್ಲ! ಈ ಎಚ್ಚರಿಕೆ ಸಂದೇಶ ಬರುವ ಮೊದಲೇ ರೂಪ ನಾಯರ್, ತನ್ನ ಗೆಳತಿ ಶ್ವೇತ ಮೆನನ್‌ಗೆ ಎಲ್ಲಾ ಹೇಳಿದ್ದಳು.

●●●

ಕಾರು ವೇಗವಾಗಿ ಹೋಗುತ್ತಿದೆ. ಹಿಂಭಾಗದ ಸೀಟಲ್ಲಿ ಸ್ನೇಹಲತಾ ನಾಯರ್ ಮತ್ತು ದೇವಕಾಂತೆ ಕುಳಿತಿದ್ದಾರೆ. ಡ್ರೈವರ್ ಕಾರು ಓಡಿಸುತ್ತಿದ್ದಾನೆ.

ದೇವಕಾಂತೆ ಉದ್ವಿಗ್ನಳಾಗಿದ್ದಾಳೆ. ಶರೀರದಲ್ಲಿ ಕಂಪನವಾಗುತ್ತಿದೆ. ಮುಖ ಬೆವರುತ್ತಿದೆ.

ಸ್ನೇಹಲತಾ ನಾಯರ್ "ಹೆದರಬೇಡ ದೇವಕಾಂತೆ... ನಿನಗೇನೂ ತೊಂದರೆ ಆಗೋಲ್ಲ. ಒಂದು ಮನೆಯಲ್ಲಿ ಎರಡು ದಿನಗಳ ಕಾಲ ನಿನ್ನ ಪೂಜೆ ಮಾಡುತ್ತಾರೆ. ಆಮೇಲೆ ಎಲ್ಲಾ ಸರಿಯಾಗುತ್ತದೆ.

ಎರಡು ಗಂಟೆಗಳ ಪ್ರಮಾಣದ ನಂತರ ನಿರ್ಜನ ಪ್ರದೇಶದಲ್ಲಿರುವ ಒಂಟಿ ಮನೆ ಮುಂದೆ ನಿಂತುಕೊಂಡಿತು.

ದಟ್ಟವಾದ ಅರಣ್ಯವಿದೆ. ಆ ಮನೆ ಇರುವ ಜಾಗದಿಂದ ದಕ್ಷಿಣ ಭಾಗದಲ್ಲಿ ಸ್ಮಶಾನ ಇದೆ...! ಅವಳ ತಲೆ, ಬೆನ್ನು ಸವರಿ ಧೈರ್ಯ ಹೇಳುತ್ತಾ ಒಳಗೆ ಕರೆದುಕೊಂಡು ಬಂದರು.

ಸ್ನೇಹಲತಾ ನಾಯರ್ ಹೊರಗೆ ಬಂದು ಇಬ್ಬರು ಹೆಂಗಸರಲ್ಲಿ ಒಬ್ಬರಿಗೆ ಫೋನ್ ಮಾಡಿ ರೇಗಿದಳು. "ನೀವಿಬ್ಬರು ಎಲ್ಲಿದ್ದೀರ?"

"ಮನೆಯಲ್ಲಿದ್ದೇವೆ."

"ದೇವಕಾಂತೆ ಎಂಬ ಅಮಾವಾಸ್ಯೆಯ ಹೆಣ್ಣು ಬಂದಿದ್ದಾಳೆ. ಅವಳು ರೂಮಲ್ಲಿ ಇದ್ದಾಳೆ."

'ಈಗಲೇ ಬರುತ್ತೇನೆ."

"ಅವಳನ್ನು ಹೆದರಿಸಬೇಡಿ. ತುಂಬಾ ಬುದ್ಧಿವಂತಿಕೆ ಉಪಯೋಗಿಸಿ ಎಲ್ಲಾ ರೆಡಿ ಮಾಡಿಸಿ.

"ಆಗಲಿ ಸ್ನೇಹಲತಾ ಮೇಡಂ."

ಅರ್ಧ ಗಂಟೆ ಕಳೆಯಿತು.

ಸ್ನೇಹಲತಾ ನಾಯರ್ ತನ್ನ ರೂಮಲ್ಲಿ ವಿಸ್ಕಿ ಕುಡಿಯುತ್ತಾ ಮಟನ್ ತಿನ್ನುತ್ತಿದ್ದಾಳೆ.

ಆ ಹೆಂಗಸರು ಬಂದರು.

ಇವಳಿಗೆ ಗೌರವ ತೋರಿದರು.

"ಇವಳ ಹೆಸರೇನು ಮೇಡಂ?'

"ದೇವಕಾಂತೆ ಅಂತ."

"ಓಕೆ ಥ್ಯಾಂಕ್ ಯೂ ಮೇಡಂ."

●●●

ಆ ಹೆಂಗಸರು ರೂಮಿನೊಳಗೆ ಬಂದರು. ಅವಳು ಆ ರೂಮಲ್ಲಿ, ಮಂಚದ ಮೇಲೆ ಮಂಕಾಗಿ ಕುಳಿತಿದ್ದಾಳೆ. ಹೆಂಗಸರು ಕೂಗಿ ರೇಗಾಡಿದರು. ಅವಳು ತಲೆಯಾಡಿಸಿ ಅವರಿಬ್ಬರು ಸೇರಿ ರೂಪಾಳನ್ನು ರೂಮಿನಿಂದ ತಂದರು. ಹಿಂಭಾಗದಲ್ಲಿ ಔಟ್‌ಹೌಸ್ ರೀತಿ ಇರುವ ಮನೆಯಲ್ಲಿ ಕೂರಿಸಿದರು.

ಆ ದೃಶ್ಯ ಕಂಡಿತು! ಸಗಣಿಯ ನೀರು ಗಂಜಲದದ ಪಾತ್ರೆ ರಕ್ತ ತುಂಬಿರುವ ಮಡಕೆ ಹಂದಿಯ ಮಲ ಇತರೆ ಪ್ರಾಣಿಗಳ ಮೂತ್ರ.

ಅವರು ಅಂದರೆ ಆ ಇಬ್ಬರು ದಡೂತಿ ಹೆಂಗಸರು ಇವಳ ಉಡುಪುಗಳನ್ನು ತೆಗೆಯುತ್ತಾ "ನಿನ್ನ ಹೆಸರೇನು?"

ಅವಳು ನಿಜ ಹೇಳಿದಳು.

"ಶ್ವೇತ ಮೆನನ್...!'

ಆ ಹೆಂಗಸರು ಪರಸ್ಪರ ಮುಖ ನೋಡಿಕೊಂಡರು. ಸಾಹೇಬರ ದೂರದ ಸಂಬಂಧಿ ಸ್ನೇಹಲತಾ ನಾಯರ್ ಹೇಳಿದ್ದೇನು?

ದೇವಕಾಂತೆ ಅಂತ ಹೆಸರು. ಅಮಾವಾಸ್ಯೆ ಗ್ರಹಣದ ದಿನ ಹುಟ್ಟಿದ್ದಾಳೆ. ಪ್ರದೋಷ ಬದಿಗೆ ಪೂರಕವಾಗಿದೆ ಇವಳ ನಕ್ಷತ್ರ, ಹುಟ್ಟಿದ ದಿನ.

"ಏ... ನಿನ್ನ ಹೆಸರು ದೇವಕಾಂತೆ ಅಲ್ವ" ಎಂದು ಅಬ್ಬರಿಸಿದರು.

"ನನಗೆ ಎರಡು ಹೆಸರಿದೆ. ಮನೇಲಿ ಶ್ವೇತ ಅಂತ ಕರೀತಾರೆ. ಮತ್ತೊಂದು ದಾಖಲೆ ಹೆಸರು ದೇವಕಾಂತೆ.'

"ನಿನ್ನ ಜನ್ಮದಿನ ಯಾವುದು?"

"ಸೂರ್ಯಗ್ರಹಣ ಅಮಾವಾಸ್ಯೆ."

ಈಗ ಅವರಿಬ್ಬರಿಗೆ ಸಮಾಧಾನವಾಯಿತು. ಅವಳ ಸೀರೆ ಎಳೆದು ಎಸೆದರು.

ಉಳಿದ ಉಡುಪುಗಳನ್ನು ತೆಗೆದರು. ಶ್ವೇತ ಪೂರ್ಣ ಬೆತ್ತಲಾಗಿದ್ದಾಳೆ. ಪ್ರಾರಂಭವಾಯಿತು ಸ್ನಾನ! ಹಂದಿಯ ಮಲ ಮತ್ತು ಇತರೆ ಪ್ರಾಣಿಗಳ ಮೂತ್ರವನ್ನು ಅವಳ ತಲೆಯಿಂದ ಸುರಿದರು. ಅಬ್ಬ... ಗಬ್ಬು ವಾಸನೆ ಬರುತ್ತಿದೆ. ಅವಳಿಂದ ಸಹಿಸಲಾಗುತ್ತಿಲ್ಲ. ಆದರೂ ಸಹ ಕಂಟ್ರೋಲ್ ಮಾಡಿಕೊಳ್ಳುತ್ತಿದ್ದಾಳೆ. ನಂತರ ರಕ್ತದ ಅಭಿಷೇಕ. ಸಗಣಿ ನೀರನ್ನು ಹಾಕಿದರು. ಕೊನೆಗೆ ಹೆಂಡ ಸುರಿದರು.

ಸಾಮಾನ್ಯವಾಗಿದ್ದರೆ ಈ ವಾಸನೆಯಿಂದ ಮೂರ್ಛೆ ಹೋಗುತ್ತಿದ್ದರು. ಆದರೆ ಇವಳು ತುಂಬಾ ಕಷ್ಟದಿಂದ ಸಹಿಸಿಕೊಂಡಿದ್ದಾಳೆ. ಈಗ ಆಗುತ್ತಿಲ್ಲ.

ಅವಳನ್ನು ಎಳೆದು ಮೇಲೆತ್ತಿ ಈಗ ಬೇರೊಂದು ಕೊಠಡಿಗೆ ಕರೆದುಕೊಂಡು ಬಂದರು.

ಅಲ್ಲಿ ವಿಸ್ಕಿ ಇದೆ!

ತಿನ್ನುವ ಪದಾರ್ಥಗಳಿವೆ.

ಅವಳೀಗ ಜಾಗೃತಳಾದಳು. ಹೆಂಡ ಕುಡಿದರೆ ನಾನು ಅಂದುಕೊಂಡಿರೋದನ್ನ ಸಾಧನೆ ಮಾಡಲು ಆಗೋಲ್ಲ ಎಂದುಕೊಂಡು, ಮೊದಲೇ ರೆಡಿ ಮಾಡಿಕೊಂಡು ತಂದಿದ್ದ ಕ್ಲೋರೆ ಸ್ಪ್ರೇಯರ್ ಕೊಳವೆ ತೆಗೆದಳು.

ತಾನು ಮೂಗು ಮುಚ್ಚಿಕೊಂಡಳು.

ಉಸಿರಾಟ ನಿಯಂತ್ರಿಸಿದಳು.

ಅವಳೀಗ ಕೊಳವೆಯನ್ನು ಅವರಿಗೆ ಕಾಣದ ರೀತಿ ಹಿಡಿದು ಬಟನ್ ಒತ್ತಿದಳು. ತುಂಬಾ ಕಡಿಮೆ ಪ್ರಮಾಣದಲ್ಲಿ ವಾಸನೆ ಹರಡಿದ ಕೂಡಲೇ ಆಫ್ ಮಾಡಿದಳು.

ಆ ಹೆಂಗಸರಿಬ್ಬರು ನಿಂತಲ್ಲೇ ತೂರಾಡುತ್ತಾ ತೇಲುಗಣ್ಣು ಮಾಡಿದರು. ನಿಂತ ಜಾಗದಲ್ಲಿ ಕುಸಿದರು.

ಶ್ವೇತ ಮೆನನ್ ಈಗ ಹೆಂಡವನ್ನು ತುಂಬಾ ದೂರದಲ್ಲಿದ್ದ ಹಾಳುಬಾವಿಗೆ ಸುರಿದಳು. ಅದರ ತುಂಬಾ ನೀರು ತುಂಬಿದಳು.

ನೀರಿಗೆ ತುಂಬಾ ಕಡಿಮೆ ಪ್ರಮಾಣದಲ್ಲಿ ಸಗಣಿ ಕದರಿದಳು.

ನೀರಿನ ಬಣ್ಣ ಸ್ವಲ್ಪ ಬದಲಾಯಿತು.

ಆ ಹೆಂಗಸರಿಗೆ ಎಚ್ಚರವಾಗಿ ಎಲ್ಲಾ ಕಡೆ ನೋಡಿದರು.

ಶ್ವೇತ ಅರೆಪ್ರಜ್ಞಾ ಸ್ಥಿತಿಯಲ್ಲಿದ್ದಾಳೆ.

ಹೆಂಡ ಕಾಲಿಯಾಗಿದೆ.

ಅವರಿಗೆ ಅನುಮಾನ ಬಂದು ಅವಳ ಹತ್ತಿರ ಬಂದು ಎಳೆದಾಡಿದರು. ಅಮಲಿನಲ್ಲಿರುವಂತೆ ನಾಟಕ ಆಡಿದಳು.

ಅಂತಿಮವಾಗಿ ಏನಾಯಿತು?

ಅವಳನ್ನು ಬೆತ್ತಲೆ ಸ್ಥಿತಿಯಲ್ಲಿ ಹತ್ತಿರದಲ್ಲೇ ಇರುವ ಸ್ಮಶಾನಕ್ಕೆ ಕರೆತಂದರು.

ಅಗ್ನಿಕುಂಡ ಉರಿಯುತ್ತಿದೆ.

ಮುಂಭಾಗದಲ್ಲಿ ತ್ರಿಶೂಲ ಇದೆ.

ಭಯಂಕರ ಆಕೃತಿಯ ವಿಗ್ರಹ ಇದೆ.

ರಕ್ತ ಲೇಪನ ಮಾಡಿದ್ದಾರೆ.

ತಲೆಬುರುಡೆಗಳ ಹಾರ ಇದೆ.

ಅಗ್ನಿಕುಂಡದ ಹತ್ತಿರ ಮಾಂತ್ರಿಕ ಮಂತ್ರ ಹೇಳುತ್ತಾ ಆವಾಹನೆ ಮಾಡುತ್ತಿದ್ದಾನೆ.

ಎದುರಿಗೆ ಮತ್ತೊಬ್ಬರಿದ್ದಾರೆ.

ಶ್ವೇತ ಮೆನನ್ ಗುರುತಿಸಿದಳು.

ಅವಳು ಈ ರಾಜ್ಯದ ಪ್ರಭಾವಶಾಲಿ ಸಚಿವರಾಗಿರುವ ಚಿದಂಬರಂ ದೇವ...!

ಪ್ರಾಯ ಅರವತ್ತು.

ಆದರೂ ಸಹ ಬೆತ್ತಲಾಗಿದ್ದಾರೆ. ಕತ್ತಿನಲ್ಲಿ ಮೂಳೆಗಳ ಹಾರ ಇದೆ. ಮಾಂತ್ರಿಕ ಹೇಳಿದಂತೆ ಅವರು ಆ ಭಯಂಕರ ವಿಗ್ರಹಕ್ಕೆ ಪೂಜೆ ಮಾಡುತ್ತಿದ್ದಾರೆ. ಇದು ಏನು ಸಾಮಾನ್ಯವೆ?

ಮಾಂತ್ರಿಕ "ಸಾಹೇಬರೆ... ಇನ್ನು ಹತ್ತು ನಿಮಿಷಗಳ ನಂತರ ಪೂಜೆ ಮುಗಿಯುತ್ತದೆ. ಗ್ರಹಣದ ಅಮಾವಾಸ್ಯೆ ದಿನ ಹುಟ್ಟಿರುವ ಇವಳನ್ನು ಬಲಿ ಕೊಟ್ಟರೆ ನಿಮ್ಮ ಮಹಾ ಅಪೇಕ್ಷೆ ಈಡೇರುತ್ತದೆ.

ಆ ಮಹಾ ಅಪೇಕ್ಷೆ ಏನು?

ಪ್ರಾಯದ ಶಕ್ತಿ ಬರಬೇಕು.

ಸದಾ ವೀರ್ಯ ಸಂಪನ್ನವಾಗಿರಬೇಕು.

ಎಷ್ಟೇ ವಯಸ್ಸಾಗಿದ್ದರೂ ನನಗೆ ಪ್ರಾಯದ ಯುವತಿನ ನಿರಂತರವಾಗಿ ಅನುಭವಿಸಿ ಅವಳಿಗೆ ಸುಖ ಕೊಡುವ ಶಕ್ತಿ ಬರಬೇಕು.

ಇದಕ್ಕಾಗಿ ಮಾಂತ್ರಿಕನಿಗೆ ಕೆಲವು ಲಕ್ಷಗಳು ಹಣ ಕೊಟ್ಟು 'ಭೋಗವತಿ' ಎಂಬ ಕ್ಷುದ್ರಶಕ್ತಿಗೆ ಪೂಜೆ ಮಾಡಿದ್ದರು. ಎರಡು ತಿಂಗಳುಗಳ ಕಾಲ ಬೇರೆ ಬೇರೆ ಯುವತಿಯರನ್ನು ಕರೆಸಿಕೊಂಡು ಪೂಜೆ ಮಾಡಿ ಮನೆಗೆ ಕಳಿಸುತ್ತಿದ್ದರು.

ಅಮಾವಾಸ್ಯೆಯ ದಿನ ಕೊನೆಯ ಪೂಜೆ! ಅಮಾವಾಸ್ಯೆಯ ದಿನ ಜನಿಸಿದ್ದ ಯುವತಿನ ಮಂತ್ರಿಗಳ ಸಂಬಂಧಿ ಸ್ನೇಹಲತಾ ನಾಯರ್ ಶೋಧನೆ ಮಾಡಿ ಕರೆತಂದಿದ್ದಳು.

ಮಾಂತ್ರಿಕ ಮಂತ್ರ ಹೇಳುತ್ತಾ ಬಲಿ ಕತ್ತಿ ಎತ್ತಿ ಬೀಸಿದನು.

ಶ್ವೇತಾ ಮೆನನ್ ಸರ್ರನೆ ಹೊರಳಿ ಎದ್ದು ನಿಂತು, ಆ ಮಾಂತ್ರಿಕನ ಬೆನ್ನಿನ ಭಾಗದ ಮೇಲೆ ಬಲವಾಗಿ ಜಾಡಿಸಿದಳು. ಅವನು ತೂರಾಡುತ್ತಾ ಅಗ್ನಿಕುಂಡದಲ್ಲಿ ಬಿದ್ದನು.

ಮಂತ್ರಿ ಚಿದಂಬರಂ ದೇವ ಗಾಬರಿಯಾದನು. ಈ ಲೇಡಿ ಬಾಂಡ್ ಅವನ ಮೇಲೆ ಆಕ್ರಮಣ ಮಾಡಿ ಪ್ರಜ್ಞೆ ತಪ್ಪಿಸಿದ್ದಳು.

ದೇವಕಾಂತೆ ಎಲ್ಲಿ?

ದೇವಕಾಂತೆ ಕಾರಲ್ಲಿ ಸ್ನೇಹಲತಾ ನಾಯರ್ ಜೊತೆ ಬಂದಿದ್ದಳು ನಿಜ. ರೂಮಿಗೆ ಬಂದಾಗ ದೇವಕಾಂತೆಯನ್ನು ಬೇರೊಂದು ರೂಮಿಗೆ ಕಳಿಸಿ ಇವಳು ಆ ಜಾಗದಲ್ಲಿ ಕುಳಿತಿದ್ದಳು. ಇಲ್ಲಿಗೆ ಬರುವ ಮೊದಲೇ ಸುದ್ದಿ ಮಾಧ್ಯಮದವರಿಗೆ ಮತ್ತು ಉನ್ನತ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿದ್ದಳು. ಸುದ್ದಿ ಅಬ್ಬರದ ಪ್ರಚಾರ ಪಡೆದು ಈ ಮಂತ್ರಿ ತನ್ನ ವಿಚಿತ್ರ-ವಿಲಕ್ಷಣ ತೆವಲಿನ ಕಾರಣದಿಂದ ಪೊಲೀಸರ ಅತಿಥಿಯಾದನು.

☯

# ಮಹಿಳೆಯರನ್ನು ಬಲಿ ಪಡೆದ ಮೈಕ್ರೋ ಫೈನಾನ್ಸ್!

7 ☞

ಸಣ್ಣಪುಟ್ಟ ಕೂಲಿ ಕೆಲಸ ಮೇಕೆ, ಕುರಿ ಸಾಕಾಣಿಕೆಯೇ ಕಾಯಕವಾಗಿದೆ. ಇಂತಹವರಿಗೆ ಹೆಚ್ಚಿನ ಸಾಲ ಕೊಟ್ಟು ಈಗ ಸಾಲ ತೀರಿಸುವಂತೆ ಒತ್ತಾಯಿಸುತ್ತಿರುವ ಫೈನಾನ್ಸ್ ಸಿಬ್ಬಂದಿಗಳ ಕಿರುಕುಳ ತಾಳಲಾರದೆ ಮನೆ ಬಿಟ್ಟು



ಬಿಡದಿ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ

ಹೋಗಿದ್ದಾರೆ. ಈ ಕೋನಮುದ್ದನಹಳ್ಳಿಯಲ್ಲಿ ಇರುಳಿಗ ಕುಟುಂಬದ ಸುಮಾರು 60 ಮನೆಗಳಿದ್ದು, ಎಲ್ಲರೂ ಕೂಲಿನಾಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ಇವರುಗಳು ಮೊದಮೊದಲು ಸರಿಯಾಗಿ ಸಾಲ ಪಾವತಿ ಮಾಡುತ್ತಿದ್ದರು ಎಂದು ಇನ್ನೂ ಹೆಚ್ಚಿನ ಸಾಲ ನೀಡಿದ್ದಾರೆ. ಈಗ ಕುಟುಂಬ ಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ. ಅಂದು ಕೂಲಿ ಮಾಡಿದರೆ ಜೀವನ ಎನ್ನುವ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ಪ್ರತೀ ವಾರ ಕಂತು ರೂಪದಲ್ಲಿ ಹಣ ಪಾವತಿಸಬೇಕಿರುವ ಕಾರಣ ಪಡೆದ ಸಾಲ ಕಟ್ಟಲಾಗದೆ ಕಿರುಕುಳವನ್ನು ಸಹಿಸಲಾಗದೆ ಊರು ಬಿಡುವಂತಾಗಿದೆ ಎನ್ನುತ್ತಾರೆ ಸ್ಥಳೀಯ ಗ್ರಾಮಸ್ಥರು.


ಬಾಗಿಲು ಹಾಕಿಕೊಂಡು ಊರು ಬಿಟ್ಟಿರುವುದು

ಕೋನಮುದ್ದನಹಳ್ಳಿ ಗ್ರಾಮದಲ್ಲಿ ಸಾಕಿದ್ದ ಕುರಿ, ಮೇಕೆ, ಹಸುಗಳು ಸೇರಿ ಕೋಳಿಯನ್ನು ಮಾರಾಟ ಮಾಡಿದರೂ ಸಹ ಸಾಲ ತೀರದೆ ಇದ್ದ ಕಾರಣ ಊರಲ್ಲೇ ಹಿರಿಯರನ್ನು ಮನೆಯಲ್ಲೇ ಬಿಟ್ಟು ಶಾಲೆಗೆ ಹೋಗುತ್ತಿದ್ದ ಮಕ್ಕಳನ್ನು ಜತೆಯಲ್ಲೇ ಕರೆದುಕೊಂಡು ಹೋಗಿದ್ದಾರೆ. ಒಂದು ಕುಟುಂಬ ಆನೇಕಲ್, ಮತ್ತೊಂದು ಕುಟುಂಬ ತಮಿಳುನಾಡು ಹೀಗೆ ಪ್ರತಿಯೊಂದು ಕುಟುಂಬಗಳು ನಾನಾ ಕಡೆ ಹೋಗಿವೆ.

ಈ ಗ್ರಾಮದಲ್ಲಿ 15 ದಿನಗಳ ಹಿಂದೆ ಮೂಗಯ್ಯನ ಪತ್ನಿ ಸಾಕಮ್ಮ ಎಂಬುವರು ನಿಧನರಾಗಿದ್ದರು. ಅವರ ಸಾವು ಮತ್ತು ಉತ್ತರಾಧಿ ಕ್ರಿಯೆಗೆ ಅವರ ಇಬ್ಬರು ಮಕ್ಕಳು


ಪೊಲೀಸ್ ಠಾಣೆಗೆ ದೂರು ಕೊಡಲು ಬಂದ ಮೃತೆಯ ಮಗ

ಬರಲೇಯಿಲ್ಲ. ಮೂರು ಜನ ಮಕ್ಕಳಲ್ಲಿ ಒಬ್ಬ ಮಗ ಮಾತ್ರ ಕಾರ್ಯ ಮಾಡಿ ಮುಗಿಸಿದ್ದಾನೆ. ಇನ್ನಿಬ್ಬರು ಮಕ್ಕಳು ಸಾಲಕ್ಕೆ ಹೆದರಿ ಬರಲಿಲ್ಲ ಎನ್ನುತ್ತಾರೆ ಗ್ರಾಮಸ್ಥರು.

ರಾಮನಗರ ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ಮೈಕ್ರೋ ಫೈನಾನ್ಸ್‌ಗಳ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದಲ್ಲಿ ಕಿರುಸಾಲ ನೀಡುತ್ತಿದ್ದು, ಆರಂಭದಲ್ಲಿ ಮಹಿಳೆಯರನ್ನು ಪುಸಲಾಯಿಸಿ ಸಾಲ ನೀಡುವ ಈ ಫೈನಾನ್ಸ್‌ಗಳು ಸಾಲ ವಸೂಲಿ ಹೆಸರಲ್ಲಿ ಕಿರುಕುಳ ನೀಡುತ್ತಿದ್ದು ಇವರ ಕಿರುಕುಳಕ್ಕೆ ಹೆದರಿ ಸಾಲ ಪಡೆದವರು ರಾತ್ರೋ ರಾತ್ರಿ ಊರು ಬಿಟ್ಟಿರುವ ಉದಾಹರಣೆಗಳು ಸಾಕಷ್ಟಿವೆ.

ಮುಂದಿನ ದಿನಗಳಲ್ಲಿ ಸಾಲ ಕೊಟ್ಟು ಹೆಚ್ಚಿನ ಬಡ್ಡಿ ಪೀಕುತ್ತಿರುವ ಮತ್ತು ಕಿರುಕುಳ ನೀಡುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಸರ್ಕಾರ ಕಡಿವಾಣ ಹಾಕುತ್ತದೋ, ಇಲ್ಲವೋ ಕಾದು ನೋಡಬೇಕಿದೆ.

# ಹಿರಿಯ ನಟ ಸರಿಗಮ ವಿಜಿ ನಿಧನ

ಕನ್ನಡ ಚಿತ್ರರಂಗ ಹಾಗೂ ಟಿವಿ ಲೋಕದ ಹಿರಿಯ ನಟ ಸರಿಗಮ ವಿಜಿ ಅವರು ನಿಧನ ಹೊಂದಿದ್ದಾರೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಅವರು ಕಳೆದ ಕೆಲ ದಿನಗಳಿಂದಲೂ ಅನಾರೋಗ್ಯ ದಿಂದ ಬಳಲುತ್ತಿದ್ದರು.

ವಿಜಿ ಅವರಿಗೆ ಶ್ವಾಸಕೋಶದ ಸಮಸ್ಯೆ ಎದುರಾಗಿತ್ತು. ಯಶವಂತಪುರದ ಬಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು, ನ್ಯುಮೋನಿಯಾಗೆ



ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ವಿಜಿ ಅವರು ನಿಧನ ಹೊಂದಿದ್ದಾರೆ. ಸರಿಗಮ ವಿಜಿ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ವಿಜಿ ಅವರದ್ದು ಬಲು ಸುದೀರ್ಘವಾದ ಸಿನಿಮಾ ಮತ್ತು ರಂಗಭೂಮಿ ಪಯಣ. ನಾಟಕಗಳಲ್ಲಿ ನಟಿಸುತ್ತಿದ್ದ ವಿಜಿ ಅವರ ಸಂಸಾರದಲ್ಲಿ ಸರಿಗಮ ನಾಟಕ ಬಹಳ ಹೆಸರು ಕೊಟ್ಟಿತ್ತು. ಇದೇ ಕಾರಣಕ್ಕೆ ಅವರಿಗೆ ಸರಿಗಮ ವಿಜಿ ಹೆಸರು ಬಂದಿತ್ತು. ನಾಟಕದಿಂದ ಸಿನಿಮಾಕ್ಕೆ ಪದಾರ್ಪಣೆ ಮಾಡಿದ ವಿಜಿ ಅವರು ಹಲವಾರು ಸಿನಿಮಾಗಳಲ್ಲಿ ಪೋಷಕ ಪಾತ್ರ, ಹಾಸ್ಯ ಪಾತ್ರ, ಕೆಲವೆಡೆ ವಿಲನ್ ಪಾತ್ರಗಳಲ್ಲಿಯೂ ನಟಿಸಿದ್ದಾರೆ.

ಆರಂಭದಲ್ಲಿ ಕೆಲ ಸಿನಿಮಾಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ವಿಜಿ ಅವರು ಬೆಳುವಲದ ಮಡಿಲಲ್ಲಿ ಸಿನಿಮಾ ಮೂಲಕ ನಟರಾಗಿ ಎಂಟ್ರಿ ಕೊಟ್ಟರು. ಅದಾದ ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಲೇ ಸಾಗಿದ ವಿಜಿ ಅವರು 2018ರ ಹೊತ್ತಿಗೆ ವಿಜಯ್ ಕನ್ನಡದಲ್ಲಿ ಸುಮಾರು 269 ಚಿತ್ರಗಳಲ್ಲಿ ನಟಿಸಿದ್ದರು. 80 ಕ್ಕೂ ಹೆಚ್ಚು ಸಿನಿಮಾಗಳಿಗೆ ಸಹಾಯಕ ನಿರ್ದೇಶಕನಾಗಿಯೂ ಕೆಲಸ ಮಾಡಿದ್ದರು. ಟಿವಿ ಧಾರಾವಾಹಿಗಳಲ್ಲಿ ನಟಿಸಿದ್ದ ಸರಿಗಮ ವಿಜಿ ಅವರು ಕೆಲ ಧಾರಾವಾಹಿಗಳ ನಿರ್ದೇಶನವನ್ನೂ ಮಾಡಿದ್ದರು.

# ಗೃಹಿಣಿಯೊಬ್ಬಳ ಹೋರಾಟದ ಕಥೆ ಶೋಷಿತೆ

ಜಾನ್ವಿ ರಾಯಲ ಅವರ ಅಭಿನಯದ ಇತ್ತೀಚೆಗೆ ತೆರೆಕಂಡ ಶೋಷಿತೆ ಚಿತ್ರಕ್ಕೆ ಪ್ರೇಕ್ಷಕರಿಂದ, ಪತ್ರಿಕೆಗಳಿಂದ ಉತ್ತಮ ಚಿತ್ರವೆಂಬ ವಿಮರ್ಶೆ ಬಂದಿದ್ದರೂ ಸಹ ಚಿತ್ರ ಗಳಿಕೆಯಲ್ಲಿ ಹಿಂದೇಟು ಹಾಕಿತ್ತು. ಶಶಿಧರ್ ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ, ಬರೆದು ಸಂಕಲನದ ಜತೆಗೆ ನಿರ್ದೇಶನದ ಜವಾಬ್ದಾರಿಯನ್ನು ಕೂಡ ಹೊತ್ತುಕೊಂಡಿದ್ದರು. 'ಎ ನೇಚರ್ ವ್ಯೂ ಔಟ್‌ಡೋರ್ ಕಾರ್ನಿವಲ್ ಪ್ರೊಡಕ್ಷನ್ಸ್' ಮೂಲಕ ಶಿರಿಷಾ ಆಳ್ವ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದರು.

ನಿರ್ದೇಶಕರು ಎಂಟು ತಿಂಗಳಿಗೂ ಹೆಚ್ಚು ಕಾಲ ಪ್ರಮುಖ ಓಟಿಟಿ ಪ್ಲಾಟ್‌ಫಾರ್ಮ್‌ಗಳನ್ನು ಸಂಪರ್ಕಿಸಿದರೂ, ಹೊಸಬರ ಕನ್ನಡ ಚಿತ್ರ ಎಂಬ ಕಾರಣದಿಂದ ಹಲವಾರು ಓಟಿಟಿಗಳಲ್ಲಿ ಸ್ಪಂದನೆ ನೀಡದೆ ಹೋದರು. ಇದರಿಂದ ವಿಚಲಿತಗೊಳ್ಳದ ತಂಡವು ಕಂಟೆಂಟ್ ತೂಕವಾಗಿದ್ದರೆ ಜನ ಕಂಡಿತ ಚಿತ್ರವನ್ನು ನೋಡುತ್ತಾರೆ ಎಂಬ ನಂಬಿಕೆಯಿಂದ ಈ ಚಿತ್ರವನ್ನು ತೆಲುಗು ಭಾಷೆಗೆ ಡಬ್ ಮಾಡಿ 'ಶ್ರೀಮತಿ' ಎಂಬ ಹೆಸರಿನೊಂದಿಗೆ ಯುಟ್ಯೂಬ್‌ನಲ್ಲಿ ಬಿಡುಗಡೆ ಮಾಡಲಾಯಿತು. ಆಶ್ಚರ್ಯ ಎನ್ನುವಂತೆ ಒಂದು ತಿಂಗಳೊಳಗೆ 20 ಲಕ್ಷ ಜನ ಈ ಚಿತ್ರವನ್ನು ನೋಡಿ ಮೆಚ್ಚಿಕೊಂಡಿದ್ದಾರೆ. ಕೆಲವರು ಸಿನಿಮಾವನ್ನು ಇಷ್ಟಪಟ್ಟು ಟಿಕೆಟ್ ದರದ ಹಣವನ್ನು ನಿರ್ಮಾಪಕರಿಗೆ ಪಾವತಿಸಿದ್ದಾರೆ.

ಜತೆಗೆ ಕನ್ನಡದಲ್ಲೂ ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಿದ ಒಂದೇ ವಾರದಲ್ಲಿ ಇಪ್ಪತ್ತೈದು ಲಕ್ಷ ನಿಮಿಷಗಳಷ್ಟು ವೀಕ್ಷಣೆಯಾಗಿದೆ, ಇಷ್ಟಪಡುವ ಅಂಶಗಳಿದ್ದರೆ, ಯಾವುದೇ ಸ್ಟಾರ್ ಇಲ್ಲದಿದ್ದರೂ ಇಂತಹ ಸಿನಿಮಾವನ್ನು ಜನ ಮೆಚ್ಚಿಕೊಳ್ಳುತ್ತಾರೆ ಎಂಬುದನ್ನು ಶೋಷಿತೆ ಸಿನಿಮಾ ಸಾಬೀತು ಮಾಡಿದೆ. ಮುಂದೆಯೂ ತಮಿಳು, ಹಿಂದಿ ಮತ್ತು ಮಲೆಯಾಳಂ ಭಾಷೆಗೆ ಡಬ್ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಅಲ್ಲದೆ ಮೊದಲ ಪ್ಯಾನ್ ಇಂಡಿಯಾ ಯೂಟ್ಯೂಬ್ ಚಿತ್ರವೆಂಬ ಹೆಗ್ಗಳಿಕೆಗೆ ಶೋಷಿತೆ ಚಿತ್ರ ಪಾತ್ರವಾಗಿದೆ.

ಮಧ್ಯಮ ವರ್ಗದ ಗೃಹಿಣಿಯೊಬ್ಬಳ ಹೋರಾಟ. ಸಮಾಜದಲ್ಲಿ ಮತ್ತೊಬ್ಬರ ದೌರ್ಬಲ್ಯ, ಒಳ್ಳೆಯತನವನ್ನೇ ಲಾಭವನ್ನಾಗಿ ಮಾಡಿಕೊಳ್ಳುವವರು, ತರಾತುರಿಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳಿಂದ ಸಂಕಷ್ಟಕ್ಕೆ ಸಿಲುಕುವುದು. ಪತಿ-ಪತ್ನಿಯರ ಸಂಬಂಧದಲ್ಲಿನ ತಪ್ಪುಗಳಿಗೆ ಒಬ್ಬರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ ಎನ್ನುವ ಸಂದೇಶವನ್ನು ಈ ಚಿತ್ರದ ಮೂಲಕ ಹೇಳಲಾಗಿದೆ.



ನಿರೂಪಕಿ ಹಾಗೂ ಹದಿನೈದಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಡಾ.ಜಾನ್ವಿ ರಾಯಲ ಅವರು ಈ ಚಿತ್ರದ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಕೆಜಿಎಫ್' ಚಿತ್ರದಲ್ಲಿ ಅಭಿನಯಿಸಿರುವ ರೂಪಾ ರಾಯಪ್ಪ ಚಿತ್ರದ ಖಳನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ಪ್ರಶಾಂತ್, ದರ್ಶನ್ ಹಾಗೂ ಹಲವಾರು ರಂಗಭೂಮಿ ಕಲಾವಿದರುಗಳು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ, ನೋಡುಗರಿಗೆ ಕನೆಕ್ಟ್ ಆಗುವ ಕಥಾಹಂದರ ಇರುವ ಶೋಷಿತೆ ಚಿತ್ರವು ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನೂ ಹೊತ್ತು ತಂದಿದೆ.

# ತುಪ್ಪದ ಹುಡುಗಿಯ ವಿರುದ್ಧದ ಕೇಸ್ ಖುಲಾಸೆ



ಡ್ರಗ್ಸ್ ಕೇಸ್‌ನಲ್ಲಿ ಸಿಲುಕಿದ್ದ ಸ್ಯಾಂಡಲ್‌ವುಡ್ ನಟಿ ರಾಗಿಣಿ ದ್ವಿವೇದಿ ಮೇಲಿನ ಪ್ರಕರಣ ಸಾಕ್ಷ್ಯಾಧಾರ ಕೊರತೆಯಿಂದ ಖುಲಾಸೆಗೊಂಡಿದೆ. ಇದರೊಂದಿಗೆ ಅವರ ವೃತ್ತಿ ಜೀವನಕ್ಕೆ ಎದುರಾಗಿದ್ದ ದೊಡ್ಡ ಕಳಂಕ ತೊಳೆದು ಹೋದಂತಾಗಿದೆ. 2020 ರಲ್ಲಿ ಸ್ಯಾಂಡಲ್‌ವುಡ್‌ನಲ್ಲಿ ಡ್ರಗ್ಸ್ ಕೇಸ್ ಭಾರೀ ಸದ್ದು ಮಾಡಿತ್ತು. ಪ್ರಕರಣದಲ್ಲಿ ನಟಿ ರಾಗಿಣಿ ದ್ವಿವೇದಿ ಮತ್ತು ಸಂಜನಾ ಗಲ್ರಾನಿ ವಿರುದ್ಧ ಆರೋಪ ಕೇಳಿಬಂದಿತ್ತು. ಈ ಹಿನ್ನಲೆಯಲ್ಲಿ ಇಬ್ಬರನ್ನೂ ಬಂಧಿಸಲಾಗಿತ್ತು. ಇಬ್ಬರೂ ನಟಿಯರು ಪರಪ್ಪನ ಅಗ್ರಹಾರದಲ್ಲಿ ಕೆಲವು ದಿನ ಕಳೆದಿದ್ದರು.

ಇದಾದ ಬಳಿಕ ಜಾಮೀನು ಪಡೆದು ಹೊರ ಬಂದಿದ್ದರು. ಆದರೂ ಈ ಪ್ರಕರಣ ರಾಗಿಣಿ ವೃತ್ತಿ ಜೀವನಕ್ಕೂ ಸಾಕಷ್ಟು ಹೊಡೆತ ನೀಡಿತ್ತು. ಇದೀಗ ನಟಿಯ ವಿರುದ್ಧ ಯಾವುದೇ ಸಾಕ್ಷ್ಯಾಧಾರ ಸಿಗದ ಹಿನ್ನಲೆಯಲ್ಲಿ ನಿರಪರಾಧಿ ಎಂದು ಹೈಕೋರ್ಟ್ ಖುಲಾಸೆಗೊಳಿಸಿದೆ. ಡ್ರಗ್ಸ್ ಮಾಫಿಯಾದೊಂದಿಗೆ ನಂಟು ಹೊಂದಿದ ಆರೋಪ ರಾಗಿಣಿ ಮೇಲೆ ಇತ್ತು. ಪಾರ್ಟಿ ಆಯೋಜಿಸಿ ಡ್ರಗ್ಸ್ ಬಳಕೆಗೂ ಅವರು ಅವಕಾಶ ಮಾಡಿಕೊಟ್ಟಿದ್ದರು ಎನ್ನಲಾಗಿತ್ತು. ಈ ಕಾರಣಕ್ಕೆ ಎನ್‌ಡಿಪಿಎಸ್ ಆ್ಯಕ್ಟ್ ಅಡಿಯಲ್ಲಿ ಅವರ ವಿರುದ್ಧ ಕೇಸ್ ದಾಖಲಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ಸಾಕ್ಷ್ಯಾಧಾರ ಸಿಕ್ಕಿಲ್ಲ ಎನ್ನಲಾಗಿದೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 19.1.2025

# ಅಡ್ವೆಂಚರಸ್ ಡ್ರಾಮಾ ಚಿತ್ರ 'ಪಾರು ಪಾರ್ವತಿ'


ಅಯೋಗ್ಯ-2 ಚಿತ್ರದಲ್ಲಿ ನೀನಾಸಂ ಸತೀಶ್, ರಚಿತಾ ರಾಮ್

ಐಟ ಬ್ಯಾಕ್‌ಗ್ರೌಂಡ್‌ನಿಂದ ಬಂದ ಪಿ.ಬಿ. ಪ್ರೇಮನಾಥ್ ಅವರು ಎಯ್ಟೀನ್ ಥರ್ಟಿಸಿಕ್ಸ್ ಪಿಕ್ಚರ್ಸ್ ಬ್ಯಾನರ್‌ನಲ್ಲಿ ನಿರ್ಮಿಸಿರುವ ಚಿತ್ರ ಪಾರು




ಪಾರ್ವತಿ. ಜನವರಿ 31 ರಂದು ತೆರೆಗೆ ಬರುತ್ತಿರುವ ಈ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ದೀಪಿಕಾದಾಸ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರಕ್ಕೆ ರೋಹಿತ್ ಕೀರ್ತಿ ಕಥೆ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ದೀಪಿಕಾದಾಸ್, ಪೂನಂ ಸಿರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಪಾರು ಪಾರ್ವತಿ ಚಿತ್ರದ ನಾಲ್ಕನೇ ಪಾತ್ರಧಾರಿಯನ್ನು ಇತ್ತೀಚೆಗೆ ಚಿತ್ರತಂಡ ಪರಿಚಯಿಸುವ ಜತೆಗೆ ಚಿತ್ರದ ಬಿಡುಗಡೆ ದಿನಾಂಕವನ್ನು ಸಹ ಘೋಷಿಸಿತು. ಆ ಪ್ರಮುಖ ಪಾತ್ರಧಾರಿ ಬೇರೆ ಯಾರೂ ಅಲ್ಲ, ಚಿತ್ರದಲ್ಲಿ ಎಂಟು ರಾಜ್ಯಗಳನ್ನು ಸುತ್ತಿರುವ ಒಂದು ಕಾರು. ಈ ವಿಷಯಗಳ ಬಗ್ಗೆ ಮಾಹಿತಿ ನೀಡಲು ಆಯೋಜಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಚಿತ್ರತಂಡ ಮಾತನಾಡಿದ್ದು ಹೀಗೆ.

ನಿರ್ದೇಶಕ ರೋಹಿತ್ ಕೀರ್ತಿ ಮಾತನಾಡುತ್ತ ಇದೊಂದು ಟ್ರಾವೆಲ್ ಅಡ್ವೆಂಚರಸ್ ಡ್ರಾಮ ಚಿತ್ರ. ಚಿತ್ರದ ಕಥೆ ದೀಪಿಕಾದಾಸ್, ಪೂನಂ ಸಿರ್‌ನಾಯಕ್ ಹಾಗೂ ಫವಾಜ್ ಆಶ್ರಫ್ ಈ ಮೂರು ಪಾತ್ರಗಳ ಜೊತೆ ಸಾಗುತ್ತದೆ. ಇವರೊಟ್ಟಿಗೆ ಮತ್ತೊಂದು ಪ್ರಮುಖ ಪಾತ್ರಧಾರಿ ಎಂದರೆ ಒಂದು ಕಾರು. ಟ್ರಾವೆಲ್ ಕಥೆಯಿರುವ ಚಿತ್ರವಾಗಿರುವುದರಿಂದ ಕಾರು ಸಹ ಒಂದು ಪಾತ್ರವಾಗಿ ಬರುತ್ತದೆ. ಬೆಂಗಳೂರಿನಲ್ಲಿ ಆರಂಭವಾಗುವ ಈ ಜರ್ನಿ ಉತ್ತರಕಾಂಡದಲ್ಲಿ ಕೊನೆಯಾಗುತ್ತೆ. ದೀಪಿಕಾದಾಸ್ ಪಾಯಲ್ ಅನ್ನೋ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಯುಕೆ.ಯಲ್ಲಿ 28 ದಿನ ಶೂಟ್ ಮಾಡಿದ್ದೇವೆ. ಸದ್ಯ ಚಿತ್ರದ ಫೈನಲ್ ಮಿಕ್ಸಿಂಗ್ ಚೆನ್ನೈನಲ್ಲಿ ನಡೀತಿದೆ. ಚಿತ್ರದಲ್ಲಿ ಬರುವ ಪ್ರತಿಯೊಂದು ಲೊಕೇಶನ್‌ಗೂ ಅದರದೇ ಆದ ಪ್ರಾಮುಖ್ಯತೆಯಿದೆ. ಪ್ರಮುಖವಾಗಿ ಉತ್ತರಕಾಂಡವನ್ನು ತುಂಬಾ ಚೆನ್ನಾಗಿ ತೋರಿಸಿದ್ದೇವೆ. ಚಿತ್ರದಲ್ಲಿ 3 ಪಾತ್ರಗಳ ಜತೆ ಕಾರು ಕೂಡ ಒಂದು ಕ್ಯಾರೆಕ್ಟರ್ ಆಗಿ ಮೂಡಿಬರುತ್ತದೆ. ಚಿತ್ರದಲ್ಲಿ ಸಾಕಷ್ಟು ಪ್ರವಾಸಿ ತಾಣಗಳನ್ನು ನೋಡಬಹುದು. ಈವರೆಗೆ ಯಾರೂ ಶೂಟ್ ಮಾಡಿರದ ಲೊಕೇಶನ್‌ಗಳನ್ನು ಹುಡುಕಿ ಶೂಟ್ ಮಾಡಿದ್ದೇವೆ. ಚಿತ್ರದ 9 ಹಾಡುಗಳನ್ನೂ ವಿಶೇಷವಾಗಿ ಮಾಡಿದ್ದೇವೆ, ವೆಸ್ಟರ್ನ್ ಶೈಲಿಯ ಹಾಡುಗಳಿಗೆ ಪ್ರಾಮುಖ್ಯತೆ ನೀಡಿದ್ದೇವೆ. ಇಡೀಚಿತ್ರ ಎಲ್ಲೂ ಸಹ ಬೋರಾಗಲ್ಲ.ಅದಕ್ಕೂ ಮುನ್ನ ಸಂಕ್ರಾಂತಿಗೆ ಚಿತ್ರದ ಟ್ರೇಲರ್ ರಿಲೀಸಾಗಲಿದೆ. ಈ ಕಾರು ಪ್ರಚಾರದ ಸಲುವಾಗಿ ಕರ್ನಾಟಕದಾದ್ಯಂತ ಸಂಚರಿಸಲಿದೆ ಎಂದರು.

ನಾಯಕಿ ದೀಪಿಕಾದಾಸ್ ಮಾತನಾಡುತ್ತ ಇದೊಂದು ಅಡ್ವೆಂಚರಸ್ ಡ್ರಾಮಾ ಚಿತ್ರ. ಇದು ಬರೀ ಟ್ರಾವೆಲ್ ಕಥೆ ಅಲ್ಲ, ಫ್ಯಾಮಿಲಿ ಎಮೋಷನಲ್ ಡ್ರಾಮಾ, ಅಡ್ವೆಂಚರಸ್ ಕಂಟೆಂಟ್ ಕೂಡ ಇದರಲ್ಲಿದೆ. ಟ್ರಾವೆಲಿಂಗ್‌ನಲ್ಲಿ ನಡೆಯೋ ಸಬ್ಜೆಕ್ಟ್, ನಾನು ಆಕ್ಷನ್ ಕೂಡ ಮಾಡಿದ್ದೇನೆ. ಕಾರಿನ ಜತೆ ಒಂದು ಬಾಂಡಿಂಗ್ ಬೆಳೆದಿದೆ. ಎಷ್ಟೋ ಜನರಿಗೆ ಟ್ರಾವೆಲ್ ಮಾಡಬೇಕು ಎನ್ನುವ ಆಸೆ ಇರುತ್ತೆ ಅಂಥವರಿಗೆಲ್ಲ ಒಂದು ಮೆಸೇಜ್ ಈ ಚಿತ್ರದಲ್ಲಿದೆ. ಆಕೆ ಒಬ್ಬ ಬ್ಲಾಗರ್, ಸ್ವಲ್ಪ ರಫ್ ಟಫ್ ಸ್ಟ್ರಾಂಗ್ ಹಾಗೂ ಸ್ಟ್ರೈಟ್ ಫಾರ್ವರ್ಡ್ ಹುಡುಗಿ, 3 ಪಾತ್ರಗಳ ಜತೆ ಒಂದೊಂದು ಪಾತ್ರಗಳು ಬಂದು ಹೋಗುತ್ತೆ.




ಸಣ್ಣ ಮಿಸ್ಟ್ರಿ ಕೂಡ ಆಕೆಯ ಫ್ಲ್ಯಾಷ್ ಬ್ಯಾಕ್‌ನಲ್ಲಿ ಬಂದು ಹೋಗುತ್ತೆ, ಚಿತ್ರದಲ್ಲಿ ಒಂದು ಪಾತ್ರಕ್ಕೆ ಏನೋ ಒಂದು ಉದ್ದೇಶಕ್ಕಾಗಿ ಯುಕೆ ಟ್ರಾವೆಲ್ ಮಾಡಬೇಕಿರುತ್ತೆ. ಅದಕ್ಕೆ ಪಾಯಲ್ ಪಾತ್ರ ಹೇಗೆ ಸಹಕಾರ ನೀಡುತ್ತದೆ ಎಂದು ಹೇಳಲಾಗಿದೆ ಎಂದು ತನ್ನ ಪಾತ್ರವನ್ನು ವಿವರಿಸಿದರು.



# ಸಿದ್ಲಿಂಗು-2 ಅವತಾರದಲ್ಲಿ ಯೋಗಿ

ನೀರ್ ದೋಸೆ ಖ್ಯಾತಿಯ ವಿಜಯಪ್ರಸಾದ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮತ್ತೊಂದು ಚಿತ್ರ ಸಿದ್ಲಿಂಗು-2. ಈಗಾಗಲೇ ತನ್ನ ಚಿತ್ರೀಕರಣವನ್ನು ಪೂರ್ಣಗೊಳಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತೊಡಗಿಕೊಂಡಿರುವ ಸಿದ್ಲಿಂಗು 2 ಚಿತ್ರತಂಡ, ಡಬ್ಬಿಂಗ್ ಕಾರ್ಯವನ್ನೂ ಮುಗಿಸುವ ಹಂತಕ್ಕೆ ತಲುಪಿದ್ದು, ಮುಂದಿನ ವಾರ ಚಿತ್ರದ ನಾಯಕಿ ಸೋನುಗೌಡ ಅವರ ಮೊದಲ ನೋಟವನ್ನ ಬಿಡುಗಡೆ ಮಾಡಲು ಸಜ್ಜಾಗಿದೆ. ಇದರ ಜೊತೆಗೆ ಹಾಡಿನ ಲಿರೀಕಲ್ ವಿಡಿಯೋವನ್ನೂ ಬಿಡುಗಡೆ ಮಾಡಲು ಸಜ್ಜಾಗುತ್ತಿರುವ ಚಿತ್ರತಂಡ ಈ ತಿಂಗಳ ಅಂತ್ಯದಲ್ಲಿ ಮತ್ತೊಂದು ಹಾಡಿನ ಸಂಪೂರ್ಣ ವಿಡಿಯೋವನ್ನ ಬಿಡುಗಡೆ ಮಾಡಲು ಯೋಜನೆ ಹಾಕಿಕೊಂಡಿದೆ.

12 ವರ್ಷಗಳ ಹಿಂದೆ ಸಿದ್ಲಿಂಗು ಚಿತ್ರದ ಮೂಲಕ ನಿರ್ದೇಶಕರಾಗಿ ಬಂದಿದ್ದ ವಿಜಯಪ್ರಸಾದ್ ಅವರು ಆ ಚಿತ್ರದ ಮುಂದುವರೆದ ಭಾಗವಾದ ಸಿದ್ಲಿಂಗು-2 ಚಿತ್ರಕ್ಕೂ ಆಕ್ಷನ ಕಟ್ ಹೇಳಿ, ಬಿಡುಗಡೆಗೆ ಅಣಿಗೊಳಿಸಿದ್ದಾರೆ. ಆ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ ಲೂಸ್ ಮಾದ ಯೋಗಿ ಅವರು ಈ ಚಿತ್ರದಲ್ಲೂ ಸಹ ನಾಯಕನಾಗೇ ಕಾಣಿಸಿಕೊಂಡಿದ್ದಾರೆ. ಚಿತ್ರದ ನಾಯಕಿಯಾಗಿ ಸೋನುಗೌಡ ನಟಿಸಿದ್ದಾರೆ. ಫೆಬ್ರವರಿ 14 ರಂದು ಸಿದ್ಲಿಂಗು -2 ನಾಡಿನ ಸಿನಿ ರಸಿಕರ ಮನೆ ಮನಗಳಿಗೆ ಬರಲಿದ್ದು ಪ್ರೇಕ್ಷಕರ ಪ್ರತಿಕ್ರಿಯೆಗೆ ಚಿತ್ರತಂಡ ಕಾದು ಕುಳಿತಿದೆ.

'ಸಿದ್ಲಿಂಗು 2' ಚಿತ್ರವನ್ನು ಒನ್ಸ್ ಅಪಾನ್ ಎ ಟೈಮ್ ಇನ್ ಜಮಾಲಿಗುಡ್ಡ ಚಿತ್ರವನ್ನು ನಿರ್ಮಿಸಿದ್ದ ಹರಿ ರೆಡ್ಡಿ ಅವರು ನಿರ್ಮಿಸಿದ್ದಾರೆ, ಡಾಲಿ ಧನಂಜಯ್ ಅರ್ಪಿಸುತ್ತಿರೋ ಈ ಚಿತ್ರಕ್ಕೆ ಅನೂಪ್ ಸೀಳಿನ್ ಅವರು ಸಂಗೀತ ಸಂಯೋಜಿಸುತ್ತಿದ್ದಾರೆ.

ಚಿತ್ರದ ಕುರಿತು ಮಾತನಾಡಿರುವ ನಿರ್ದೇಶಕ ವಿಜಯಪ್ರಸಾದ್ ಸಿದ್ಲಿಂಗು ನನ್ನ ಕೆರಿಯರ್‌ನ ಬೆಸ್ಟ್ ಸಿನಿಮಾ, ಆ ಚಿತ್ರದಲ್ಲಿ ನಾಯಕನ ಪಾತ್ರಕ್ಕೆ ಜೀವ ತುಂಬಿದರು ನಟ ಯೋಗಿ. ನನ್ನೊಳಗೆ ಇನ್ನೂ ಉಳಿದಿದ್ದ ತುಮುಲಗಳನ್ನಿಟ್ಟುಕೊಂಡು ಈಗ ಅದರ 2ನೇ ಬಾಗವನ್ನು ಮಾಡಿದ್ದೇನೆ. ಇದೊಂದು ಒಳ್ಳೆಯ ಸಿನಿಮಾ ಆಗುತ್ತದೆ ಎಂಬ ನಂಬಿಕೆ ಇದೆ. ಆರು ತಿಂಗಳು ಮಗುವಿನಿಂದ 60 ವರ್ಷದವರು ಸಹ ಒಟ್ಟಿಗೆ ಕುಳಿತು ನೋಡುವಂಥ ಚಿತ್ರ ಇದಾಗಿದೆ ಎಂದು ಹೇಳಿದರು.

ಇಲ್ಲಿ ಡಬ್ಬಲ್ ಮೀನಿಂಗ್ ಇರಲ್ಲ; ಇದರಲ್ಲಿ ಬರವಣಿಗೆ ಪ್ರಬುದ್ಧವಾಗಿರುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಪರಿಶುದ್ಧವಾಗಿರುತ್ತದೆ ಎನ್ನುವ ಅವರು, ಎಲ್ಲರನ್ನೂ ಕಾಡುವುದರ ಜೊತೆಗೆ ಆಪ್ತವಾಗುತ್ತದೆ. ಖಂಡಿತಾವಾಗಿಯೂ ಹಿಂದಿನ ಎರಡು ಸಿನಿಮಾಗಳಲ್ಲಿದ್ದಂತಹ ಸಂಭಾಷಣೆ ಈ ಚಿತ್ರದಲ್ಲಿ ಇರುವುದಿಲ್ಲ, ಇಲ್ಲಿ ಡಬ್ಬಲ್ ಮೀನಿಂಗ್ ಬದಲು ಮೀನಿಂಗ್ಫುಲ್ ಸಂಭಾಷಣೆಗಳಿರುತ್ತವೆ. ಬೆಂಗಳೂರು, ಮೈಸೂರು ಅಲ್ಲದೆ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ' ಎಂದರು. ಈ ಚಿತ್ರದಲ್ಲೂ ಸುಮನ್ ರಂಗನಾಥ್ ಅವರ ಪಾತ್ರ ಮುಂದುವರೆಯುತ್ತದಂತೆ. ಆದರೆ, ರಮ್ಯಾ ಅವರ ಪಾತ್ರ ಮೊದಲ ಭಾಗದ ಕೊನೆಯಲ್ಲಿ ಸಾಯುವುದರಿಂದ, ಈ ಚಿತ್ರದಲ್ಲಿ ರಮ್ಯಾ ಅವರ ಪಾತ್ರವಿರುವುದಿಲ್ಲ, ಮಿಕ್ಕಂತೆ ಪದ್ಮಜಾ ರಾವ್, ಆಂಟೊನಿ ಕಮಲ್, ಮಹಾಂತೇಶ್ ಮುಂತಾದವರು ನಟಿಸಿದ್ದಾರೆ. ಸಿದ್ಲಿಂಗು ಲೂಸ್ ಮಾದ ಯೋಗಿ ಅವರ ವೃತ್ತಿಜೀವನಕ್ಕೆ ಮಹತ್ವದ ತಿರುವು ಕೊಟ್ಟ ಸಿನಿಮಾ.

Vol. 40 No. 33 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com